ಇನ್ನು ಬಕೆಟ್ ಶಾಪ್ಸ್ ಎನ್ನುವುದರ ಬಗ್ಗೆ ಹೇಳುವುದಾದರೆ ಮದ್ರಾಸಿನಲ್ಲಿ, ಬೊಂಬಾಯಿಯಲ್ಲಿ, ಕಲ್ಕತ್ತದಲ್ಲಿ ಅಥವಾ ಬಾಂಬೆಯಲ್ಲಿ ರೇಸ್ ನಡೆಯುತ್ತಾ ಇದ್ದಾಗ, ಅಲ್ಲಿ ನಡೆಯುತ್ತಿರುವ ರೇಸಿನ ಫಲಿತಾಂಶಗಳ ಕಮ್ಯುನಿಕೇಶನ್ ಇವರಿಗೆ ಕೊಡುತ್ತಾರೆ. ಇಲ್ಲಿ ಜನರು ಇಂಥ ಬಕೆಟ್ ಶಾಪುಗಳಲ್ಲಿ ದುಡ್ಡು ಕಟ್ಟುತ್ತಾರೆ. ಅವರು ಕಟ್ಟಿದ ಕುದುರೆ ಗೆದ್ದರೆ, ಇಲ್ಲಿ ಹಣ ಹಂಚುತ್ತಾರೆ. ಅದಕ್ಕೆ ಕೆಲವು ಏಜೆಂಟರು ಇಲ್ಲಿ ಇದ್ದಾರೆ. ಕಾನೂನು ಪ್ರಕಾರ ಅದು ಇರಕೂಡದು ಎಂದು ಹೇಳಿದರೂ ಕದ್ದು ಇಧನ್ನು ಮಾಡುತ್ತಿದ್ದಾರೆ. ಯಾರನ್ನು ಇದನ್ನು ನೋಡುವುದಕ್ಕೆ ಹಾಕುತ್ತಾರೋ ಅವರನ್ನೇ ಬುಕ್ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ. ಕೆಲವರು ಇದನ್ನು ರೆಗ್ಯುಲರೈಸ್ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಬಾಂಬೆ, ಕಲ್ಕತ್ತ, ಮದ್ರಾಸ್ ಇತ್ಯಾದಿ ಕಡೆಗಳಲ್ಲಿ ರೇಸ್ ನಡೆದರೆ, ಇಲ್ಲಿ ಈ ಬುಕ್ಕಿಗಳು ಇಲ್ಲಿಯ ಜನರಿಂದ ಹಣ ತೆಗೆದುಕೊಳ್ಳುತ್ತಾರೆ, ನಾನು ಇದರ ಬಗ್ಗೆ ಮಾತನಾಡಿದ್ದೇನೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಇನ್ನೊಂದು ರೇಸ್ 9 ಕಿಂಗಳು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾನು ಸ್ಪೆಷಲ್ಸ್ ಹತ್ತಿರ ಮಾತನಾಡುವುದಿಲ್ಲ; ಏಕೆಂದರೆ ಅವರಿಗೆ ಬಡ ಜನರ ಕಷ್ಟ ಗೊತ್ತಾಗುವುದಿಲ್ಲವೆಂದು ಹೇಳಿದ್ದೇನೆ ಇದರ ಬಗ್ಗೆ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ ಈ ವಿಂಟರ್ ರೇಸನ್ನು ತಾವು ನಡೆಸುವುದಕ್ಕೆ ಅವಕಾಶ ಮಾಡಿಕೊಡಬಾರದು ನಾನು ಚೀಫ್ ಸೆಕ್ರೆಟರಿಯವರಿಗೂ ಇದರ ಬಗ್ಗೆ ಹೇಳಿದ್ದೇನೆ. ಅವರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಇಲ್ಲೀಗಲ್ ಬೆಟ್ಟಿಂಗನ್ನು ತಪ್ಪಿಸಬೇಕು. ಇದರಲ್ಲಿ ಪೋಲೀಸರ ಕೈವಾಡ ಸಹ ಇದೆ. ಪೋಲೀಸರ ಕೈವಾಡ ಎಲ್ಲಿಯವರೆಗೆ ಇದೆಯೋ ಅಲ್ಲಿಯವರೆಗೆ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥ ಇಲ್ಲೀಗಲ್ ಬೆಟ್ಟಿಂಗನ್ನು ರೆಗ್ಯುಲರೈಸ್ ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಅದಕ್ಕೆ ತಿದ್ದುಪಡಿ ಮಾಡದೆ ಆಗುವುದಿಲ್ಲ. ಏನೇ ಆಗಲಿ ಈ ಬಕೆಟ್ ಶಾಪ್ಸ್, ಅಥವಾ ಬುಕ್ಕಿಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶ ಇಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇಷ್ಟು ಮಾತ್ರ ತಮಗೆ ಹೇಳಲು ಅಪೇಕ್ಷೆ ಪಡುತ್ತೇನೆ.

Mysore Land Reforms (Amendment) Bill, 1973, as reported by the J.S.C

Motion to Consider

(Debate contd.)

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಸಭೆಯು ಮುಂಪೆ ಮಂಡಿಸಿರತಕ್ಕ ಭೂಸುಧಾರಣೆಯ ವಿಚಾರದಲ್ಲಿ ಈ ಬಿಲ್ಲನ್ನು ವಿರೋಧ ಮಾಡುತ್ತ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಈ ಮಸೂದೆಯಲ್ಲಿ ಹಿಂದೆ ಇದರಲ್ಲಿ ವಿಧವೆಯರಿಗೆ, ಮೈನರ್ ಮಕ್ಕಳಿಗೆ ಮತ್ತು ಅಂಗವಿಕಲರಿಗೆ ಹಾಗೂ ಸೈನ್ಯದಲ್ಲಿರತಕ್ಕವರಿಗೆ ತಮ್ಮ ಭೂಮಿಯನ್ನು ಗೇಣಿಗೆ ಕೊಟ್ಟುಕೊಂಡು ಜೀವನ ಮಾಡುವುದಕ್ಕೆ ಒಂದು ಅವಕಾಶವಿತ್ತು. ಅದನ್ನು ಇದರಲ್ಲಿ ತಪ್ಪಿಸಿದ್ದಾರೆ. ಇಷ್ಟು ಜನರಿಗೆ ಈ ಮಸೂದೆಯಲ್ಲಿ ಯಾವ ರಕ್ಷಣೆಯೂ ಇಲ್ಲ. ಅದರಲ್ಲೂ ಸೈನ್ಯದಲ್ಲಿ ಕೆಲಸ ಮಾಡತಕ್ಕವರಿಗೂ ಕೂಡ ಆ ಅವಕಾಶವನ್ನು ತಪ್ಪಿಸಿರುವುದು ಬಹಳ ಶೋಚನೀಯವಾದದ್ದು.

ಇನ್ನು ನಮ್ಮ ರಾಜ್ಯದಲ್ಲಿ ಅನೇಕ ವಿದ್ಯಾ ಸಂಸ್ಥೆಗಳೂ ಮತ್ತು ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ನುಗಳೂ ಇವೆ. ಇವುಗಳಿಗೆಲ್ಲಾ ಹಿಂದೆ ಇದ್ದ ಕಾನೂನಿನಲ್ಲಿ ಒಂದು ರಿಯಾಯಿತಿಯನ್ನು ಕೊಡಲಾಗಿತ್ತು. ಉದಾಹರಣೆಗೆ ಕೆ. ಎಲ್. ಇ. ಸೊಸೈಟಿ.....

***Matter expunged as ordered by the Chair.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಧವೆಯರಿಗೆ ಪಾತ್ರು ಮೈನರ್ ಮಕ್ಕಳಿದ್ದ ನಂತಾರ ದಲ್ಲಿ ಕೂಲಿ ಆಳುಗಳನ್ನು ಇಟ್ಟು ವ್ಯವಸಾಯ ಮಾಡಿಸುವುದಕ್ಕೆ ಅವಕಾಶವಿದೆ. ಆದುದರಿಂದ ಅದನ್ನು ಗೇಣಿಗೆ ಕೊಡಬಾರದು ಎಂದು ಹೇಳಿದೆ. ಸ್ಥೈರ್ಯದಲ್ಲಿರತಕ್ಕವರಿಗೆ ಆ ರಿಯಾಯಿತಿ ಈಗಲೂ ಇದೆ. ಸಾಮಾನ್ಯವಾಗಿ ಅವಿಭಕ್ತ ಕುಟುಂಬದಲ್ಲಿ ಇರತಕ್ಕ ಯಾರಾದರೂ ಆ ಜಮೀನನ್ನು ನೋಡಿಕೊಂಡು ವ್ಯವಸಾಯ ಮಾಡಿಸಬಹುದು.

ಶ್ರೀ ಕೆ. ಎಂ. ನಾಗಣ್ಣ.—ತಮ್ಮ ಉತ್ತರವನ್ನು ಈಗ ಕೇಳಿದ ಮೇಲೆ ಈಗಲೇ ತಮಗೆ ನಾನು ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಅದೇನೆಂದರೆ ಸುಮಾರು 60-70 ವರ್ಷ ವಯಸ್ಸಾದ ಒಬ್ಬ ವಿಧವೆ ಅಥವಾ ಮೈನರ್ ಮಕ್ಕಳು ಸ್ವಂತವಾಗಿ ವ್ಯವಸಾಯ ಮಾಡಿಸುವುದಕ್ಕೆ ಈ ವಿಧೆಸೆ ಸಾಧ್ಯವುಂಟೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಧವೆಯರು, ಅಪ್ರಾಪ್ತ ವಯಸ್ಕರು ಮುಂತಾದವರೆ ಲ್ಲರೂ ಆಳುಗಳ ಮುಖಾಂತರ ವ್ಯವಸಾಯ ಮಾಡಿಸಬಹುದು. ಅವರು ಪಕ್ಕದಲ್ಲೇ ಇರುವುದರಿಂದ ಹೋಗಿ ನೋಡಬಹುದು. ಅವಿಭಕ್ತ ಕುಟುಂಬದಲ್ಲಿ ಇರುವವರು ಯಾರು ಬೇಕಾದರೂ ಮೇಲ್ವಿ ಚಾರಣೆ ಮಾಡಬಹುದು ಎಂಬ ಅವಕಾಶವಿರುವುದರಿಂದ ಸ್ವತಃ ಸಾಗುವಳಿ ಮಾಡಿಸುವುದಕ್ಕೆ ಅವಕಾಶವಿದೆ, ಹೀಗೆ ಅನೇಕ ಕುಟುಂಬಗಳವರು ಸ್ವತಃ ಮಾಡಿಸುತ್ತಿದ್ದಾರೆ, ಗೇಣಿದಾರರ ಮೂಲಕ ಸಾಗುವಳಿ ಮಾಡಿಸಲು ಅವಕಾಶವಿರಬಾರದೆಂಬುದೇ ಈ ಮಸೂದೆಯ ಉದ್ದೇಶ.

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳುವುದನ್ನು ಹೇಳುತ್ತೇನೆ, ಕೊನೆಯಲ್ಲಿ ಜವಾಬು ಕೊಡುವಾಗ ಯೋಚನೆ ಮಾಡಿ ಯಾವುದು ಒಳ್ಳೆಯದೋ ಆ ರೀತಿ ಮಾಡುವುದಾಗಿ ಹೇಳಬಹುದು. ನನಗೆ ವ್ಯವಸಾಯದಲ್ಲಿ ಅನುಭವವಿಲ್ಲ, ರೋಪದೋಷಗಳಿರಬಹುದು. ನನಗೆ ತಿಳಿದುದನ್ನು ಸಲಹೆ ಮಾಡುತ್ತೇನೆ, ಮಂತ್ರಿಗಳು ಅವರಿಗೆ ನೂಕ್ತ ಕಂಡಂತೆ ಮಾಡಬಹುದು. ಕೆ. ಎಲ್. ಇ. ಸೊಸೈಟಿಯು ವಿದ್ಯಾ ಸಂಸ್ಥೆಗಳನ್ನು ನಡೆಸುವುದು, ಅದು ಎಷ್ಟೋ ಸಾಮಾನ್ಯ ಜನರಿಗೆ ಸಹಾಯ ಮಾಡುವುದು, ಅದು ಎಲ್ಲರಿಗೂ ಗೊತ್ತಿದೆ. ಅದಕ್ಕಿರುವ ಜಮೀನಿನ ಸಹಾಯದಿಂದ ಆ ಸೊಸೈಟಿಯು ವಿದ್ಯಾ ಸಂಸ್ಥೆಗಳನ್ನು ನಡೆಸುವುದು. ಆ ಸಂಸ್ಥೆಯವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ದಾನವಾಗಿ ಕೆಲವರು ಜಮೀನು ಕೊಟ್ಟಿದ್ದಾರೆ. ಅದನ್ನು ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಆ ಜಮೀನಿನ ಉತ್ಪತ್ತಿಯನ್ನು ಸಂಸ್ಥೆಗಾಗಿ ಉಪಯೋಗ ಮಾಡುತ್ತಿರುವಾಗ ಅವರಿಗಿರುವ ಜಮೀನನ್ನು ಆ ಸಂಸ್ಥೆಯವರಿಗೇ ಬಿಡಬೇಕಾದ್ದು ಅವಶ್ಯಕ. ದೇವಸ್ಥಾನಗಳಲ್ಲ ದೇವರಿಗಾಗಿ ಜಮೀನು ಕೊಟ್ಟಿರುತ್ತಾರೆ, ಅದರ ಉತ್ಪತ್ತಿಯಿಂದ ದೇವರ ಸೇವೆ ನಡೆಯಬೇಕು, ಅರ್ಚಕರಿಗೆ ಮನೆ ಕಟ್ಟಿಸಿಕೊಟ್ಟಿದ್ದಾರೆ. ಹಾಗಿರುವಾಗ ಅದು ದೇವಸ್ಥಾನಕ್ಕೆ ಬೇಡ, ತೆಗೆದು ಕೊಳ್ಳುತ್ತೇವೆ ಎಂದು ಹೇಳುವುದು ನ್ಯಾಯವಲ್ಲ. ಈಗ ತಿರುಪತಿ ದೇವಸ್ಥಾನವಿದೆ, ಅದಕ್ಕೆ ಜೆಂಗಳೂರು ಕಾರ್ಪೊರೇಷನ್ನಿಗಿರುವಷ್ಟು ವರಮಾನವಿದೆ, ಅಲ್ಲಿ ಒಳ್ಳೆಯ ಕೆಲಸಮಾಡುವರು ವಿದ್ಯಾ ಸಂಸ್ಥೆಗಳನ್ನು ನಡೆಸುವರು. ಅದಕ್ಕೆ ಬೇಕಾದಷ್ಟು ಜಮೀನಿದೆ. ಒಂದುವೇಳೆ ಆ ದೇವಸ್ಥಾನ ಮೈಸೂರು ದೇಶದಲ್ಲಿದ್ದರೆ ಅದರ ಜಮೀನುಗಳನ್ನೂ ಕೊಡಬೇಕೆಂದು ಹೇಳುತ್ತಿದ್ದರೋ ಏನೋ. ಅಲ್ಲಿ ಲಕ್ಷಾಂತರ ಜನರ ಹಿಕ್ಕೆಯಿಷ್ಟಿಯಿಂದ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಸರಕಾರದ ಕೈಲಿ ಆ ಕೆಲಸವಾಗುವುದಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಇದು ಪಾಸ್ಪವಾಂಶ. ಇಂಥಾದ್ದು ರಾಜ್ಯದಲ್ಲಿ ಎಷ್ಟೋ ಇವೆ. ಅವುಗಳಿಗೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು ಸಲಹೆಮಾಡುತ್ತೇನೆ.

ಇನ್ನು ಜಮೀನುಗಳಿಗೆ ಸಂಬಂಧಪಟ್ಟ ಕೇಸುಗಳು ಸುಮಾರು 60 ಸಾವಿರ ತೀರ್ಮಾನವಾಗಿವೆ. ಇನ್ನೂ ಹತ್ತಾರು ಸಾವಿರ ಇಂಥ ಕೇಸುಗಳಿರಬಹುದು. ಅವನ್ನು ಡಿಸ್‌ಮಿಸ್ ಮಾಡಬೇಕು, ಕೋರ್ಟುಗಳಿಗೆ ಹೋಗುವುದಕ್ಕೆ ಅವಕಾಶವಿಲ್ಲ ಎಂದು ಹೇಳುವುದು ಸರಿಯೇ. 60 ಸಾವಿರ ಜನರಿಗೆ ಸಿಕ್ಕಿದ ರಿಯಾಯಿತಿ ಕೇವಲ 8–10 ಸಾವಿರ ಜನರಿಗೆ ಸಿಕ್ಕದಿರುವುದು ಅವರಿಗೆ ಅವಕಾಶ ಕೊಡದಿರುವುದು ಇದೆ, ಇದಕ್ಕೆ ಕಾರಣವೇನು ?

ಟ್ರಿಬ್ಯೂನಲ್ ಮಾಡಬೇಕೆಂದು ತೀರ್ಮಾನವಾಗಿದೆ. ಅದಕ್ಕೆ ಸ್ಥಳದ ಎಂ. ಎಲ್. ಎ. ಮತ್ತು ಇತರ ನಾಲ್ಕು ಸದಸ್ಯರು ಹಾಕಲ್ಪಡುವರು. ನನಗಾದರೂ ಇದರಿಂದ ಉಪಯೋಗವಿಲ್ಲ ಅನಿಸುವುದು. ಇದರಿಂದ ಅನ್ಯಾಯವಾಗುವುದೆಂದು ನಾನು ಭಾವಿಸಿದ್ದೇನೆ. ಇವಕ್ಕಾಗಿ ಸುಸಹೆಮಾಡುವುದು ಟ್ರಿಬ್ಯೂನಲ್ ಮಾಡಿ, ಆದರೆ ಅದಕ್ಕೆ ಒಬ್ಬರೇ ಜಡ್ಜ್ ಇರಬೇಕು. ಅವರು ನ್ಯಾಯಾಧಿಕಾರಿ ಯಾಗಿರಬೇಕು, ಎಂ. ಎಲ್. ಎ. ಮತ್ತು ಐಸಗೆ ಜನರು ಸದಸ್ಯರಾಗಿರುವುದು ಬೇಡ. ಎಂ. ಎಲ್. ಎ. ಇದ್ದರೆ ಅವರಿಗೆ ಚುನಾವಣೆಯಲ್ಲಿ ಯಾರು ಸಹಾಯ ಮಾಡಿರುವರೋ ಅವರಿಗೆ

ರಿಯಾಯಿತಿ ತೋರಿಸಬೇಕಾದ ಸಂದರ್ಭ ಬರುವುದು. ಇವರ್ಗಿಂದ ನ್ಯಾಯ ಸರಿಯಾಗಿ ಸಿಕ್ಕುವುದಿಲ್ಲ, ಆದುದರಿಂದ ಅಧಿಕಾರದಲ್ಲಿರುವವರನ್ನು ಜುಡಿಷಿಯಲ್ ಇಲಾಖೆ ಅಧಿಕಾರಿಗಳನ್ನು, ಏಕ ನ್ಯಾಯಾಧೀಶರನ್ನು ಟ್ರಿಬ್ಯೂನಲ್‌ಗೆ ಹಾಕುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ. ಮತ್ತೆ ಟ್ರಿಬ್ಯೂನಲ್ ಕೊಟ್ಟ ತೀರ್ಪಿನ ಮೇಲೆ ಅಪೀಲಿಗೆ ಅವಕಾಶವಿಲ್ಲ. ಮರ್ಡರ್ ಮಾಡಿರುವ ಪರಿಗೆ ಅಪೀಲು ಮಾಡಲು ಮತ್ತು ಕೇಸು ನಡೆಸಲು ಹಣ ಕೊಟ್ಟು ವಕೀಲರನ್ನು ಒದಗಿಸುವರು. ಹಾಗಿರುವಾಗ ಜಮೀನು ಕಳೆದುಕೊಂಡವರಿಗೆ ಟ್ರಿಬ್ಯೂನಲ್ ಅನ್ಯಾಯಮಾಡಿದರೆ ನ್ಯಾಯ ಪಡೆಯಲು ಅವಕಾಶ ಇಲ್ಲದಿದ್ದರೆ ಜನರಿಗೆ ಸ್ವಾತಂತ್ರ್ಯ ಬಂದು ಏನು ಪ್ರಯೋಜನವಾದಹಾಗಾಯ್ತು? 1947ರಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಿದೆ ಎಂದು ಹೇಳುವಾಗ ಯಾರಿಗೂ ಕೂಡ ಅನ್ಯಾಯ ಪಾಗಲು ಅವಕಾಶವಿರಬಾರದು. ಅನ್ಯಾಯವಾದರೆ ಬೇರೆ ಕಡೆ ನ್ಯಾಯ ಪಡೆಯಲು ಅವಕಾಶ ವಿಲ್ಲದಿದ್ದರೆ ಜನತೆಗೆ ಸ್ವಾತಂತ್ರ್ಯವಿದ್ದ ಹಾಗಾಯಿತೆ? ಅದರಿಂದ ಪ್ರಯೋಜನ ಬಂದಂತಾಯಿತೆ ಎಂಬುದನ್ನು ಯೋಚನೆಮಾಡಿ. ಅಪೀಲಿಗೆ ಅವಕಾಶವಿರಲೇಬೇಕು ಎಂದು ಮನವಿ ಮಾಡುತ್ತೇನೆ. ಟ್ರಿಬ್ಯೂನಲ್‌ಗೆ ಜಡ್ಜಿಗಳೇ ಇರಬೇಕು, ನ್ಯಾಯಾಧೀಶರೇ ಇರಬೇಕು, ಪಾಸಗಿ ಜನರು ಮತ್ತು ಎಂ. ಎಲ್. ಎ. ಗಳು ಟ್ರಿಬ್ಯೂನಲ್ಲಿನಲ್ಲಿರಬಾರದು, ಟ್ರಿಬ್ಯೂನಲ್ಲಿನಲ್ಲಿನ್ಯಾಯ ದೊರೆಯದಿದ್ದರೆ ಅಪೀಲು ಹೋಗಲು ಅವಕಾಶವಿರಬೇಕೆಂದು ಎಂದು ಸಲಹೆಮಾಡುತ್ತೇನೆ.

ಇನ್ನೊಂದು, ಪ್ಲಾಂಟೇಷನಗೆ ರಿಯಾಯಿತಿ ಕೊಡಲಾಗಿದೆ. ಯಾವ ಕಾರಣದಿಂದ ಕೊಡಲಾಗಿದೆ? ಉಳುವವನೇ ಭೂಮಿಗೆ ಒಡೆಯನಾಗಬೇಕು ಎಂದು ಹೇಳುವಾಗ ಪ್ಲಾಂಟೇಷನ್ ಮಾಲೀಕರು ಸ್ವಂತವಾಗಿ ಮಾಡುವುದಿಲ್ಲ. ಅವರು ಆಳುಗಳಿಂದ ಕೆಲಸ ಮಾಡಿಸುವರು. ಹಾಗಿರುವಾಗ ಅವರಿಗೇಕೆ ರಿಯಾಯಿತಿ ಕೊಡಲಾಗಿದೆ? ಪ್ಲಾಂಟರುಗಳ ಹೆಂಡತಿಮಕ್ಕಳು ಕೆಲಸಮಾಡುವರೇ! ಇದನ್ನು ವಿರೋಧಿಸಬೇಕಾಗಿದೆ. ಇದು ತಾರತಮ್ಯವನ್ನು ಪ್ರೋತ್ಸಾಹ ತೋರಿಸುವುದು. ಇತರರಿಗೆ ಅವಕಾಶ ಕೊಡದೆ ಇವರಿಗೇಕೆ ಅವಕಾಶ ಕೊಡಲಾಗಿದೆ? ಇದು ತಪ್ಪು. ಇದಲ್ಲದೆ ಅವರಿಗೆ ಸಾವಿರಾರು ಎಕರೆ ಜಮೀನಿರುವುದು, ಅಂಥವರಿಗೆ ಸುಮ್ಮನೆ ಬಿಟ್ಟಿದ್ದಾರೆ. ಮುಂದೆ ತೊಂದರೆಯಾಗುವುದೆಂದು ಈಗಾಗಲೇ ಅನೇಕರು ಬಹಳ ಬುದ್ಧಿವಂತರು ಅವರಿಗೆ ಈ ಶಾಸನದಿಂದ ತೊಂದರೆಯಾಗದಹಾಗೆ ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಅವರ ವಿಚಾರದಲ್ಲೇನು ಮಾಡಲಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಅಧ್ಯಕ್ಷರಿಗೆ ಬಹಳ ಜಮೀನಿದೆ, ಅವರು ಏನೋ ಮಾಡಿಕೊಂಡಿರಬಹುದು, ಇಲ್ಲದಿದ್ದರೆ ಸಿಕ್ಕಿಹಾಕಿಕೊಳ್ಳುವರು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನೇನೂ ಮಾಡಿಕೊಂಡಿಲ್ಲ.

ಶ್ರೀ ಕೆ. ಎ. ನಾಗಣ್ಣ.—ನಾವಿರಾರು ಎಕರೆ ಇರುವವರು ಅನೇಕರು ಈ ಕಾನೂನಿನಿಂದ ತಮಗೆ ತೊಂದರೆಯಾಗದಹಾಗೆ ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಅದುದರಿಂದ ಅದಕ್ಕೆ ಅವಕಾಶವಿಲ್ಲದಂತೆ ಈ ಕಾನೂನನ್ನು 1960 ರಿಂದಲೇ ಜಾರಿಗೆ ಕೊಡಬೇಕು. ಅಲ್ಲಿಂದ ಬೇರೆಯವರಿಗೆ ವರ್ಗಾಯಿಸಿರುವುದನ್ನು ರದ್ದುಮಾಡಬೇಕು. ಆಗ ಒಳಗೇ ಈ ರೀತಿ ಮಾಡಿಕೊಂಡಿರುವವರು ಸಿಕ್ಕುವರು. ಅಲ್ಲದೆ ನಾಲ್ಕನೆ ದರ್ಜೆ ನೌಕರರು ಕೊಡುವ ಸಂಬಳ ಸಾಕಾಗುವುದಿಲ್ಲ ಎಂದು ಸ್ವಲ್ಪ ಜಮೀನನ್ನು ಇಟ್ಟುಕೊಂಡು ಅದರಿಂದ ರಾಗಿಯನ್ನು ತಂದು ಕೊಂಡು ಜೀವನ ಮಾಡುತ್ತಿದ್ದಾರೆ. ಅಂಥವರಿಗೆ ತೊಂದರೆಯಾಗಲಿದೆ. ಸಾವಿರಾರು ಎಕರೆ ಗಳಿರುವವರಿಗೆ ಅವಕಾಶ ಕೊಟ್ಟಿರುವಾಗ ಅಂಥ ನೌಕರರಿಗೆ ತೊಂದರೆ ಮಾಡುವುದು ಸರಿಯಲ್ಲ. ಈ ಕಾನೂನಿಗೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡಬೇಕು, 1960 ರಿಂದ ಇದನ್ನು ಜಾರಿಗೆ ಕೊಡಬೇಕು. ಹಾಗೆ ಜಾರಿಗೆ ಕೊಡುವುದರಲ್ಲಿ ಕಾಂಗ್ರೆಸ್ಸಿನವರು ಗಟ್ಟಿಗರು. ಹಿಂದೆ ಆರ್. ಎಂ. ಪಾಟೀಲರು ಮಂತ್ರಿಗಳಾಗಿದ್ದಾಗ ಕಾರ್ಪೊರೇಷನ್ ಕಂದಾಯ ಎರಡು ವರ್ಷದ ಹಿಂದಿನಿಂದ ಕೊಡಬೇಕೆಂದು ಮಾತಿದರು ಹೀಗೆ ಈ ವಿಧೇಯಕವನ್ನು 12 ವರ್ಷ ಹಿಂದಿನಿಂದ ಜಾರಿಗೆ ತಂದರೆ ಬೇನಾಮಿ ಟ್ರಾನ್ಸ್‌ಕ್ಷನ್ ಹೊರಪಟ್ಟು ಪೋಸ್ಟಮಾಡಿರುವುದು ತಿಳಿದು ಆ ವಿಚಾರದಲ್ಲಿ ಸೂಕ್ತ ಕ್ರಮ ಕೈಕೊಳ್ಳಲು ಅವಕಾಶವಾಗುವುದು.

ನನ್ನ ಅಭಿಪ್ರಾಯದ ಪ್ರಕಾರ ರಿಲಿಜಿಯಸ್ ಅಂಡ್ ಧಾರಿಟಿಬಲ್ ಇನ್‌ಸ್ಟಿಟ್ಯೂಷನ್ಸ್ ಯಾವುವು ಒಳ್ಳೆಯ ಕೆಲಸಮಾಡುತ್ತಿವೆಯೋ ಅವುಗಳಿಗೆಲ್ಲಾ ಜಮೀನಿಟ್ಟುಕೊಳ್ಳಲು ಅವಕಾಶ ಕೊಡಬೇಕು ಎಂದು ಸಲಹೆಮಾಡುತ್ತೇನೆ. ಇದಕ್ಕೆ ರೆವಿನ್ಯೂ ಸಚಿವರು ಮರ್ಯಾದೆ ಕೊಡುವರು, ಒಳ್ಳೆಯ ಸಲಹೆಗಳಿಗಾದರೂ ಗಮನ ಕೊಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

†ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷಸ್ವಾಮಿಯವರೇ, 29ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಥಮ ಪೌರನೆಯ ಪ್ರಧಾನಿಗೆ ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ತಮ್ಮ ಅಧ್ಯಕ್ಷತೆಯಲ್ಲಿ ಆದಂಥ ನಭೆಯಲ್ಲಿ ಭೂಸುಧಾರಣೆಯನ್ನು ಪಕ್ಷದ ಒಂದು ಉದ್ದೇಶ, ಧ್ಯೇಯವಾಗಿ ಇಟ್ಟುಕೊಂಡು ಬಂದರು. ಈ ಭೂಸುಧಾರಣೆ ಕೇವಲ ಲೇಖನ ರೂಪದಲ್ಲಿ ಉದ್ದೇಶ ಹೊರತು ಕಾರ್ಯರೂಪಕ್ಕೆ ಕರಲಕ್ಕೆ ಇದುವರೆಗೂ ಕೂಡ ಅವಕಾಶವಾಗಿರಲಿಲ್ಲ. ಅದಕ್ಕೆ ಕಾರಣ ಏನೋ ಇರಬಹುದು. ಇಂಥ ಚರಿತ್ರಾರ್ಹವಾದ ಈ ಕಾನೂನನ್ನು ಇವತ್ತು, ನಮ್ಮ ಪಕ್ಷ, ಅಖಿಲ ಭಾರತದ ಮಟ್ಟದಲ್ಲಿ, ಇಂದಿರಾಜಿಯವರ ನಾಯಕತ್ವದಲ್ಲಿ ಶ್ರೀವಾನ್ ಅರಸು ಅವರ ನಾಯಕತ್ವದಲ್ಲಿ ಮತ್ತು ಕಂದಾಯಮಂತ್ರಿಗಳಾದ ಶ್ರೀಪೂನ್ ಹುಚ್ಚಮಾಸ್ತಿಗೌಡರ ಮೂಲಕ ಬರುತ್ತಿದೆ, ಈ ಒಂದು ಕಲಸದ ಹೆಮ್ಮೆಯು ಕಿರೀಟ ಅವರ ಹೆಸರಿಗೆ ಸಂದಾಯವಾಗುತ್ತದೆ ಎಂದು ಹೇಳಿ ಅವರಿಗೆ ನನ್ನ ಅಭಿನಂದನೆಯನ್ನೂ ಸಲ್ಲಿಸುತ್ತೇನೆ. ಹೂವಿನ ಜೊತೆಗೆ ನಾರು ಸ್ವರ್ಗ ಸೇರುತ್ತದೆ ಎನ್ನುವಂತೆ, ಈ ದಶಕದಲ್ಲಿ ಶಾಸನಸಭೆಯ ಸದಸ್ಯರುಗಳಾಗಿರತಕ್ಕ ನಮ್ಮೆಲ್ಲರ ಹೆಸರೂ ಕೂಡ ಕ್ರಾಂತಿಕಾರಿ ಬದಲಾವಣೆಯ ರೂಪದಲ್ಲಿ ಶಾಶ್ವತವಾಗಿ ಉಳಿದುಕೊಳ್ಳುತ್ತದೆ; ಎನ್ನುವ ಹೆಮ್ಮೆ ನನ್ನದೂ ಕೂಡ ಆಗಿದೆ. ಆದರೆ ಈ ಶಾಸನಸಭೆ ತರುವಾಗ ಎಲ್ಲರ ಹಿತಾಸಕ್ತಿಯನ್ನು ಗುರಿಯಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯಕ. ಜೊತೆಗೆ ಸಾಮಾಜಿಕ ಪರಿವರ್ತನೆಯೂ ಬೇಕು. ರ್ಯಾಂಡ್ ಬಿಲಾಂಗ್ಸ್ ಟು ಗೋಪಾಲ್ ಎಂದು ಶ್ರೀ ವಿನೋಬಾ ಭಾವೆಯವರು ಹೇಳಿದರು. ಭೂಮಿಯು ಪರಮಾತ್ಮನಿಗೆ ಸೇರಿರುವ ಭೂಮಿ, ಒಬ್ಬನ ಸ್ವತ್ತಾಗಿ, ಒಬ್ಬನ ಅನುಭೋಗಕ್ಕೆ ಇರಬಾರದು. ಭೂಮಿ ಸರ್ವರ ಸ್ವತ್ತಾಗಿ, ಸರ್ವರ ಅನುಭೋಗಕ್ಕೆ ಒಳಗಾಗಿರಬೇಕು ಎನ್ನುವ ಉದ್ದೇಶ ಇದರಲ್ಲಿ ಅಡಗಿದೆ. ಇದು ಒಪ್ಪತಕ್ಕ ಮಾತು. ನಾವು ಯಾವ ಒಂದು ಪೈಸೆಗೂ ಸಿಕ್ಕದೆ, ಯಾವ ಒಂದು ಕಂಕಾಶಕ್ಕೂ ಸಿಕ್ಕದೆ, ಯಾವ ಒಂದು ಪಾತಾವರಣಕ್ಕೂ ಹೊಂದಿಕೊಳ್ಳದೆ, ಈ ಕಾನೂನನ್ನು ಮಾಡಿದರೆ ಜನ ಒಪ್ಪುತ್ತಾರೋ ಏನೋ ಎನ್ನುವುದು ನನ್ನ ಅಭಿಪ್ರಾಯ. ಈ ಭೂಸುಧಾರಣೆ ತಿದ್ದುಪಡಿಯಲ್ಲಿ, ಜಾಯಿಂಟ್ ಸೆಲೆಕ್ಟ್ ಕಮಿಟಿ ಆದ ಮೇಲಾದರೂ ಗುರುತರವಾದ ಬದಲಾವಣೆ ಯಾಗಬೇಕು ಎನ್ನುವ ಒಂದು ಅಶಯವನ್ನು ನನ್ನಂತೆ ಅನೇಕ ಸದಸ್ಯರು ಇಟ್ಟುಕೊಂಡಿದ್ದರು. ಆದರೆ ಇದರಲ್ಲಿ ನಾವು ಕಾನೂನಕ್ಕೆ ನ್ಯೂನತೆಗಳನ್ನು ನೋಡಿದರೆ, ಇದರಿಂದ ಸರ್ವರ ಹಿತಸಾಧನೆ ಯಾಗುತ್ತದೆಯೇ, ಸಾಮಾಜಿಕ ಹಿತಸಾಧನೆಯಾಗುತ್ತದೆಯೇ ಎನ್ನುವ ಭಾವನೆ ಶಂಕೆ ಒಡ ಮೂಡುತ್ತದೆ ಎಂದು ಹೇಳುತ್ತೇನೆ. ಈ ಕಾನೂನಲ್ಲಿ ಕೊಟ್ಟಿರತಕ್ಕ 2—3 ಎಕ್ಸೆಂಪ್ಷನ್ಸ್ ಏನು ಇದೆ ಅದು ಯಾವ ಕಾರಣಕ್ಕಾಗಿ? ಯಾರ ಹಿತಕ್ಕಾಗಿ? ಇದರಿಂದ ಏನು ಉದ್ದೇಶ ಸಾಧನೆಯಾಗುತ್ತದೆ? ಯಾವ ಸಮಾಜದ ಸಾಧನೆಯಾಗುತ್ತದೆ ಎಂದು ನನ್ನ ಸಣ್ಣಮಟ್ಟಕ್ಕಂತು ಅರ್ಥವಾಗುವುದಿಲ್ಲ. ಕಾಫಿ ಎಸ್ಟೇಟ್ ಇರುವವರಿಗೆ ಎಕ್ಸೆಂಪ್ಷನ್ ಕೊಟ್ಟಿದ್ದಾರೆ, ತೆಂಗು ಬೆಳೆಯುವವರಿಗೆ 54 ಎಕರೆ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ಕೆಲವು ಭಾಗದವರು ಹೆಚ್ಚು ಜಮೀನನ್ನು ಇಟ್ಟುಕೊಳ್ಳಬಹುದು; ಇದರಲ್ಲಿ ಬರಗಾಲ ಪೀಡಿತಪ್ರದೇಶಗಳವರು ಏನ್ನುವುದು, ಈ ಮೂರೂ ಯಾರ ಉಹೆಗೂ ಕೂಡ ಸಿಲುಕುವಂಥ ಎಕ್ಸೆಂಪ್ಷನ್ಸ್ ಇರುವಂತಹ ಕಾನೂನು ಇದು ಎಂದು ಹೇಳುವವರಲ್ಲಿ ನಾನೂ ಒಬ್ಬ. ಕ್ಲಾಸ್‌ಬೈಕ್ಲಾಸ್ ಹೇಳುವುದಾದರೆ, ಹೊಟ್ಟೆ ಹೊದಲನೆಯದಾಗಿ, ಅರ್ಜಿಯನ್ನು ತಹಸೀಲ್ದಾರರಿಗೆ ಹಾಕುವುದನ್ನು ಇಟ್ಟುಕೊಂಡಿದ್ದಾರೆ. ಇದನ್ನು ಕೊಟ್ಟಿರುವುದರಿಂದ, ಇವರಿಗೆ ಭೂಮಿಗೆ ಇಳಿದುಬಂದ ಭಗವಂತ ಎಂದು ಕರೆಯಬಹುದು. ಈ ಆಕ್ಟಿನಲ್ಲಿ ಇವರಿಗೆ ಕೊಟ್ಟಿರತಕ್ಕ ಸ್ಥಾನಗಿರವ ಇವುಗಳನ್ನು ನೋಡಿದರೆ ಇವರು ಭೂಮಿಗೆ ಇಳಿದು ಬಂದ ಭಗವಂತನೇ ಸರಿ, ಎಂದು ನನ್ನ ವೈಯಕ್ತಿಕ ಅಭಿಪ್ರಾಯ ಇದೆ. ಶಾಸನಸಭೆಗೆ ಬರತಕ್ಕ ಪ್ರತಿನಿಧಿಗಳು ಲಕ್ಷಕ್ಕೆ ಮೇಲ್ಪಟ್ಟು ಜನತೆಯ ಪ್ರತಿನಿಧಿ ಎಂದು ಅನಿಸಿಕೊಂಡಿರತಕ್ಕವರು, ಅಂಥವನ್ನು ಇಂಥ ಸಮಿತಿಯಲ್ಲಿ ಹಾಕಿ ಕಾರ್ಯಾಂಗದಲ್ಲಿನ ಕೆಳಮಟ್ಟದ ಅಧಿಕಾರಿಯನ್ನು ಅಧ್ಯಕ್ಷತೆಯಲಿಟ್ಟು, ಕೆಲಸ ಮಾಡತಕ್ಕಂಥಾದ್ದು ಎಂದರೆ ಇದು ಯಾರ ಊಹೆಗೂ ನಿಲುಕಲಾರದಂಥ ವ್ಯವಸ್ಥೆ. ಏಕೆಂದರೆ, ಒಬ್ಬ ಶಾಸನಸಭೆಗೆ ಇರತಕ್ಕ ಗೌರವ ಪ್ರಾಪ್ತಭುತ್ವದಲ್ಲಿ ಶಾಸಕಾಂಗಕ್ಕೆ ಅತ್ಯುನ್ನತ ಮಟ್ಟ ಇದೆ, ಶಾಸನಕಾಂಗ ಕಾರ್ಯಾಂಗ ಆಮೇಲೆ ನ್ಯಾಯಾಂಗ ಬರುತ್ತದೆ. ಈ ಕಾರ್ಯಾಂಗದಲ್ಲಿ ಅತ್ಯುನ್ನತ ಮಟ್ಟದಲ್ಲಿರತಕ್ಕ ಮಂತ್ರಿಗಳ ಜೊತೆಗೆ ಬಾವ ವಿಷಾದ ಮಾಡತಕ್ಕ ಶಾಸಕರನ್ನು ಅತ್ಯಂತ ಕೆಳಮಟ್ಟದಲ್ಲಿರುವ ನಾಕರರ ಅಧ್ಯಕ್ಷತೆಯೊಳಗೆ ಸದಸ್ಯನಾಗಿ ಕೆಲಸಮಾಡಬೇಕು ಎಂದರೆ ಇದು ಎಂಥ ವಿಪರ್ಯಾಸ?

[MR. DEPUTY SPEAKER In the Chair]

ಇದೆನ್ನು ಬುದ್ಧಿಜೀವಿ ಇರತಕ್ಕವರು ಯಾರೂ ಯೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ. ಲ್ಯಾಂಡ್ ಗ್ರಾಬ್ ಕಮಿಟಿ ಮಾಡಿದಾಗ ಏನು ಮಾತನ್ನು ಹೇಳಿದ್ದಾರೆ ? ತಮ್ಮವರೇ ಶಾಸಕರು ಇರುತ್ತಾರೆ, ಸಂಬಂಧಪಟ್ಟ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ತಹಸೀಲ್ದಾರರನ್ನು ಸೆಕ್ರೆಟರಿಗಳನ್ನಾಗಿ ಮಾಡಿ. ಇದರ ಅಧ್ಯಕ್ಷ ಸ್ಥಾನವನ್ನು ಶಾಸಕರಿಗೆ ಕೊಡಬೇಕೇ ಹೊರತು, ಶಾಸಕ ಒಬ್ಬ ಸದಸ್ಯನಾಗಿರತಕ್ಕ ಸಮಿತಿಯನ್ನು ಕನಸು ಮನಸ್ಸಲ್ಲಿ ಮಾಡುವುದು ಸಾಧ್ಯವಿಲ್ಲ ಇದು ಶೀರನಾಳಿ ಪ್ರಶ್ನೆಯಲ್ಲ, ಕೋಣಂದೂರು ಅವರ, ಕಾಗೋಡು ಅವರ ಪ್ರಶ್ನೆಯಲ್ಲ, ಒಬ್ಬ ಪ್ರಜಾ ಪ್ರತಿನಿಧಿಯ ಪ್ರಶ್ನೆ. ಒಬ್ಬ ಪ್ರಜಾಪ್ರತಿನಿಧಿಗೆ ನಲ್ಲುವ ಸ್ಥಾನಮಾನ ನಲ್ಲಸೇಹೋದರೆ, ಪ್ರಜಾ ಪ್ರಭುತ್ವದ ಅರ್ಥಕ್ಕೆ ಅವಮೇಳನವಾದೀತು ಎನ್ನುವ ಸಂಶಯ ಮೂಡುತ್ತದೆ. ಇವತ್ತು ತಹಸೀಲ್ದಾರರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ ಎಂದರೆ, ಇವರ ಡ್ಯೂಟಿಯನ್ನು ತೆಗೆದುಕೊಂಡೊಂ ಡಾಗಿ ನೋಡುವುದಾದರೆ, ಈ ಒಂದು ಕಾರ್ಯದಲ್ಲಿ ಇವರಿಗೆ ಕೊಟ್ಟಿರುವುದು ರಾಜಿದಂಡ ಎಂದು ಅನ್ನಿಸುತ್ತದೆ. ಇದರಿಂದ ಪ್ರಜಾಪ್ರಭುತ್ವದ ದುರುಪಯೋಗ ಪಾಗಬಾರದು ಎ ದು ನಾನು ಹೇಳುತ್ತೇನೆ. ಒಬ್ಬ ಸರ್ಕಾರಿ ಕೆಳಮಟ್ಟದ ಅಧಿಕಾರಿಗೆ ಇಷ್ಟೊಂದು ಅಧಿಕಾರ ನ್ನು ಕೊಟ್ಟು ಅವನು ಯಾರಿಗೆ ಬೇಕಾದರೂ. ಹೇಗೆ ಬೇಕಾದರೂ ಆದೇಶ ಕೊಡಬಹುದು ಎಂದು ಹೇಳುತ್ತೀರಿ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಜೆನ್ನಿ ಕಾನೂನು ಇದ್ದಾಗ ಸೆಕ್ಷನ್ 12ರ ಪ್ರಕಾರ ಹೆಚ್ಚುವರಿ ಗೇಣಿಗೆ ಅರ್ಜಿಯನ್ನು ಒಬ್ಬರು ಹಾಕಿದರು. 10 ವರ್ಷಗಳನಂತರ ಅರ್ಜಿ ದಾರ ತಹಸೀಲ್ದಾರರನ್ನು ಕೂಡಿಸಿಕೊಂಡು 165 ರೂಪಾಯಿ ನಗದು ಗೇಣಿ ಬರತಕ್ಕ ಜಮೀನಿಗೆ, 40 ಮಣ ಅಡಿಕೆ, 75 ಪಲ್ಲ ಭತ್ತ ಕೊಡಬೇಕು ಎಂದು ಡಿಕ್ರಿಯನ್ನು ಹೇಳಿ ಬರೆಸಿದರು. ಡಿಕ್ರಿ ಕೊಟ್ಟರು, ಜಫ್ತಿ ವಾರಂಟನ್ನು ಇಷ್ಯೂ ಮಾಡಿದರು. ಏಕೆ ಈ ಉದಾಹರಣೆಯನ್ನು ಕೊಡುತ್ತಿದ್ದೇನೆಂದರೆ, ತಹಸೀಲ್ದಾರರು ಮಾಡಬೇಕಾದಂಥ ಕೆಲಸ ಇರುತ್ತದೆ. ರೆವಿನ್ಯೂ ಕಲೆಕ್ಷನ್, ಲೆವಿ ಬತ್ತ ಕಲೆಕ್ಷನ್ ಏಗ್ಬೇರೆ, ಏಗ್ಬೇರೆ ಇರುತ್ತದೆ. ಅವರಿಗೆ ಅವರ ತಲೆಮಟ್ಟದ ಕೆಲಸ ಇರುತ್ತದೆ. ಅವರಿಗೆ ನ್ಯಾಯಾಂಗದ ಅಧಿಕಾರವನ್ನು ಕೊಟ್ಟುಬಿಟ್ಟರೆ ಏನು ವಿಪರ್ಯಾಸ ಆದೀತು ಎನ್ನುವುದಕ್ಕೆ ಈ ಒಂದು ಉದಾಹರಣೆಯನ್ನು ನಾನು ಕೊಟ್ಟೆ. ಜೆನ್ನಿ ಆಕ್ಟ್ ರಿಪೀಲ್ ಆಗಿ 10 ವರ್ಷಗಳಾದ ಮೇಲೆ, ಸೆಕ್ಷನ್ 8, ಲ್ಯಾಂಡ್ ರಿಫಾರಮ್ಸ್ ಆಕ್ಟ್ ಇರುವಾಗ ಗೇಣಿ ಹೆಚ್ಚು ಮಾಡುವುದಕ್ಕೆ ಅಗುತ್ತದೆಯೇ ಇಲ್ಲವೇ ಎನ್ನುವುದು ಅವನ ಯೋಚನೆಗೆ ಬರಲಿಲ್ಲ. ಇವರು ಕೇಳಿದರು, ಅವರು ಬರೆದರು. ಇಂಥ ವಿಪರ್ಯಾಸ ! ಕಾರ್ಯಾಂಗದ ಕೆಳಮಟ್ಟದ ಅಧಿಕಾರಿಗೆ ಸಂಪೂರ್ಣ ಅಧಿಕಾರ ಕೊಡುವುದರಿಂದ ಜನರ ಹಿತ ಸಾಧನೆಯಾಗುವುದಿಲ್ಲ ಎನ್ನುವ ಒಂದು ಸ್ಪಷ್ಟತೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಟ್ರಿಬ್ಯುನಲ್ ಅನ್ನು ನೀವು ಮಾಡಿದ್ದೀರಿ. ಇಂಥಿಂಥವರು ಇದ್ದಾರೆ ಎಂದು ನೀವು ಹೇಳಿದ್ದೀರಿ. ಒಪ್ಪೋಣ. ಪ್ರಜಾಪ್ರಭುತ್ವದ ರೀತ್ಯ ಆಯಾ ತಾಲ್ಲೂಕಿಗೆ ಸಂಬಂಧಪಟ್ಟ ಶಾಸಕರನ್ನೊಳಗೊಂಡು ಅವರ ಅಧ್ಯಕ್ಷತೆಯಲ್ಲಿ ಖಾಸಗಿ ಸದಸ್ಯರು ಮೂರು ಜನ ಇರತಕ್ಕ ಸಮಿತಿಯನ್ನು ಮಾಡಿ ತಹಸೀಲ್ದಾರರನ್ನು ಕಾರ್ಯದರ್ಶಿಯಾಗಿ ಮಾಡಿದರೆ ಕೆಲಸ ಎಷ್ಟು ಸುಸೂತ್ರವಾಗಿ ನಡೆಯುತ್ತದೆ. ಇದು ಜನರ ಇಚ್ಛೆ ಮೇರೆಗೆ ನಡೆಯುತ್ತದೆಯೋ ಇಲ್ಲವೊ ಎನ್ನುವುದನ್ನು ಯೋಚನೆಮಾಡಿ. ಶಾಸಕನಿಗೆ ಊರಿನಲ್ಲಿ ಹಂಗು ಇರುತ್ತದೆ. 'ಎ' ಗೆ ಕೊಡುವುದನ್ನು 'ಬಿ'ಗೆ ಕೊಟ್ಟುಹೋದರೆ ಎರಡು ವರ್ಷದ ನಂತರ ಆ ಸ್ಥಳದಲ್ಲಿಯೇ ಅವನು ಜುನಾವಣೆಗೆ ನಿಲ್ಲಬೇಕೆಂದು ಅವನ ತಲೆಯಲ್ಲಿ ಇರುತ್ತದೆ. ಅವನು ಊರು ಬಿಟ್ಟು ಹೋಗಲಾರ, ನಾಳೆ ದಿವಸ ಜನಗಳು ಬೆಟ್ಟು ಮಾಡಿ ತೋರಿಸುತ್ತಾರೆ, ಅತನು ಹೀಗೆಮಾಡಿದ್ದಾನೆ ಎಂದು. ಆದರೆ ತಾವು ನೇಮಕ ಮಾಡಿದಂಥ ಅತ್ಯಂತ ಕೆಳ ಮಟ್ಟದ ಅಧಿಕಾರಿ ಯಾವನು ಇರುತ್ತಾನೆ, ಅತನು ಇವತ್ತು ಈ ಊರಿನಲ್ಲಿದ್ದರೆ ನಾಳೆ ಇನ್ನೊಂದು ಊರಿಗೆ ಹೋಗು ತ್ತಾನೆ. ಸಾಮಾಜಿಕ ನ್ಯಾಯ ಅತನಿಂದ ಆಗುತ್ತದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಇದು ಗಾಢವಾಗಿ ಯೋಚನೆ ಮಾಡಬೇಕಾದ ಪ್ರಶ್ನೆ. ತಾವು ಈ ಬಿಲ್ಲಿನಲ್ಲಿ ವಕೀಲರಿಗೆ ಹಾಜರು ಆಗ ಕೂಡದು ಎಂದು ಹೇಳಿದ್ದೀರಿ. ಆದರೆ ವಕೀಲರು ಹಾಜರು ಆಗಕೂಡದು ಎಂದು ಹೇಳಿದರೂ ಕೂಡ, ನೀವು ಚಾಪೆ ಕೆಳಗೆ ನುಗ್ಗಿದರೆ ಅವರು ರಂಗೋಲಿಯ ಕೆಳಗೆ ತೂರುತ್ತಾರೆ ಎನ್ನುವ ಹಾಗೆ, ವಕೀಲರು ಅರ್ಜಿದಾರನ ಪರವಾಗಿ ನಾನು ಹಾಜರು ಆಗುತ್ತೇನೆಂದು ಅರ್ಜಿ ತೆಗೆದುಕೊಂಡು ಬಂದರೆ, ಆ ಅರ್ಜಿಯು ಮೇರೆ ಅವನನ್ನು ಅಲ್ಲೇ ಮಾಡಬೇಕಾಗುತ್ತದೆ. ಅನಂತರ ಅಪ್ಲಿಕೇಷನ್ ಕೊಡಬೇಕೆಂದು ಹೇಳುತ್ತೀರಿ. ಸಾಮಾನ್ಯವಾಗಿ ರೈತನಿಗೆ ಅಪ್ಲಿಕೇಷನ್ ಬರೆಯುವುದಕ್ಕೆ ಬರುವುದಿಲ್ಲ. ಯಥಾ ಪ್ರಕಾರ ವಕೀಲರನ್ನು ಇಡಬೇಕು. ಅರ್ಜಿಯನ್ನು ಹಾಕಬೇಕು ಪ್ರತಿಯೊಂದು ಸೆಕ್ಷನ್ ಕೋರ್ಟ್ ಮಾಡಿ ಅರ್ಜಿ ಸಲ್ಲಿಸುವುದಕ್ಕೆ ವಕೀಲರ ಸಹಾಯ ತೆಗೆದು

(ಶ್ರೀ ಎಸ್. ಎಂ ಶಿರನಾಳಿ ಚಂದ್ರಶೇಖರ್)

ಕೊಳ್ಳಬೇಕು ವಕೀಲರನ್ನು ತಾವು ಹಾಜರು ಆಗಬಾರದು ಎಂದು ಹೇಳಿದ್ದೀರಿ ಆದರೆ ವಕೀಲರನ್ನು ಬಿಟ್ಟು ಏನೂ ಮಾಡುವುದಕ್ಕೆ ಆಗುವುದಿಲ್ಲ. ತಹಶೀಲ್ದಾರರಿಗೆ ಕಂಪ್ಲೀಟ್ ಆಗಿ ಎಗ್ಜಿಕ್ಯೂಟಿಟ್ ಮಾಡತಕ್ಕ ಡ್ಯೂಟೀಸ್ ಎನು. ತಹಶೀಲ್ದಾರ್‌ರವರ ಕರ್ತವ್ಯ ಏನು ಎಂದು ಎರಡು ಭಾಗ ಮಾಡಿದ್ದೀರಿ. ಟ್ರಿಬ್ಯೂನಲ್ ಕರ್ತವ್ಯಕ್ಕೂ, ತಹಶೀಲ್ದಾರರ ಕರ್ತವ್ಯಕ್ಕೂ ಒಂದೊಂದಕ್ಕೂ ಸಂಭಂಧವಿಲ್ಲ, ಎರಡೂ ಬೇರೆ ಬೇರೆ. ಒಂದು ವೇಳೆ ಟ್ರಿಬ್ಯೂನಲ್ ಕರ್ತವ್ಯದಲ್ಲಿ ತಹಶೀಲ್ದಾರರ ಕರ್ತವ್ಯ ಒಳಗೊಂಡಿದ್ದರೆ ನನ್ನ ಅಭ್ಯಂತರವಿಲ್ಲ. ಟ್ರೈಬ್ಯೂನಲ್‌ಗೆ ಕೊಡವೇ ಇರುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಟ್ಟಿದ್ದೀರಿ. ಅದನ್ನು ಯಾವ ಕಾರಣಕ್ಕಾಗಿ ಕೊಟ್ಟಿದ್ದೀರಿ, ಏನು ಕಾರಣಪ್ಪೋ ನನಗೆ ತಿಳಿಯದು. ಅದರಿಂದ ಅಧಿಕಾರ ದುರುಪಯೋಗ ಆಗುತ್ತದೆಯೇ ಹೊರತು ನಾಮಾಜಿಕ ನ್ಯಾಯವಾಗಲೀ, ಬಡಜನರಿಗೆ ಹಿತವಾಗಲೀ ಆಗುತ್ತದೆ ಎನ್ನುವ ಪ್ರಶ್ನೆ ಸುಳ್ಳು ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಇದನ್ನು ವಿರೋಧಿಸುತ್ತೇನೆ. ಎರಡನೆಯ ಪ್ರಶ್ನೆ ತಾವು ಕಾಫಿ ಪ್ಲಾಂಟೇಷನ್‌ಗೆ ಎಗ್ಜಂಪಷನ್ ಕೊಟ್ಟಿದ್ದೀರಿ. ತಾವು ಹೇಳಬಹುದು, ಹೇರಳವಾಗಿ ವಿದೇಶದ ಹಣವನ್ನು ಗಳಿಸತಕ್ಕ ಉದ್ದೇಶ ಇದು, ಅದಕ್ಕಾಗಿ ಎಗ್ಜಂಪಷನ್ ಕೊಡುತ್ತೇವೆಂದು ಒಂದು ವರ್ಗದವರು ಮಾತ್ರ ಶವರ್ಲೆ ಕಾರ್ ಇಟ್ಟುಕೊಂಡು ದೊಡ್ಡದೊಡ್ಡ ಬಂಗಲೆಗಳನ್ನಿವಾನ ಮಾಡುವುದಕ್ಕೆ ಅವಕಾಶ ಕೊಟ್ಟು, ಇನ್ನೊಂದು ವರ್ಗವನ್ನು ಮೂಲೋತ್ಪಾಟನೆ ಮಾಡಿದರೆ ಅದು ಸಮಾಜವಾದ ಆಗುತ್ತದೆಯೇ ಎನ್ನುವ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಾಫಿಪ್ಲಾಂಟರ್‌ಗೆ ಏನಾಯಿತಿ ಕೊಟ್ಟಿದ್ದೀರಿ. ಅವರು ಲಕ್ಷಗಟ್ಟಲೆ ಉತ್ಪನ್ನ ವರ್ಷ್‌ವರ್ಷ ತೆಗೆದುಕೊಳ್ಳುತ್ತಾರೆ. ಹಿಂದಿನಂತೆ ಯಾವ ರೀತಿಯಲ್ಲಿಯೂ ಅವರು ಅಶನವಸನಗಳನ್ನು ನಡೆಸಿಕೊಂಡು ಅದ್ದೂರಿಯಿಂದ ಇರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇ ಒಬ್ಬ ತರೀ ಜಮೀನು, ಬಾಗಾಯ್ತು ಜಮೀನು ಮಾಡಿದವನಿಗೆ ಸೀಲಿಂಗ್ ಎಫೆಕ್ಟ್ ಆಗುತ್ತದೆ. ಅಕ್ಕಪಕ್ಕದಲ್ಲಿ ಇರುವ ಕಾಫಿ ಪ್ಲಾಂಟರ್‌ನನ್ನು ನೋಡಿ ಅವನ ಮನಸ್ಸು ಏನು ಆಗುತ್ತದೆ? ಅವನ ಅಪ್ಪ ಅಜ್ಜ ಅಡಿಕೆ ತೋಟಕ್ಕೆ ದುಡ್ಡು ಹಾಕಿದ್ದು ಅಪರಾಧವೇ? ಕಾಫಿ ತೋಟಕ್ಕೆ ದುಡ್ಡು ಹಾಕಿದ್ದರೆ ಅಪರಾಧ ಆಗುತ್ತಾ ಇರಲಿಲ್ಲವೇ? ಇದು ಎಂತಹ ವಿಪರ್ಯಾಸ ಎಂದು ಅಲೋಚನೆ ಮಾಡಬೇಕು. ತಂಗು ಅರ್ಚರ್ಡ್‌ಗೆ ಮಿತಿ 54 ಎಕರೆ ಎಂದು ತಕ್ಕಡಿ ಹಿಡಿದು ನೋಡಬೇಕು, ಆಗ ಅರ್ಥವಾಗುತ್ತದೆ. ಈ ಕಾಯಿದೆಯಿಂದ ಎಂಥ ಅನ್ಯಾಯವಾಗಿದೆ ಎಂದು ಇಂದು ಒಂದು ಎಕರೆ ತೆಂಗಿನ ತೋಟದಲ್ಲಿ ಅಡಿಕೆ ತೋಟಕಿಂತ ಜಾಸ್ತಿ ಉತ್ಪತ್ತಿ ಬರುತ್ತದೆ. ಅಡಿಕೆಯು ಬೆಲೆ ನಂಪೂರ್ಣವಾಗಿ ಬಿದ್ದು ಹೋಗಿರುವಾಗ ಅಡಿಕೆ ತೋಟದಿಂದ ಏನು ಉತ್ಪತ್ತಿ ಬರುತ್ತದೆ ಅದಕ್ಕಿಂತ ಜಾಸ್ತಿ ಉತ್ಪತ್ತಿ ತೆಂಗಿನ ತೋಟದಲ್ಲಿ ಇದೆ. ಆದುದರಿಂದ ತೆಂಗಿನ ತೋಟಕ್ಕೆ 54 ಎಕರೆ ಪರಿಮಿತಿ ಇಟ್ಟು ಅಡಿಕೆ ತೋಟಕ್ಕೆ ಕಡಿಮೆ ಪರಿಮಿತಿ ಮಾಡಿರುವುದು ಯಾವ ವ್ಯವಸ್ಥೆ ಎಂದು ನನಗೆ ತಿಳಿಯುವುದಿಲ್ಲ.

ಇನ್ನು ಗುಲ್ಬರ್ಗ, ರಾಯಚೂರು, ಬಳ್ಳಾರಿ, ಕೆಲವು ಭಾಗಗಳಲ್ಲಿ ಬಾಗಾಯ್ತು ಪರಿಸ್ಥಿತಿ ಇರುವುದರಿಂದ ಅವರಿಗೆ ಇಂತಿಷ್ಟು ಮಿತಿವರೆಗೆ ಸೀಲಿಂಗ್ ಇಟ್ಟುಕೊಳ್ಳಬಹುದೆಂದು ಅಕ್ಷನಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ, ನಾಳೆ ದಿವನ ಕೃಷ್ಣಾ ಯೋಜನೆಯಿಂದ ನೀರಾವರಿ ಯೋಜನೆ ಆಯಿತು ಎಂದರೆ, ಯೋಜನಾ ನಂತರ ಮತ್ತೆ ಈ ಆಕ್ಟನ್ನು ರಿಪೀಲ್ ಮಾಡುತ್ತೀರಾ? ತಾವು ಬರಗಾಲ ಜಿಲ್ಲೆಗಳು ಎಂದು ಹೇಳುವಾಗ ಶಿವಮೊಗ್ಗಾ ಜಿಲ್ಲೆಗೆ ಬರಬೇಕು. ಶಿವಮೊಗ್ಗ ಜಿಲ್ಲೆಯ ನಾಲ್ಕು ತಾಲ್ಲೂಕ್‌ಗಳಲ್ಲಿ ಮುಕ್ಕಾಲು ಮೂರು ವೀಸೆ ಬರಗಾಲವಿದೆ. ಶಿವಮೊಗ್ಗ ಜಿಲ್ಲೆಯವರು ಮಾಡಿದ ಅನ್ಯಾಯವೇನು? ಶಿವಮೊಗ್ಗ ತಾಲ್ಲೂಕ್‌ನಲ್ಲಿ 110 ಹಳ್ಳಿಗಳಲ್ಲಿ ನೀರು ಇಲ್ಲ. ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ, ಚನ್ನಗಿರಿ ತಾಲ್ಲೂಕ್‌ಗಳಲ್ಲಿ ಈ ಪರಿಸ್ಥಿತಿ ಇದೆ.

ಶ್ರೀ ಕೋಣಂದರುಲಿಂಗಪ್ಪ.—400" ಮಳೆ ಆಗುವ ಆಗುಂಬೆಯಲ್ಲಿ 180" ಮಳೆ ಆಗಿದೆ, ಆದುದರಿಂದ ತೀರ್ಥಹಳ್ಳಿ, ಮತ್ತು ಹೊಸನಗರ ಅದೇ ಪಟ್ಟಿಯಲ್ಲಿ ಸೇರಬೇಕಾಗುತ್ತದೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಕೆಲವು ಜಿಲ್ಲೆಗಳಿಗೆ ಮಾತ್ರ ಈ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಕೊಟ್ಟು, ಕೆಲವು ಜಿಲ್ಲೆಗಳನ್ನು ಬಿಟ್ಟು ಬಿಡುವುದರ ಉದ್ದೇಶ ಏನು ಎಂದು ನನಗೆ ಅರ್ಥವಾಗುವುದಿಲ್ಲ. ಕ್ಷಾಮಡಾಮರಗಳು ಎಂದು ಹೇಳತಕ್ಕದ್ದು ಒಂದೇ ಸ್ಥಳಕ್ಕೆ ಸೀಮಿತ ವಾಗಿರುವುದಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕು. ಒಂದು ವರ್ಷ ಮಳೆ ಆಗುತ್ತದೆ ಇನ್ನೊಂದು ವರ್ಷ ಮಳೆ ಆಗದೇ ಹೋಗಬಹುದು ಆಗ ಕಾನೂನನ್ನು ರಿಪೀಲ್ ಮಾಡುವುದಕ್ಕೆ

ಆಗುತ್ತದೆಯೇ? ಅದು ಸಾಧ್ಯವಿಲ್ಲ. ಆದುದರಿಂದ ಈ ರೀತಿ ಆಕ್ಟ್‌ನಲ್ಲಿ ಎಗ್ಮಂಷನ್ ಎನು ಕೊಟ್ಟಿದ್ದೀರಿ ಅದು ತಪ್ಪಾಗುತ್ತದೆ ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ.

ಇನ್ನು ಮಾತೀಯ ಸಂಸ್ಥೆಗಳು ಸಂಪೂರ್ಣವಾಗಿ ಜಮೀನನ್ನು ಹೊಂದಲಿಕ್ಕೆ ಅವಕಾಶ ತಾವು ತೆಗೆದುಹಾಕಿದ್ದೀರಿ. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಅನುಚ್ಛಾನವಾಗಿ ನಡೆದುಕೊಂಡು ಬಂದಿರತಕ್ಕ ಮಾತೀಯ ಸಂಸ್ಥೆಗಳಲ್ಲಿ ಕೆಲವು ಒಳ್ಳೆಯವು ಇವೆ ಕೆಲವು ಕೆಟ್ಟದ್ದು ಇವೆ. ಯಾವುದು ಒಳ್ಳೆಯ ಕೆಲಸ ಮಾಡತಕ್ಕ ಸಂಸ್ಥೆಗಳು ಆಗಲೀ, ವ್ಯಕ್ತಿಯಾಗಲೀ ಅವಕ್ಕೆ ಶಹಬಾಸ್‌ಗಿರಿ ಕೊಡಬೇಕು. ಕೆಟ್ಟ ಕೆಲಸ ಮಾಡುವ ವ್ಯಕ್ತಿ, ಅಥವಾ ಸಂಸ್ಥೆಗಳಿಗೆ ಮುಟ್ಟುಗೋಲು ಹಾಕುವುದನ್ನು ಕ್ಷಿಪ್ರಗೊಳಿಸಬೇಕು. ಈ ರೀತಿಯಲ್ಲಿ ಕಾನೂನಿನಲ್ಲಿ ಅಳವಡಿಸುವುದರಿಂದ ಒಳ್ಳೆಯ ಕೆಲಸ ಮಾಡತಕ್ಕ ಸಂಸ್ಥೆಗಳ ಗತಿ ಏನು? ಎಷ್ಟೊಂದು ವಿದ್ಯಾ ಶಾಲೆಗಳನ್ನು ತೆಗೆದು ಎಷ್ಟೋ ಜನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡತಕ್ಕ ಸಂಸ್ಥೆಗಳು ಇವೆ. ಅವರ ಭವಿಷ್ಯ ಏನು? ಎಂದು ಯೋಚನೆ ಮಾಡಬಹುದಾಗಿತ್ತು ಏನೋ ಎಂದು ನನಗನ್ನಿಸುತ್ತದೆ.

ಸೆಕ್ಷನ್ 14 ತೆಗೆದುಹಾಕಿದ್ದಾರೆ, ಇದು ಸಂಪೂರ್ಣವಾಗಿ ಸ್ವಾಗತಾರ್ಹ. ಸಂಸ್ಥಾ ಕಾಂಗ್ರೆಸ್ ಬಿಟ್ಟು ಎಲ್ಲಾ ಪಕ್ಷಗಳೂ ಸೆಕ್ಷನ್ 14 ತೆಗೆದು ಹಾಕಬೇಕು ಎಂದು ಹೇಳುತ್ತವೆ. ಆದರೆ ಸೆಕ್ಷನ್ 14 ತೆಗೆಯುವಾಗ ಮೈನರ್ಸ್ ಮತ್ತು ವಿಧವೆಯವರಿಗೆ ಕೊಟ್ಟಿರುವ ಎಗ್ಮಂಷನ್ ಏನು ಇದೆ ಅದನ್ನು ತೆಗೆದು ಇರುವುದರಿಂದ ಎಷ್ಟೊಂದು ಕಷ್ಟ ಉದ್ಭವಿಸುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿತ್ತು. 1961ನೇ ಇಸ್ವಿಯಲ್ಲಿ ಮೈನರ್ ಆಗಿರುವವರು ಅಥವಾ ವಿಧವೆಯವರು ಡಿಕ್ಲರೇಷನ್ ಕೊಡದೆ ಗೇಣಿ ಸಾಗುವಳಿಗೆ ಇಟ್ಟುಕೊಳ್ಳಬಹುದು ಎಂದು ಹಾಗೆಯೇ ಬಿಟ್ಟು ಬಿಟ್ಟಿದ್ದರೆ ಇವತ್ತು ಒಬ್ಬ ಮೆಜಾರಿಟಿ ಬಡವಂಥವನು ರೆಜ್ಯೂಮ್ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದರೆ, ಅವನ ಅಶನವಸನಗಳ ಪರಿಸ್ಥಿತಿ ಏನು ಎಂದು ಯೋಚನೆ ಮಾಡಬೇಕಾಗುತ್ತದೆ. ವಿಧವೆಯಾದರೂ ಕೂಡ ಒಂದು ಎಕರೆ ಗೇಣಿಗೆ ಕೊಡತಕ್ಕ ಪರಿಸ್ಥಿತಿ ಇಲ್ಲ ಎಂದು ಹೇಳುವುದಾದರೆ ಯಾರು ತಾನೆ ಅವಳನ್ನು ಎಷ್ಟು ನೋಡಿಕೊಳ್ಳುತ್ತಾರೆ? ಒಬ್ಬರು ಕುಟುಂಬದಲ್ಲಿ ಮ್ಯಾನೇಜರ್ ಆಗಿದ್ದವರು ಯಾರಾದರೂ ನೋಡಿಕೊಳ್ಳಬಹುದೆಂದು ನಾಗಣ್ಣನವರು ಕೇಳಿದ ಪ್ರಶ್ನೆಗೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಅವರವರ ಕಾಲಮೇಲೆ ನಿಂತುಕೊಳ್ಳಬೇಕೇ ಹೊರತು ಶಿರಕ್ಕೆ ಹಸ್ತ ಯಾವಾಗಲೂ ಕೊಡುತ್ತಾನೆಂದು ನಂಬಬಾರದು. ಅದರಿಂದ ಸ್ವಲ್ಪ ಅನ್ಯಾಯ ವಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಯಾವತ್ತು ಈ ಬಿಲ್ ಅಮೆಂಡ್‌ಮೆಂಟ್ ಆಕ್ಟ್ ಆಗಿ ಬರುತ್ತದೆ ಆ ತಾರೀಕಿನಿಂದ ಗೇಣಿದಾರರ ಸಾಗುವಳಿಯ ಹಕ್ಕಿರತಕ್ಕ ಜಮೀನು ಎಲ್ಲಾ ಸರ್ಕಾರದ ವಶ ಎಂದು ಹೇಳಿದ್ದೀರಿ. ಮೂರು ಕಾನು ಉತ್ಪತ್ತಿ ಇಲ್ಲದೆ 3, 4, 5 ಎಕರೆ ಜಮೀನು ಇರುವವರು ಪೂರಾ ಜಮೀನನ್ನು ಗೇಣಿ ಕೊಟ್ಟುಕೊಂಡು ಬಿಟ್ಟಿದ್ದಾರೆ. ಯಾರಿಗೆ ಕೊಟ್ಟಿದ್ದಾರೆ, ಅವರು ಯಾವಾಗ ಜಮೀನು ಕೊಟ್ಟಿದ್ದಾರೆ ಅವರಿಂದ ಬಿಡಿಸಿಕೊಳ್ಳುವ ಹಾಗಿಲ್ಲ. ತಾವು ಗೊತ್ತು ಮಾಡುವ ದಿನದ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ. ಅತನ ಜೀವನ ವ್ಯವಸ್ಥೆ ಏನು? ಅತನು ಫಾಲಡಾರ್ ತೆಗೆದುಕೊಂಡು ಸಾಯಬೇಕು. ಬೇರೆ ಜಿಲ್ಲೆಯ ಮಾಹಿತಿ ಕಡಿಮೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಭೂಸುಧಾರಣೆ ಕಾನೂನು ಬಂದರಾಗಾಯಿತು 10—15 ವರ್ಷಗಳಿಂದ ಇತ್ತಲಾಗಿ ಸರ್ಕಾರದವರು ಏನಾದರೂ ಕಾಂಪನ್ಸೇಷನ್ ಕೊಡುತ್ತಾರೆ, ಪರಿಹಾರ ಕೊಡುತ್ತಾರೆ ಎಂದು ಸಣ್ಣ ಸಣ್ಣ ಜಮೀನುದಾರರು ಮಂಡಿಯಲ್ಲಿ ಸಾಲಸೋಲ ಮಾಡಿ ಕಂದಾಯ ಕಟ್ಟಿಕೊಂಡು ಬರುತ್ತಿದ್ದಾರೆ. ಈ ಕಾನೂನು ಜಾರಿಗೆ ಬಂದರೆ ಅಂತಹವರ ಪರಿಸ್ಥಿತಿ ಏನು? ಮಂಡಿಯಲ್ಲಿ 10—15 ಸಾವಿರ ರೂಪಾಯಿ ಸಾಲಮಾಡಿ ಕಂದಾಯ ಕಟ್ಟಿಕೊಂಡು ಹಕ್ಕಿನ ದಾಖಲೆ ರಕ್ಷಣೆ ಮಾಡಿಕೊಂಡು ಬಂದರೆ, ಮಕ್ಕಳು, ಮರಿಗಳಿಗೆ ಬಾಂಡ್ ಆದರೂ ಸಿಗುತ್ತದೆ, 4 ಪರ್ಸೆಂಟ್ ಇಂಟರೆಸ್ಟ್ ಕೊಟ್ಟರೆ ಎಷ್ಟೊಂದು ಆಯಿತು, ಹೊಟ್ಟೆ ಹೊರೆದುಕೊಳ್ಳಬಹುದು ಎನ್ನುವ ಜಮೀನುದಾರರು ಇರುತ್ತಾರೆ ಅಂತಹರು ಗತಿ ಏನು! ಮೊದಲೇ ರೈತ ಜನಾಂಗದಲ್ಲಿ ಜನಜಾಗೃತಿ ಉಂಟಾಗಿ, ಗೇಣಿಗೆ ಕೊಡುತ್ತಾ ಇರಲಿಲ್ಲ. ಈಗ ಡಿಕ್ಲೇರ್ ಮಾಡಿದ ಮೇಲೆ ಕೇಳುವುದು ಸಹಜ ಬೇಡ. ಆ ವಿಷಯ ಕೋಣಂದೂರು ಲಿಂಗಪ್ಪನವರಿಗೆ ಗೊತ್ತು. ಕಾಗೋಡು ತಿಮ್ಮಪ್ಪನವರಿಗೂ ಗೊತ್ತು. ಅವರ ಜೀವನಕ್ಕೆ ವ್ಯವಸ್ಥೆ ಏನು? ಕಾಂಪನ್‌ಸೇಷನ್ ಎಷ್ಟು ಕೊಡಬೇಕೆಂದು ತೀರ್ಮಾನಮಾಡಿದ್ದೀರಿ, ಅದರಲ್ಲಿ ಕೊನೆಗೆ ಅರ್ಧ ಭಾಗವಾದರೂ ಕೊಡುತ್ತೇವೆಂದು ಹೇಳಿ. ಸಾಧ್ಯ ಪಾದಮ್ಟು ಪೂರ್ತಿ ಕೊಡಬೇಕು ಯಾಪಯಾಪುಹೋ, ಯಾತಯಾತಕ್ಕೋ ರಾಷ್ಟ್ರೀಕೃತ ಬ್ಯಾಂಕುಗಳ ಸಹಾಯ ತೆಗೆದುಕೊಂಡು ಕೆಲಸ ಮಾಡುತ್ತೀರಿ. ಇಲ್ಲಿಯೂ ಕೂಡ ಮಾನವೀಯತೆಯ ದೃಷ್ಟಿಯಿಂದ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಹಾಯ ಪಡೆದು ಸಂಪೂರ್ಣ ಕಾಂಪೆನ್‌ಸೇಷನ್ ಕೊಡುವ ವ್ಯವಸ್ಥೆ ಮಾಡದೇ ಹೋದರೆ ಇನ್ನೊಂದು ನಿರ್ಗತಿಕ ವರ್ಗವನ್ನು ತಾವು ಸೃಷ್ಟಿ ಮಾಡುತ್ತೀರಿ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಶ್ರೀ ಕೋಣಂದೂರು ಲಿಂಗಪ್ಪ.—ಒಂದೇ ಸಾರಿ ಪೂರ್ತಿ ಕೊಡುವುದು ಸಾಲದು. 2,000 ರೂಪಾಯಿ 4,000 ರೂಪಾಯಿ ಆದರೆ, ಸರ್ಕಾರ ಅ ್ರೀ ಸಬ್‌ಸಿಡೈಸ್ ಮಾಡಿ, ಲಂಪ್‌ಸಂ ಕೊಡಬೇಕು. ಇಲ್ಲದೇ ಹೋದರೆ ಅವನು ದಿವಾಳಾಗುತ್ತಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಕಾನೂನು ಜಾರಿಗೆ ತರುವ ಮೊದಲು ಇದನ್ನು ಯೋಚನೆ ಮಾಡಬೇಕೆಂದು ಹೇಳಿದ್ದೆ. ಬಹಳ ಜನರು ಹೊಟ್ಟೆಗೆ ಹಿಟ್ಟಿಲ್ಲದೆ ಏಷ್ಟು ತೆಗೆದುಕೊಂಡು ಸಾಯುವ ಪರಿಸ್ಥಿತಿ ಬರುತ್ತದೆ. ತಮಗೆ ಕಾಂಪೆನ್‌ಸೇಷನ್ ಬರುತ್ತದೆ ಎಂದು ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಮಂಡಿಯಲ್ಲಿ ಸಾಲ ಮಾಡಿಕೊಂಡಿರುತ್ತಾರೆ; ಊರು ಮನೆಗಳಲ್ಲಿ ಈ ಜಮೀನು ದಾರರು—ಈ ಜಮೀನುದಾರರಲ್ಲಿ ಉಳಿದಿರುವುದು ದಾರಂಒಂದೆ, ಜಮೀನಿಲ್ಲ—50, 100 ರೂಪಾಯಿ ಸಾಲ ಮಾಡಿಕೊಂಡಿರುತ್ತಾರೆ ದೊಡ್ಡ ದೊಡ್ಡ ಸಾಹುಕಾರರು ಇವರ ಹತ್ತಿರ ಜಮೀನು ಹೇರಳ ವಾಗಿದೆಯೆಂದು ಕನ್ನಡಿಯೊಳಗಿನ ಗಂಟನ್ನೋಡಿ ಇವರಿಗೆ ಸಾವಿರಾರು ರೂಪಾಯಿ ಸಾಲ ಕೊಟ್ಟಿರುತ್ತಾರೆ. ತಾವು ಕಾನೂನು ಜಾರಿಗೆ ಬಂದಾಗಾಯಿತಿನಿಂದ ಆತನ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ ಎಂದು ಹೇಳಿದ್ದೀರಿ. ಅವರ ಗತಿಯನು; ಅವರು ಯಾರ ಮನೆಯಲ್ಲಿ ಕೆಲಸಕ್ಕೆ ಹೋಗಬೇಕು; ಸಾಲ ಕೊಟ್ಟವರ ಮನೆಗೆ ಹೋಗಬೇಕೇ ಅಥವಾ ಫಾಲಿಡಾಲ್ ತೆಗೆದುಕೊಳ್ಳಬೇಕೇ ಎಂದು ಯೋಚನೆ ಮಾಡಬೇಕಾಗಿದೆ. ಇದನ್ನು ಮಾನವೀಯತೆಯ ದೃಷ್ಟಿಯಿಂದ ಆಲೋಚನೆ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜಮೀನುದಾರರು ಕೋಷಣ್ ಪೂಡತಕ್ಕವರು ಎಂಬ ಪ್ರತೀತಿ ಇದೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಜಮೀನುದಾರರಲ್ಲಿ ಎರಡು ವರ್ಗ ಇದೆ. ಬಹಳ ಕಾಲದಿಂದ ರೈತರನ್ನು ಅವರು ನಮ್ಮ ಕುಟುಂಬಕ್ಕೆ ಸೇರಿದವರು ಎಂದು, ಅವರಿಗೆ ಭತ್ತ ಇಲ್ಲದಿದ್ದರೆ ಬತ್ತ ಕೊಟ್ಟುಕೊಂಡು, ಔಷಧಿ ಇಲ್ಲದಿದ್ದರೆ ಔಷಧಿಕೊಟ್ಟುಕೊಂಡು, ದುಡ್ಡು ಇಲ್ಲದಿದ್ದರೆ ದುಡ್ಡು ಕೊಟ್ಟು ಕೊಂಡು ಯಾವತ್ತೂ ಮಾನವೀಯತೆಯ ಅನುಕಂಪ ತೋರಿಸಿಕೊಂಡು ನಮ್ಮ ದಯಾತೆ ಇರುವ ಜಮೀನುದಾರರು ಇದ್ದಾರೆ. ಕೆಲವು ಜಮೀನುದಾರರು, ಗೇಣೀದಾರರು ಗೇಣಿ ಕೊಟ್ಟರೆ ತೆಗೆದುಕೊಂಡು, ಕೊಡದೇ ಹೋದರೆ ಕೋರ್ಟಿಗೂ ಹೋಗದೆ ಇರುವವರು ಇದ್ದಾರೆ. ಪಹಣಿಯಲ್ಲಿ ವ್ಯತ್ಯಾಸಮಾಡಿ ಎಲ್ಲಾ ಸ್ವಂತ ಸಾಗುವಳಿ ಮಾಡಿ ಕೊಳ್ಳುವ ಆಸ್ತಿ ಎಂದು ಕುಟಿಲ ತಂತ್ರವನ್ನು ಕೂಡ ಮಾಡಲಿಲ್ಲ. ಕೇವಲ ಮಾನವೀಯತೆಯ ದೃಷ್ಟಿಯಿಂದ ಇವನೂ ನನ್ನ ಹಾಗೆ ಬದುಕಬೇಕು ಎನ್ನುವ ಜಮೀನುದಾರರು ಇದ್ದಾರೆ. ಅಂತಹವರ ಪರಿಸ್ಥಿತಿ ಏನು? ಅವರು ಅಶನವಸನಗಳನ್ನು ಮಾಡಿದಾರಾದೆ? ನಾಲ್ಕು ಜನರಂತೆ ಇವರೂ ಕೂಡ ಬದುಕಬಾರದೆ, ಎನ್ನುವ ಪ್ರಶ್ನೆಯನ್ನು ನಾವು ಯೋಚನೆ ಮಾಡಬೇಕಾಗಿದೆ. ಏನೋ; ಇದರಲ್ಲಿ ೧ ವರ್ಷದ ಇನ್‌ಕಂ ಟ್ಯಾಕ್ಸ್ ಅಸೆಸ್‌ಮೆಂಟ್ ಮೇಲೆ 12,000 ರೂಪಾಯಿ ಎಂದು ನಿಗದಿ ಮಾಡಿದ್ದೀರಿ. ನಾನು ಕೇಳುತ್ತೇನೆ, ಎಲ್ಲಿಯವರೆಗೆ ಈ ದೇಶದಲ್ಲಿ ಕಪ್ಪು ಹಣವನ್ನು ಹೊರಗೆ ತರುವುದಿಲ್ಲವೋ, ಅಲ್ಲಿಯವರೆಗೆ ಇನ್‌ಕಂ ಟ್ಯಾಕ್ಸ್‌ಗೆ ಅಥವಾ ಯಾವ ಟ್ಯಾಕ್ಸಿಗೂ ಒಳಪಡದೆ ಲಕ್ಷಗಟ್ಟಲೆ ಉತ್ಪತ್ತಿ ಬರುತಕ್ಕ ಕೋಟ್ಯಾಧೀಶರು ಪಟ್ಟಣಗಳಲ್ಲಿ, ನಗರಗಳಲ್ಲಿ ಇದ್ದಾರೆ. ಇವರಿಗೆ ಯಾವ ಟ್ಯಾಕ್ಸೂ ಇಲ್ಲ. ಆದೇ ಜಮೀನುದಾರರು ಎಂದು ಏನು ಕರೆಯುತ್ತೀರಿ, ಅವರ ಜಮೀನು ಮೇಲಕ್ಕೆ ಎಷ್ಟು ಕಾಣುತ್ತದೆ. ಆದುದರಿಂದ ಎಲ್ಲ ಟ್ಯಾಕ್ಸಿಗೂ ಅವರು ಒಳಪಡಬೇಕು. ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್, ಅಗ್ರಿಕಲ್ಚರಲ್ ವೆಲ್ತ್ ಟ್ಯಾಕ್ಸ್ ಎಲ್ಲ ಅತನು ಕೊಡಬೇಕು. ಅವನಿಗೆ ದುಡ್ಡು ಬರಲಿ ಬಾರದೆ ಇರಲಿ, ಕೈಯ್ಯಲ್ಲಿ ದುಡ್ಡು ಇರಲಿ ಇಲ್ಲದೇ ಇರಲಿ, ಪ್ರತಿಯೊಂದು ಟ್ಯಾಕ್ಸ್‌ನ್ನೂ ಕೊಡಬೇಕಾಗಿದೆ. ಹಕ್ಕು ಉಳಿಸಿಕೊಳ್ಳಲು ಅವನು ಸಾಲ ಮಾಡಿ ಟ್ಯಾಕ್ಸ್ ಕೊಡುತ್ತಾನೆ. ಈ 12 ಸಾವಿರ ಉತ್ಪತ್ತಿಯಿಂದ ಯಾರಿಗೆ ತೊಂದರೆ, ಅಂದರೆ ಸರ್ಕಾರಿ ನೌಕರಿಯಲ್ಲಿರತಕ್ಕ ಕೆಲವೇ ಜನ ಅಧಿಕಾರಿಗಳಿಗೆ ಇದರಿಂದ ತೊಂದರೆಯಾಗುತ್ತದೋ ಏನೋ ಯಾವ ಒಬ್ಬ ವ್ಯಾಪಾರಸ್ಥನಿಗೂ, ವ್ಯವಹಾರಸ್ಥನಿಗೂ ಇದರಿಂದ ತೊಂದರೆಯಾಗುತ್ತದೆಂದು ನನಗನ್ನಿಸುವುದಿಲ್ಲ. ತಾವು ೫ ವರ್ಷದ ಅಂಕಿಅಂಶ ಆಧಾರ ಇಟ್ಟಿದ್ದೀರಿ. ಅವನು ಒಂದು ವರ್ಷ 5,000 ರೂಪಾಯಿ ಎಂದು, ತೋರಿಸುತ್ತಾನೆ ಇನ್ನೊಂದು ವರ್ಷ 10,000 ರೂಪಾಯಿ ಎಂದು ತೋರಿಸುತ್ತಾನೆ. ಮತ್ತೊಂದು ವರ್ಷ 15,000 ರೂಪಾಯಿ ಎಂದು ತೋರಿಸುತ್ತಾನೆ. ದಾಮಾಷಾ ಪ್ರಕಾರ ನೋಡಿದರೆ, ಅವನಿಗೆ ಇದು ಲಾಗೂ ಆಗುವುದಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಇದು ಸರ್ಕಾರಿ ನೌಕರರಿಗೆ ಮಾತ್ರ ಲಾಗು ಆಗುತ್ತದೆಂದು ನಮ್ಮ ಅಭಿಪ್ರಾಯ ತಿಳಿಸಿದರಿ. ಅವನು ಇವ್ಹಕಂಟ್ಯಾಕ್ಸ್‌ನ ವರ್ಷ ಕಂಪಿನ್ಯೂಯಸ್ ಆಗಿ ಕಟ್ಟ

ಬೇಕು ಎಂದು ಇದೆ. ಪ್ರತಿವರ್ಷ 12,000 ರೂಪಾಯಿ ಕೊಟ್ಟಿರಬೇಕು. ಅಂದರೆ, ಅವರು ತಿಂಗಳಿಗೆ 1000 ರೂಪಾಯಿ ಸಂಬಳ ತೆಗೆದು ಕೊಂಡಿರಬೇಕು. ಅಂತಹವರು ಸರ್ಕಾರದ ನೌಕರಿಯಲ್ಲಿ ಎಷ್ಟು ಜನ ಇದ್ದಾರೆ?

ಶ್ರೀ ಎಸ್. ಎಂ. ಶಿರವಾಳೆ ಚಂದ್ರಶೇಖರ್.—ನನ್ನ ಅರ್ಥ ಅದು ಅಲ್ಲ. 5 ವರ್ಷವಿನ್ ಕಂಟ್ಯಾಕ್ಟ್ ನಿರ್ಮಿತಿ ಮಾಡಿರುವುದರಿಂದ 5 ವರ್ಷ ಒಂದೇ ತರಹ ಉತ್ಪತ್ತಿ ಬರತಕ್ಕವನು ಕೇವಲ ಸರ್ಕಾರಿನೌಕರ ಮಾತ್ರ. ವ್ಯಾಪಾರನ್ಥರು, ವ್ಯವಹಾರಸ್ಥರ ಆದಾಯದಲ್ಲಿ ಏರುಪೇರು ಇರುತ್ತದೆ 12,000 ರೂಪಾಯಿ ಒಂದು ವರ್ಷ ಇರಬೇಕು, ಇನ್ನೊಂದು ವರ್ಷ ಅದು 4ಸಾವಿರಕ್ಕೆ ಬರಬಹುದು. ಮುಂದಿನ ವರ್ಷ 15 ಸಾವಿರ ರೂಪಾಯಿಗೆ ಹೋಗಬಹುದು. ಒಂದು ವರ್ಷದ ಉತ್ಪತ್ತಿ ಕಡಿಮೆ ಯಾದರೆ ಅವನಿಗೆ ಜಮೀನು ಇಟ್ಟುಕೊಳ್ಳುವುದಕ್ಕೆ ತಾವು ಅವಕಾಶ ಕೊಡ್ತೀರಿ. 5 ವರ್ಷ ಬ್ಯಾಲನ್ಸ್ ಆಗಿ ಇರಬೇಕು. 12,000 ರೂಪಾಯಿ ಮೇಲೆ ಇರಬೇಕು. ಅದರ ಒಳಗೆ ಇರುವ ಹಾಗಿಲ್ಲ. 1000 ರೂಪಾಯಿ ಸಂಬಳ ತೆಗೆದುಕೊಳ್ಳುವವನು ಕೇವಲ ಸರ್ಕಾರಿ ನೌಕರನು ಮಾತ್ರ. ಇದರಿಂದ ಅವನಿಗೆ ತೊಂದರೆಯಾಗುತ್ತದೆ. ಅದರಿಂದ ಎಷ್ಟು ಎಕರೆ ಜಮೀನು ಹಂಚಲಿಕ್ಕೆ ಸಿಗುತ್ತದೆ ಎಂದು ಕೇಳುತ್ತೇನೆ. ಈ ಕಾನೂನಿನಲ್ಲಿ 12,000 ರೂಪಾಯಿ ಮಾಡಿದ್ದೇವೆ ಎಂದು ತೃಪ್ತಿಪಡಬೇಕಾಗಿದೆಯೇ ಹೊರತು, ಅದರಿಂದ ಬೇರೆ ಯಾವ ಪ್ರಯೋಜನವೂ ಆಗುವುದಿಲ್ಲ. ಯಾರು 12,000 ರೂಪಾಯಿ ಇಷ್ಟ ಎಂದು ತೋರಿಸಿಕೊಳ್ಳುತ್ತಾರೆ? ವಕೀಲರು, ವ್ಯಾಪಾರನ್ಥರು ಡಾಕ್ಟರು ಯಾರೇ ಆಗಲಿ ವರ್ಷಕ್ಕೆ ಒಂದು ಸಾರಿ ಲಂಪ್‌ಸಮ್ ಲೆಕ್ಕ ಬರೆಯುತ್ತಾರೆ. ಯಾರು ಸಂಪೂರ್ಣವಾಗಿ ಲೆಕ್ಕ ಬರೆಯುತ್ತಾರೆ? ಮಾರ್ಚ್ ತಿಂಗಳು ಬಂತು, ಇನ್‌ಕಂಟ್ಯಾಕ್ಸ್ ಲೆಕ್ಕ ಕೊಡಬೇಕು ಎಂದು ಕೊಡುತ್ತಾರೆ. ಇನ್‌ಕಂಟ್ಯಾಕ್ಸ್‌ಅಧೀಸಿನಲ್ಲಿ ಲೆಕ್ಕ ಹಾಗೆ ಒಪ್ಪಿಸುವುದಕ್ಕೆ ಸಾಧ್ಯ ಎಂದು ತಮಗೆ ಗೊತ್ತಿದೆ. ಅದನ್ನು ವಿವರವಾಗಿ ಹೇಳಬೇಕಾದ ಪ್ರಮೇಯವಿಲ್ಲ. ತೊಂದರೆ ಯಾರಿಗೆ ಆಗುತ್ತದೆ ಎಂದರೆ, ಕೇವಲ ಸರ್ಕಾರಿ ನೌಕರರಿಗೆ ಮಾತ್ರ ಆಗುತ್ತದೆ. ಅವರ ಪರಿಸ್ಥಿತಿ ಯೋಚನೆ ಮಾಡ ಬೇಕೋ ಬೇಡವೋ ಎಂದು ನಾನು ಕೇಳುತ್ತೇನೆ. ಕೆಲವು ಸರ್ಕಾರಿ ನೌಕರರಿಗೆ 12,000 ಸಂಬಳ ಬರಬಹುದು. ಆತ ರಿಜಿಸ್ಟರ್ ಆದ ಮೇಲೆ ಅತನ ಅಪ್ಪ ಅಜ್ಜ ಮಾಡಿದ್ದ ಜಮೀನು ಏನಿತ್ತು ಅದು ಹೋಯಿತು ಎಂದು ಇಟ್ಟುಕೊಳ್ಳಿ. ಸಾವಿರ ರೂಪಾಯಿ ಸಂಬಳ ತೆಗೆದುಕೊಳತಕ್ಕವನು ಫ್ಯಾಮಿಲಿ ಪ್ಲಾನಿಂಗ್ ಅನುಸರಿಸಿರುವುದಿಲ್ಲ. ಆತನು ಹಿಂದಿನ ಕಾಲದವನು. ಆತನಿಗೆ 7—8 ಮಕ್ಕಳು ಇರುತ್ತಾರೆ. ಆ ಮಕ್ಕಳ ಪರಿಸ್ಥಿತಿ ಏನು, ಆತನ ಜೀವನ ಕ್ರಮ ಏನು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿತ್ತು. ಕೇವಲ ಒಂದು ವರ್ಗಕ್ಕೆ ಮಾತ್ರ ಇದರಿಂದ ಪರಿಣಾಮವಾಗುತ್ತದೆ ಬಾಕಿಯವರಿಗೆ ಪರಿಣಾಮವಾಗುವುದಿಲ್ಲ ಎನ್ನುವ ವಾದ ನನ್ನದು. ಇಷ್ಟು ಹೇಳಿ ಒಂದೊಂದು ಸೆಕ್ಷನ್‌ನಲ್ಲಿ ನಾನು ಕಂಡಂಥ ನ್ಯೂನತೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

4-00 P.M.

ಇನ್ನು ಟ್ರಾನ್ಸ್‌ಫರ್ ವಿಚಾರದಲ್ಲಿ ಹೇಳುವುದಾದರೆ Clause 15 (ii). That transfers effect d after 18th November 1961 and before 2nd October 1965 and after 24th January 1971 otherwise than by partition..." ಇದು ಎಂತಹ ವಿಪರ್ಯಾಸ ಎಂದರೆ ತಾವು ಇದನ್ನು 1961ನೇ ಇಸವಿ ಎಂದಾದರೂ ಹೇಳಿ ಬಹುದಾಗಿತ್ತು, ಇಲ್ಲವೆ 1971ನೇ ಇಸವಿ ಎಂದಾದರೂ ಇಟ್ಟಿದ್ದರೆ ಯಾರೂ ಬೇಡ ಅನ್ನುತ್ತಿರಲಿಲ್ಲ. ಏತಕ್ಕೆಂದರೆ ನೀವು 1971ರಲ್ಲಿ ದೇಶದಲ್ಲಿ ಈ ವಿಚಾರದಲ್ಲಿ ಪ್ರಣಾಳಿಕೆ ಕೊಟ್ಟಿದ್ದೀರಿ. ಈಪೊತ್ತು 1961 ರಿಂದ 1971 ರವರೆಗೆ ಎಷ್ಟೋ ವರ್ಗಾವಣೆಗಳು ಆಗಿಹೋಗಿವೆ. ಇದನ್ನು ನೋಡಿದರೆ ಸರ್ಕಾರ ಏನಾದರೂ ರಕ್ಷಣೆ ಕೊಟ್ಟಿದೆಯೋ ಏನೋ ಅರ್ಥವಾಗುವುದಿಲ್ಲ. ಮತ್ತು 1965ರ ಹಿಂದೆ ಮತ್ತು 1971ರ ಈಚೆಗೆ ಆಗಿರುವ ಅವ್ಯವಹಾರಗಳು ನೋಡಿದರೆ ಬೇಕಾದಷ್ಟು ಭಾಗದಲ್ಲಿ ನ್ಯಾಯಬಾಹಿರವಾಗಿ ನಡೆದುಹೋಗಿವೆ. ಇದಕ್ಕೆ ನಾನು ಏನು ವಿವರಣೆ ಕೊಡಬೇಕೋ ನನಗಂತೂ ಅರ್ಥವಾಗುವುದಿಲ್ಲ. ಈ ದೇಶದಲ್ಲಿ ಆಂಧ್ರೋಳನ ನಡೆದು ರೆಟ್ರಾಸ್ಪೆಕ್ಟೀವ್ ಎಫ್‌ಫೆಕ್ಟೀವ್‌ನಿಂದಲೇ ಎಷ್ಟೋ ಬದಲಾವಣೆಗಳು ಆಗಿವೆ. 1965 ರಿಂದ 1971 ರವರೆಗೆ ಆಗಿರತಕ್ಕಂಥ ಬದಲಾವಣೆಗಳು ಯಾವ ಕಾಲದಲ್ಲೂ ಆಗಿಲ್ಲ. ಅಂಥಾ ವ್ಯಾಪಾರ ವ್ಯವಸ್ಥೆಗಳು ಆಗಿಹೋಗಿವೆ. ತಾವು 1961 ರಿಂದ 1971 ರವರೆಗೆ ಈ ಜಮೀನಿನ ವ್ಯವಹಾರದಲ್ಲಿ ವರ್ಗಾವಣೆ, ವ್ಯಾಪಾರವಾಗಲಿ ಮಾಡಕೂಡದು ಎಂದು ಒಂದು ಅರ್ಡಿನೆನ್ಸ್‌ನ್ನು ಹೊರಡಿಸಬಹುದಾಗಿತ್ತಲ್ಲಾ. ಈ ಬಗ್ಗೆ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಒಂದು ವಿರಾಮ ಹಾಕಿದ್ದರೆ ಈ ಕಷ್ಟಗಳು ತಪ್ಪುತ್ತಿತ್ತೋ ಏನೋ? ಇದು ಇಂತಿಂಥ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಪೀರಿಯಡ್‌ನಲ್ಲಿ ಈ ರೀತಿ ಬರುತ್ತದೆ ಎಂದು ಎಷ್ಟು ಜನಕ್ಕೆ ಗೊತ್ತಿರುತ್ತದೆ? ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಯವರಿಗೆ ಗೊತ್ತಿರಬಹುದು. ಸಾಮಾನ್ಯ ಜನಕ್ಕೆ ಗೊತ್ತಿರುವುದಿಲ್ಲ. ಈಪೊತ್ತು ಅವನು ಏನಾದರೂ ಜಮೀನಿನ ಮೇಲೆ ಸಾಲ ಮಾಡಿಕೊಂಡಿದ್ದರೆ ಲ್ಯಾಂಡ್ ಮಾರ್ಟ್‌ಗೇಜ್‌ನಲ್ಲಿ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಸಾಲ ಮಾಡಿಕೊಂಡಿದ್ದರೆ ಅದಕ್ಕೇನೂ ಅಡ್ಡಿ ಇಲ್ಲ ಎಂದು ಹೇಳುತ್ತೀರಿ. ಆದರೆ ಖಾನಗೀ ಮನುಷ್ಯನ ಹತ್ತಿರ ಜಮೀನಿನ ಮೇಲೆ ಸಾಲ ಮಾಡಿಕೊಂಡಿದ್ದರೆ ಆ ಸಾಲವನ್ನು ತೀರ್ಮಾನ ಮಾಡುತ್ತೀರಾ! ಈ ಭೂಸುಧಾರಣೆಯಲ್ಲಿ ಅದನ್ನೂ ಕೂಡ ಅಳವಡಿಸಿಕೊಂಡು ಹೋಗಬೇಕಾಗಿತು. It is not the ignorance of law. Ignorance of law is no excuse 1965ರ ಒಳಗೆ, 1971 ರಿಂದ ಈಚೆಗೆ ತನ್ನ ಸಂಸಾರದ ಕಷ್ಟಕ್ಕೋ ಏನೋ ತಾನು ಕಷ್ಟಪಟ್ಟು ಸಂಪಾದನೆ ಮಾಡಿಕೊಂಡಿರತಕ್ಕಂಥ ಜಮೀನನ್ನು ಅವನು ಮಾರಿಕೊಂಡಿದ್ದರೆ ಅದನ್ನು ಅಪರಾಧ ಎಂದು ಪರಿಗಣಿಸುತ್ತೀರಾ! ಆ ಜಮೀನನ್ನು ಕಸಿದುಕೊಳ್ಳುತ್ತೀರಾ! ಅವನು ತನ್ನ ಜೀವನೋಪಾಯಕ್ಕೆ ಏನಾದರೂ ವ್ಯಾಪಾರ ಮಾಡಿಕೊಂಡಿದ್ದರೆ ಅದು ತಪ್ಪೇ. ತಾವು 1961 ರಿಂದ ಎಫೆಕ್ಟೀವ್‌ಗೆ ಎಂದು ಇಟ್ಟಿದ್ದರೆ ಆದು ಪರವಾಯಿಲ್ಲಾ. ಇದರ ಬಗ್ಗೆ ನಾನು ವಾದ ಮಾಡಬಹುದು. ಆದರೆ ಹೆಚ್ಚು ಕಾರಾವಕಾಶ ಇಲ್ಲದೇ ಇರುವುದರಿಂದ ಆ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. You have no business to transact any landed property ಎಂದು ಈಗ ನೀವು ಮಾಡಿರುವ ಕಾನೂನು ಹಾಪೂ ಸಾಯುವಾರದು, ಕೋರ್ಟೂ ಮುರಿಯುವಾರದು ಅಂತ ಇದೆ. 1961 ರಿಂದ 1971 ರವರೆಗೂ ಯಾರಾದರೂ ಆಗಲಿ ಈ ಜಮೀನಿನ ವ್ಯವಹಾರವಾಗಲಿ, ವರ್ಗಾವಣೆಗಳಾಗಲಿ ಮಾಡಕೂಡದು ಎಂದು ಮಾಡಿದ್ದರೆ ನಿಮ್ಮನ್ನು ಟೀಕೆ ಮಾಡುತ್ತಿದ್ದರೇ? ಈಪೊತ್ತಿನ ದಿವಸ ಈ ಬಿಲ್ಲಿನಲ್ಲಿ ಇರತಕ್ಕಂಥಾದ್ದನ್ನು ನೋಡಿದರೆ ನಮ್ಮ ಜನರೇ ಹೇಳಿಕೊಳ್ಳುತ್ತಿದ್ದಾರೆ. 1965 ರಿಂದ 1971 ರವರೆಗೆ ಯಾರ್ಯಾರು ಜಮೀನು ವ್ಯವಹಾರ ಮಾಡಿಕೊಂಡಿದ್ದಾರೆ ಅವರಿಗೋಸ್ಕರ ಈ ಕಾನೂನು ಇಟ್ಟಿದ್ದಾರೆ ಎಂದು ಜನರು ಅಡಿಕೊಳ್ಳುತ್ತಿದ್ದಾರೆ. ಈ ರೀತಿ ಜನತೆ ಅಡಿಕೊಳ್ಳುವುದು ಸರಿಯೋ ತಪ್ಪೋ. ಆದುದರಿಂದ ಇದನ್ನು 1965 ರಿಂದ 1971 ರವರೆಗೆ ಇರತಕ್ಕ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಇರುವುದನ್ನು ತೆಗೆಯಿರಿ, ಇಲ್ಲವೇ 1961 ರಿಂದ ಎಂದಾದರೂ ಇಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು 1965ರಲ್ಲಿ ಯಾವಾಗ ಕಾನೂನು ಜಾರಿಗೆ ಬಂತೋ ಆದೇ ಕಾನೂನು ಈಪೊತ್ತೂ ಕೂಡ ಜಾರಿಯಲ್ಲದೆ. ಸೀಲಿಂಗ್ ಲಿಮಿಟ್‌ನಲ್ಲಿರತಕ್ಕಂಥ ಹೆಚ್ಚಿಗೆ ಜಮೀನನ್ನು ಮಾರಿದ್ದರೆ ಈಗಿನ ಸೀಲಿಂಗ್ ಲಿಮಿಟ್ ಒಳಗಡೆ ಇದ್ದರೂ ಕೂಡ ಅದನ್ನು ಸರ್ಕಾರಕ್ಕೆ ಕೊಡಬೇಕು ಅನ್ನುವುದು ಕಾನೂನಿನಲ್ಲೇ ಇದೆ. ಆ ರೀತಿಯಾಗಿ ಭೂಮಾಲೀಕನ ಹತ್ತಿರ ಹೆಚ್ಚಿಗೆ ಇರತಕ್ಕಂಥ ಜಮೀನನ್ನು ಸರ್ಕಾರ ತೆಗೆದುಕೊಳ್ಳಬೇಕು. ಈ ಕಾನೂನನ್ನು ಮಾನ್ಯ ಸದಸ್ಯರು ನೋಡಿದ್ದರೆ ಈ ಬಗ್ಗೆ ಪ್ರಶ್ನೆಯೇ ಬರುತ್ತಿರಲಿಲ್ಲ ಎಂದು ನನಗೆ ಅನಿಸುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಭಾನುವಾರದ ದಿವಸ ಈ ಆಕ್ಟ್‌ನ್ನು ಪೂರ್ತ ಓದಿದ್ದೇನೆ. ನನ್ನ ಪ್ರಶ್ನೆ ಏನೆಂದರೆ ಹಿಂದಿನ ಆಕ್ಟ್‌ನಲ್ಲಿ ಒಬ್ಬ ಮನುಷ್ಯನಿಗೆ 27 ಸ್ಕ್ವ್ಯಾಂದರ್ಡ್ ಎಕರೆ ಇರಬೇಕು ಅಂತ ಇದೆ. ಅವನಿಗೆ ಈಪೊತ್ತಿನ ದಿವಸ ಇಷ್ಟೇ ಸೀಲಿಂಗ್ ಲಿಮಿಟ್ ಬರುತ್ತದೆ ಎನ್ನುವುದು ಏನು ಗೊತ್ತು? ಅವನಿಗೆ 10 ಎಕರೆ, 15 ಎಕರೆ, 18 ಎಕರೆ ಸೀಲಿಂಗ್ ಲಿಮಿಟ್ ಬರುತ್ತದೆ ಎನ್ನುವುದು ಏನು ಗೊತ್ತು? ಅವನು ಹಿಂದಿನ ಒಂದು ಸೀಲಿಂಗ್ ಲಿಮಿಟ್, 27 ಸ್ಕ್ವ್ಯಾಂದರ್ಡ್ ಎಕರೆ ಅಂತ ಏನು ಇತ್ತೋ ಆ ಸೀಲಿಗ್ ಲಿಮಿಟ್ ಒಳಗೇ ಇದ್ದಂಥ ಜಮೀನನಲ್ಲೇ 17 ಎಕರೆಯನ್ನೋ 18 ಎಕರೆಯನ್ನೋ ಮಾರಿಕೊಂಡಿದ್ದರೆ ಅದು ತಪ್ಪೇ? ಇದಕ್ಕೆ ತಾವು ಈಗ ಉತ್ತರ ಹೇಳದೇ ಇದ್ದರೂ ತಾವು ಉತ್ತರ ಕೊಡುವಾಗಲಾದರೂ ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೀಲಿಂಗ್ ಲಿಮಿಟ್ ಬಗ್ಗೆ ನಾನು 1973ನೇ ಇಸವಿಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇಷ್ಟೇ ಸೀಲಿಂಗ್ ಬರುತ್ತಿತ್ತು ಎಂದು ಯಾರಿಗೂ ಗೊತ್ತಿಲ್ಲ. ಸೀಲಿಂಗ್‌ಗಿಂತ ಹೆಚ್ಚಿಗೆ ಜಮೀನು ಇದ್ದರೆ ಅದನ್ನು ಮಾರಿದರೆ ಅಡ್ಡಿ ಇದೆ. ಅದು ಸೀಲಿಂಗ್ ಲಿಮಿಟ್‌ನಲ್ಲೇ ಇದರೂ ಸಹ ಅವನು ಗೊತ್ತಿಲ್ಲದೇ ಜಮೀನನ್ನು ಮಾರಿರಬಹುದು. ಆದರೂ ಕೂಡ ಹಿಂದೆ ಇದ್ದಂಥ ಸೀಲಿಂಗ್ ಲಿಮಿಟ್ ಮೇಲೆ ಮಾರಿ ಈಪೊತ್ತಿನ ದಿವಸ ಅವನಿಗೆ ಜಮೀನು ಕಡಿಮೆ ಇರಬಹುದು. ಅದನ್ನು ಈಗಲೇ ಹೇಳುವುದು ಕಷ್ಟಕರವಾದ ವಿಷಯ. ಅದನ್ನು ಆರೋಚನೆ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವನು ಆ ಜಮೀನನ್ನು ಉದ್ದೇಶಪೂರ್ವಕವಾಗಿ ಮಾರಿರುವುದಿಲ್ಲ. ತನ್ನ ಸಂಕಷ್ಟಗಳಿಗೋ, ಅಥವಾ ತನ್ನ ಸಾಲಕ್ಕೋ ಅಥವಾ ತನ್ನ ಹೆಣ್ಣುಮಕ್ಕಳ ಮದುವೆಗೋ ಅಥವಾ ಅಸ್ತಿ ಮಾಡುವುದಕ್ಕೋ ಮಾರಿದ್ದರೆ ಆಂಥಾ ಸಂದರ್ಭದಲ್ಲಿ ಈ ರೀತಿ ಮಾಡುವುದು ತಪ್ಪೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವನು ಗೇಣಿದಾರರಿಗೆ ಮಾರಿದ್ದರೆ, ಅಣ್ಣ ತಮ್ಮಂದಿರಿಗೆ ಹಿಸ್ಸೆ ಆಗಿದ್ಯರೆ ಅವಕ್ಕೆ ಏನಾಯಿತಿ ಇದೆ. ಆದು ಬಿಟ್ಟು ಅವನು ಕಾನೂನು ಮೀರಿ ಮಾರಿದ್ದರೆ ಅದು ಅಪರಾಧವಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರು ಶೇಖರ್.—ಅವನ್ನು ಸ್ವಂತ ಸಾಗುವಳಿ 27 ಎಕರೆ ಮಾಡುತ್ತಾ ಇದ್ದು ಅದರಲ್ಲಿ 17 ಎಕರೆ ಕೊಟ್ಟಿದ್ದರೆ ಅದು ತಪ್ಪೊ ಸರಿಯೋ? 27 ಸ್ಯಾಂಡರ್ಡ್ ಎಕರೆಗಿಂತ ಜಾಸ್ತಿ ಇದ್ದು ಅವನು ಜಮೀನನ್ನು ಕೊಟ್ಟಿದ್ದರೆ ಅದು ಅಪರಾಧವಾಗುತ್ತದೆ. ನಾನು ಗೇಣಿದಾರರ ಪ್ರಶ್ನೆ ಹೇಳಲಿಲ್ಲ. ಗೇಣಿದಾರರಿಗೇನೇ ಕೊಟ್ಟಿದ್ದರೆ ಸರಿ. ಬೇರೆಯರಿಗೆ ಕೊಟ್ಟಿದ್ದರೆ ಅಪರಾಧವಾಗುತ್ತದೆ, ತಾವು ಹೇಳುವುದು ಸರಿ. ಅವನು ಸ್ವಂತ ಸಾಗುವಳಿ ಮಾಡುತ್ತಾ ಇದ್ದು 27 ಸ್ಯಾಂಡರ್ಡ್ ಎಕರೆಯಲ್ಲಿ 17 ಎಕರೆ ಕೊಟ್ಟಿದ್ದರೆ ತಪ್ಪೋ ಸರಿಯೋ? ಇದಕ್ಕೆ ಈಗ ಉತ್ತರ ಹೇಳದೆ ಇದ್ದರೂ ತಾವು ರಿಪ್ಲೈ ಮಾಡುವಾಗ ಉತ್ತರ ಕೊಡಿ.

ಭೂ ಸುಧಾರಣೆಯನ್ನು ತರುತ್ತೇವೆಂದು 25 ವರ್ಷದಿಂದ ಹೇಳಿಕೊಂಡು 'ಹಾವೂ ಸಾಯಬಾರದು ಕೋಲೂ ಮುರಿಯಬಾರದು' ಎನ್ನುವ ನೀತಿಯನ್ನು ಅನುಸರಿಸಿಕೊಂಡು ಬಂದುದರಿಂದ ಇದನ್ನೆಲ್ಲ ಜನ ಅನುಭವಿಸಬೇಕಾಗಿದೆ. ಕೂಡಲೇ ತರತಕ್ಕ ಕಾನೂನನ್ನು ಜಾರಿಗೆ ತಂದಿದ್ದರೆ ಇಷ್ಟು ಅನಾಹುತವಾಗುತ್ತಿರಲಿಲ್ಲವೇನೋ ಎಂದನ್ನಿಸುತ್ತದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಹಿಂದಿನ ಕಾನೂನು ಪ್ರಕಾರ 27 ಎಕರೆ ಸೀಲಿಂಗ್ ಲಿಮಿಟ್ ಇತ್ತು. ಈಗ 10 ಎಕರೆ ಸೀಲಿಂಗ್ ಲಿಮಿಟ್ ಮಾಡುತ್ತೇವೆಂದು ಇಟ್ಟುಕೊಳ್ಳೋಣ ಅದಕ್ಕಿಂತ ಹೆಚ್ಚು ಇರುವುದನ್ನು ಇಟ್ಟುಕೊಂಡಿದ್ದರೆ ಅದನ್ನು ಸರಂಡರ್ ಮಾಡಬೇಕಾಗಿಲ್ಲೋ ಇಲ್ಲವೋ?

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಸೆರೆಕ್ಟ್ ಕಮಿಟಿ ರಿಪೋರ್ಟ್ ಪ್ರಕಾರ, ಎಷ್ಟು ಜಮೀನಿದೆ ಎಂದು ಲೆಕ್ಕ ಹಾಕುವಾಗ ಅವನು ಮಾರಾಟ ಮಾಡಿರುವುದನ್ನೂ ಲೆಕ್ಕ ಮಾಡಿ ನರ್ಪ್ಲಸ್ ಆಯಿತು ಎಂದು ಎಷ್ಟು ಜಮೀನು ತೆಗೆದುಕೊಳ್ಳುತ್ತೀರಿ? ಹಿಂದಿನ ಸೀಲಿಂಗ್ ಪ್ರಕಾರ 27 ಎಕರೆ ಇತ್ತು. ಅದರಲ್ಲಿ 17 ಎಕರೆ ಮಾರಾಟ ಮಾಡಿದ್ದರೆ ಉಳಿದುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆಂದರೆ ಅವನ ಹತ್ತಿರ ಜಮೀನೇ ಇಲ್ಲ. ಒಂದು ಎಕರೆ ಜಮೀನು ಕೂಡ ಇರುವುದಿಲ್ಲ. ಈ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಅವನು ಯಾವ ಅಪರಾಧಕ್ಕಾಗಿ ಜಮೀನು ಕಳೆದುಕೊಳ್ಳಬೇಕು ಎನ್ನುವುದು ಅರ್ಥವಾಗುವುದಿಲ್ಲ. ಒಂದು ಅರ್ಡಿನೆನ್ಸ್ ಹೊರಡಿಸಿಲ್ಲ ಒಂದು ಆಜ್ಞೆ ಇಲ್ಲ, ಸಬ್ ರಿಜಸ್ಟ್ರಾರ್ ಆಫೀಸಿದಲ್ಲಿ ರಿಜಿಸ್ಟರ್ ಮಾಡಬಾರದೆಂದು ಆಜ್ಞೆ ಮಾಡಿಲ್ಲ. ಸಬ್ ರಿಜಸ್ಟ್ರಾರ್ ಅವರ ಆಫೀಸಿನಲ್ಲಿ ಬೇಕಾದ ಹಾಗೆ ಡಾಕ್ಯಮೆಂಟ್ ರಿಜಿಸ್ಟರ್‌ಗಳಾಗುತ್ತಿವೆ.

ಶ್ರೀ ಡಿ. ಕೆ. ನಾಯ್ಕರ್.—18-11-1961 ರಿಂದ 2-10-1965ರ ವರೆಗೆ ಏನು ವಿಲೇವಾರಿಗಳಾಗಿತ್ತೋ ಅದನ್ನು 1961ರ ಆಕ್ಟ್ ಪ್ರಕಾರ ಸೀಲಿಂಗ್ ಫಿಕ್ಸ್ ಮಾಡುವಾಗ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂದು ಇದೆ. ಅದೇ ಪ್ರಕಾರವಾಗಿ ಈ ಆಕ್ಟ್ ಪ್ರಕಾರ 1971 ನಂತರ ವಿಲೇವಾರಿ ಮಾಡಿರುವುದನ್ನು ಲೆಕ್ಕಕ್ಕೆ ಹಿಡಿದುಕೊಂಡು ಸೀಲಿಂಗಿಗಿಂತ ಹೆಚ್ಚು ಇದ್ದದ್ದು ಸರ್ಕಾರಕ್ಕೆ ಪುನಃ ಬರುತ್ತದೆ. ಆದರೆ ಇದರಲ್ಲಿ ಏನು ಮಾಡಿದ್ದೇವೆಂದರೆ, ಸರ್ಕಾರಕ್ಕೆ ಜಮೀನು ವಶವಾಗಬೇಕು ಅಂಥ ಜಮೀನಿಗೆ ಮಾರ್ಕೆಟ್ ವ್ಯಾಲ್ಯೂ ಪ್ರಕಾರ ಕಾಂಪೆನ್‌ಸೆಷನ್ ಕೊಡಬೇಕು ಎಂದು ಹಾಕಿದ್ದೇವೆ. ಅದನ್ನು ಮಾನ್ಯ ಸದಸ್ಯರು ದಯಮಾಡಿ ನೋಡಬೇಕು.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಮಾರ್ಕೆಟ್ ವ್ಯಾಲ್ಯೂ ಎಂದರೆ ಎಷ್ಟು ಎನ್ನುವ ಪ್ರಶ್ನೆ ಬರುತ್ತದೆ. ಟ್ರಿಬ್ಯುನಲ್ ಮಾಡಿದ ತೀರ್ಮಾನದ ಮೇಲೆ ಅಪೀಲ್ ಹೋಗುವ ಹಾಗೆ ಇಲ್ಲ. ಮಾರ್ಕೆಟ್ ವ್ಯಾಲ್ಯೂ ಎಂದರೆ ಯಾವ ಅಧಾರದ ಮೇಲೆ ನಿಗದಿ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಆಕ್ಕಪಕ್ಕದಲ್ಲಿರುವ ಜಮೀನು ಮಾರಾಟವಾಗಿರುವ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳುತ್ತೇವೆಂದರೆ ಯಾವ ರೀತಿ ಪತ್ರಗಳನ್ನು ಮಾಡಿಕೊಳ್ಳುತ್ತಾರೆನ್ನುವುದು ದೇಶಕ್ಕೆ ಗೊತ್ತಿದೆ. ಐದ ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದರೆ ಎರಡು ಸಾವಿರ ರೂಪಾಯಿಗಳಿಗೆ ಪತ್ರ ಮಾಡಿಕೊಳ್ಳುತ್ತಾರೆ. ಹೀಗೆ ಪತ್ರದ ಅಧಾರದ ಮೇಲೆ ಕೊಡುವುದಾದರೆ ಎರಡು ಸಾವಿರ ರೂಪಾಯಿ ಮಾತ್ರ ಸಿಕ್ಕುತ್ತದೆ. ಈ ರೀತಿ ನಿರ್ಣಯ ಮಾಡುವುದು ಸರಿಯಿಲ್ಲ, ಈ ಹೊತ್ತು ಮಾರಕಟ್ಟೆ ಬೆಲೆ ಜಾಸ್ತಿ ಇದೆ. ಒಂದು ಪಲ್ಲ ಬತ್ತಕ್ಕೆ 80 ರಿಂದ 100 ರೂಪಾಯಿಗಳವರೆಗೂ ಇರುವಾಗ ಜಮೀನಿನ ಬೆಲೆ ಎಷ್ಟಿದೆ ಎನ್ನುವುದನ್ನು ಲೆಕ್ಕ ಹಾಕಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೇರೆ ಮಾರ್ಗವಿದ್ದರೆ ಮಾನ್ಯ ಸದಸ್ಯರು ಸಭೆಗೆ ತಿಳಿಸಬೇಕು. ಸುತ್ತಮುತ್ತ ಇರತಕ್ಕ ಜಮೀನು ಎಷ್ಟಕ್ಕೆ ಮಾರಾಟವಾಗಿದೆ ಎನ್ನುವುದನ್ನು ನೋಡಿ ಬೆಲೆ ನಿರ್ಧರಿಸುವುದು ಸಾಮಾನ್ಯವಾಗಿ ಇರತಕ್ಕ ಪದ್ಧತಿ. ಅದೂ ಅಲ್ಲದೆ 25 ವರ್ಷಗಳಲ್ಲಿ ಅವನಿಗೆ ರೆಂಟ್ ಅಥವಾ ವರಮಾನ ಎಷ್ಟು ಬರುತ್ತಿತ್ತು ಎನ್ನುವುದನ್ನು ನೋಡಿ ಅದರ ಮೇಲೆ ಕ್ಯಾಪಿಟಲೈಸೇಷನ್ ಮಾಡುವುದು ಇನ್ನೊಂದು ಪದ್ಧತಿ. ಇವೆರಡೂ ಬಿಟ್ಟು ಬೇರೆ ಯಾವುದಾದರೂ ವಿಧಾನವಿದ್ದರೆ ಅದನ್ನು ಮಾನ್ಯ ಸದಸ್ಯರು ತಿಳಿಸಿದರೆ ಸಹಾಯಕವಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನಲ್ಲಿ ಕ್ಯಾಪಿಟಲೈಜೇಷನ್ ಮಾಡುವ ವಿಚಾರವಿದೆ ಆ ಆಧಾರದ ಮೇಲೆ ಮಾಡಬಹುದು. ಆ ಸಮಯದ ಬೆಲೆ ಏನಿದೆ ಅದನ್ನು ಆಧಾರವಾಗಿಟ್ಟುಕೊಂಡು ಬೆಲೆ ಫಿಕ್ಸ್ ಮಾಡಿದರೆ ನ್ಯಾಯವಾಗಿರುತ್ತದೆಂದು ಕಾಣುತ್ತದೆ. ಇದನ್ನು ಆಕ್ಟ್‌ನಲ್ಲಿ ಸೇರಿಸಬೇಕು ಹೀಗೆ ಮಾಡುವುದರಿಂದ ಎಲ್ಲರಿಗೂ ನ್ಯಾಯ ದೊರಕುತ್ತದೆ. ಇಲ್ಲದೆ ಹೋದರೆ ಮಾರ್ಕೆಟ್ ವ್ಯಾಲ್ಯೂ ಎಂದರೆ ರೆವಿನ್ಯೂ ಅಧಿಕಾರಿಗಳು ನಿರ್ಧರ ಮಾಡಿದ್ದೇ ಬೆಲೆಯಾಗುತ್ತದೆ.

I will read Clause 64 for the information of the House. It reads thus :

> "The Committee are of the opinion that there should be no exemption for regimental farms and co-operative farms and that plantations should be exempted from the provisions of Sections 63, 79A and 79B.
>
> The Committee are also of the opinion that in future plantations exceeding 20 units (including existing holding) should not be acquired. Accordingly suitable provisions are made in section 104."

ಸರ್ಕಾರದಿಂದ ತೆಗೆದುಕೊಳ್ಳತಕ್ಕ ಲೀಸ್ ಏನಿದೆ 20 ವರ್ಷ ಲೀಸ್ ಎಂದು ತೆಗೆದುಕೊಂಡಿದ್ದರೆ ಅದಕ್ಕೆ ಕೂಡ ಎಗ್ಸೆಂಪ್ಷನ್ ಇದೆ ಎಂದು ಹೇಳಿದ್ದಾರೆ. ಇದು ಕೂಡ ತಾರತಮ್ಯವಾಗುವುದಿಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. 20 ವರ್ಷ ಲೀಸಿಗೆ ತೆಗೆದುಕೊಂಡವನಿಗೆ ಎಗ್ಸೆಂಪ್ಷನ್ ಕೊಟ್ಟು 30 ವರ್ಷಕ್ಕೆ ತೆಗೆದುಕೊಂಡಿರುವವನಿಗೆ ಕೊಡುವುದಿಲ್ಲವೆಂದರೆ ಇದು ಯಾವ ನ್ಯಾಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. I would like to read clause 71 in this connection. It reads thus :

> "The Committee are of the opinion that in order to expedite the implementation of the Act, it is necessary that the several functions which were hitherto entrusted under the Act to the Court should be entrusted to the Tahsildr. Necessary amendments have been made in the relevant provisions of the Act and in section 112 these are detailed by enumerating the duties to beb performed by the Tahsildar, the Court and the Tribunal."

ಒಬ್ಬರಿಗೊಬ್ಬರಿಗೆ ಹಕ್ಕುದಾರಿಕೆ ಪ್ರಶ್ನೆ ಬಂದಾಗ ತಹಸೀಲ್ದಾರನಾದವನು ಅದನ್ನು ಕೋರ್ಟಿಗೆ ರೆಫರ್ ಮಾಡಬಹುದು ಎಂದು ಹೇಳಿದ್ದಾರೆ. ಅದು ಯಾವಾಗ ತೀರ್ಮಾನವಾಗುವುದು ? ಇದಕ್ಕೆ ಒಬ್ಬ ಕಾನೂನು ಪರಿಣತರನ್ನು ನೇಮಕ ಮಾಡಿದ್ದರೆ ಆ ಹಕ್ಕುದಾರಿಕೆ ಪ್ರಶ್ನೆಯನ್ನು ಅಲ್ಲೇ ಆತ ತೀರ್ಮಾನ ಮಾಡುತ್ತಿದ್ದರು. ಈ ಒಂದು ಪಾಯಿಂಟ್‌ಗೋಸ್ಕರ ಕೋರ್ಟಿಗೆ ರೆಫರ್ ಮಾಡಬೇಕು ಎಂದರೆ ಕೋರ್ಟ್‌ನವರು ತೀರ್ಪು ಕೊಡುವುದು ಯಾವಾಗ ? ಅವರು ತೀರ್ಪು ಕೊಡುವವರೆಗೂ ಕಾದಿರಬೇಕು. ಹೀಗಾದರೆ ಭೂ ಸುಧಾರಣೆ ಹಾರಿಗೆ ಬರುವುದು ಯಾವಾಗ ? ಮತ್ತೆ ಯಥಾಪ್ರಕಾರ ಒಂದೇ ಒಂದು ನ್ಯೂನತೆಯ ಮೇಲೆ ವರ್ಷಗಟ್ಟಲೆ ಎಳೆಯುವುದಕ್ಕೆ ಸಾಧ್ಯವಿದೆ. ದಯವಿಟ್ಟು ಕೋರ್ಟಿಗೆ ಹಾಕಿ, ಸ್ವಲ್ಪ ದಿವಸ ಇರಲಿ ಎಂದು ನಾನು ತಹಸೀಲ್ದಾರರಿಗೆ ಹೇಳಿ ಕೋರ್ಟಿಗೆ ಹಾಕಿಸುತ್ತೇನೆ. ಅದು ಇತ್ಯರ್ಥವಾಗುವವರೆಗೂ ಮತ್ತು ಅದರ ಮೇಲೆ ಅಪೀಲ್

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿಗೆ ಸೇರಿಗಿ ತೀರ್ಮಾನವಾಗುವವರೆಗೂ ಕಾದಿರಬೇಕಾಗುತ್ತದೆ. ಆದುದರಿಂದ ಸ್ಥಳದಲ್ಲಿಯೇ ತೀರ್ಮಾನ ಮಾಡತಕ್ಕ ಒಂದು ಸ್ವಾಜ್ಞ ಟರಿ ಬಾಡಿ ಏಕೆ ಮಾಡಬಾರದಾಗಿತ್ತು ಎಂದು ನಾನು ಕೇಳುತ್ತೇನೆ.

ಇನ್ನು ರೆಂಟ್ ಸೆಕ್ಷನ್‌ನಲ್ಲಿ ಎಂದರೆ ಸೆಕ್ಷನ್ 8ಕ್ಕೂ ಮತ್ತು ಸೆಕ್ಷನ್ 47 ರಲ್ಲಿ ಹೇಳಿರುವುದಕ್ಕೂ ಒಂದಕ್ಕೊಂದು ದ್ವಂದ್ವವಿರುವಂತೆ ಕಾಣುತ್ತಿದೆ.

ಸೆಕ್ಷನ್ 47 ರಲ್ಲಿ ಏನು ಹೇಳಿದ್ದೀರಿ ಎಂದರೆ :

"If the tenant in respect of the land is a permanent tenant, the amount payable shall be six times the difference between the rent and the land revenue payable for such land."

ಇನ್ನು ಸೆಕ್ಷನ್ 8 ರಲ್ಲಿ ಹೇಳಿರುವುದು ಹೀಗಿದೆ :

"The rent payable in respect of any land by the tenant shall be paid annually and such rent shall be ten times the land revenue payable in respect of such land."

ಇದು ಒಂದಕ್ಕೊಂದು ಸರಿಯಾಗಿರುವಂತೆ ಕಾಣುತ್ತಿಲ್ಲ ಮತ್ತು ಇದು ಸರಿಯಾಗಿ ಅರ್ಥವಾಗುತ್ತಿಲ್ಲ. ರೆಂಟನ್ನೂ ಲ್ಯಾಂಡ್ ರೆವೆನ್ಯೂ ಎಂದು ತಿಳಿಯಬೇಕಾಗಿಲ್ಲ. ಸೇಣೀದಾರ ಕಂದಾಯದ ಇಷ್ಟು ಎಂದು ಹಿಂದೆ ನಾಲ್ಕನೆ ಒಂದು ಭಾಗದಂತೆ ಇದ್ದಹಾಗೆ ಇರಬಹುದಾಗಿತ್ತು. ಕಂದಾಯವನ್ನು ಯಾವ ಆಧಾರದ ಮೇಲೆ ಇರಬೇಕೆಂದು ಇದರಲ್ಲಿ ಹೇಳುತ್ತಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮಗೆ ಒದಗಿಸಿರುವ ತಿದ್ದುಪಡಿಯಾಗಿರುವ ಲ್ಯಾಂಡ್ ರಿಫಾರಂಸ್ ಆಕ್ಟ್‌ನಲ್ಲಿ ಬಲಭಾಗದಲ್ಲಿರುವ ಪ್ರಾವಿಷನ್‌ಗಳನ್ನು ಸರಿಯಾಗಿ ಓದಿದರೆ ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎನ್ನುವುದು ತಮಗೇ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಕಂದಾಯವನ್ನು ನಿರ್ಣಯ ಮಾಡುವಾಗ ಇದನ್ನು ಹೇಗೆ ಮಾಡಬೇಕು ಎನ್ನುವುದಕ್ಕಾಗಿ ನಾನು ಹೇಳುತ್ತಿರುವುದು. ನಮ್ಮ ಮಲೆನಾಡಿನ ಕಡೆ ಇನ್ನೂ ರೀ ಸರ್ವೆ ಕೆಲಸಗಳಾಗಿಲ್ಲ. ಆದರೆ ಬಯಲು ಸೀಮೆ ಕಡೆ ಹೇಗೆ ಆಗಿದೆಯೋ ನನಗೆ ಗೊತ್ತಿಲ್ಲ. ಒಂದೇ ಗುಣದ ಒಂದೇ ತರಹದ ಭೂಮಿ ಇಂದು ತುಂಗಾ ಹಾಗೂ ಭದ್ರಾ ನಾಲಾದ ಕೆಳಗೆ ಇರುತ್ತವೆ, ಇದರಂತೆ ಶ್ರೀರಂಗಪಟ್ಟಣದಲ್ಲಿರುವ ಭೂಮಿಯೂ ಇದೆ. ಶ್ರೀರಂಗಪಟ್ಟಣದಲ್ಲಿರುವ ನಾಲಾ ಭೂಮಿಗಿಂತ ಶಿವಮೊಗ್ಗಾದಲ್ಲಿರುವ ಭೂಮಿ ಏನೂ ಕಡಿಮೆಯಾದ ಭೂಮಿಯಲ್ಲ. ಆದರೆ ಶ್ರೀರಂಗಪಟ್ಟಣದಲ್ಲಿರುವ ರೈತರಿಗೆ ಜಾಸ್ತಿ ಕಾಂಪೆನ್‌ಸೇಷನ್ ಕೊಡಬೇಕು. ಶಿವಮೊಗ್ಗಾದಲ್ಲಿರುವ ಜಮೀನಿನ ರೈತರಿಗೆ ಕಡಿಮೆ ಕೊಡಬೇಕು ಎಂದು ಒಂದು ರೀತಿಯಾಗಿ ದ್ವಂದ್ವ ಏಕೆ ಮಾಡಬೇಕು. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಶ್ರೀ ಕಾಗೋಡು ತಿಮ್ಮಪ್ಪನವರು ಕೂಡ ಈ ಕಮಿಟಿಯಲ್ಲಿದ್ದು ಇದರ ಬಗ್ಗೆ ಏಕೆ ಸರಿಯಾಗಿ ಹೇಳಲಿಲ್ಲ ? ಇದನ್ನು ಸರಿಯಾಗಿ ಸ್ಪಷ್ಟೀಕರಿಸಬೇಕು.

ಇನ್ನು 65 (ಎ) ಕ್ಲಾಸು (ಪುಟ 60 ರಲ್ಲಿ) ಹೀಗೆ ಹೇಳಿದ್ದೀರಿ :

"Certain lands deemed to be in excess of ceiling area—Where as a result of irrigation from a source constructed by the State Government any land held by a person or if he has a family, together with any member of his family, is converted after the appointed day into any other class of land and thereby the lands held by such person exceed the ceiling area, the land so in excess shall be deemed to be surplus land and accordingly the provisions of sections 66 to 76 shall, so far as may be, apply to the surrender and vesting in the State Government of such excess land."

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಈ ರೀತಿ ಹೇಳಿ ಕೆಲವೇ ಜಿಲ್ಲೆಗಳಿಗೆ ಇಂತಹ ಎಕ್ಸೆಂಪ್ಷನ್‌ನ್ನು ಕೊಡುವುದರ ಉದ್ದೇಶ ಏನಾದರೂ ಏನಿತ್ತು ಎಂದು ಕೇಳಬೇಕಾಗಿದೆ. ನಮ್ಮ ಮುಲೆನಾಡಿನ ವಿಚಾರ ತಿಳಿದಿರುವ ಶ್ರೀ ಕಾಗೋಡು ತಿಮ್ಮಪ್ಪನವರು ಇದ್ದು ಇದನ್ನು ಏಕೆ ಸರಿಯಾಗಿ ಪ್ರತಿಪಾದನೆ ಮಾಡಲಿಲ್ಲ ಎಂದು ಕೇಳಬೇಕಾಗಿದೆ. ಇದು ತುಂಬಾ ಶೋಚನೀಯವಾದ ಅಂಶ.

ಇನ್ನು

As per Section 66,

"Every person who on the date of the commencement of the Amendment Act holds ten acres of garden or irrigated land or 20 acres of rainfed wet land or 40 acres of dry land shall, within 90 days, after the said date furnish a declaration to the Tashildar."

ಎಂದಿದೆ

ಇದರಲ್ಲಿ ಹತ್ತು ಎಕರೆ ಬಾಗಾಯಿತು ಭೂಮಿಗೆ ಹತ್ತು ಎಕರೆ ತರಿ ಸರಿಸಮಾನವಾದುದು ಎಂದು ಕಾಣಬಹುದು ಎಂದರೆ ಹತ್ತು ಎಕರೆ ಬಾಗಯತು ಭೂಮಿಯಲ್ಲಿ ಅಲ್ಲಿ ಇಲ್ಲಿ ಒಂದು ಎರಡು ಮರಗಳು ಇರಬಹುದು ನಾನು ತಿಳಿದಿರುವಂತೆ ನಮ್ಮ ಸಾಗರ ತಾಲ್ಲೂಕಿನಲ್ಲಿ 100—125 ಮಣ ಅಡಕೆ ಬೆಳೆಯುತ್ತಾರೆ ಅದೇ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 25 ಮಣ ಅಡಕೆ ಬೆಳೆಯುತ್ತಾರೆ ಶಿವಮೊಗ್ಗ ತಾಲ್ಲೂಕಿನಲ್ಲಿ ಹತ್ತು ಎಕರೆ ತರಿ ಭೂಮಿಯಲ್ಲಿ ಬೆಳೆಯುವ 25 ಮಣ ಅಡಕೆ ಬೆಳೆಗೂ ಶ್ರೀರಂಗಪಟ್ಟಣದಲ್ಲಿ 50 ಕ್ವಿಂಟಾಲ್ ಬತ್ತ ಬೆಳೆಯುವ ಭೂಮಿಗೂ ಹೇಗೆ ಸರಿಸುವಾನವಾಗುತ್ತದೆ ಎನ್ನುವುದನ್ನು ಇಲ್ಲಿ ಯೋಚನೆ ಮಾಡಬೇಕಾಗಿತ್ತು. ಇದರಲ್ಲಿ ಮಾಡಿರುವ ಈಕ್ವೇಷನ್ ಸರಿಯಾಗಿಲ್ಲ, ಬಾಗಯತು ಯಾವುದು, ತರಿ ಯಾವುದು ಇದರಲ್ಲಿ ನಾಲಾ ಬಯಲಿನಲ್ಲಿರುವುದರ ಫಸಲು ಹೇಗೆ ಬರುತ್ತೆ ಬೇರೆ ಕಡೆ ಫಸಲು ಏನಿದೆ ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಿ ಈ ಬಿಲ್ಲಿನಲ್ಲಿ ಸರಿಪಡಿಸ ಬೇಕು ಎಂದು ಇಲ್ಲಿ ಹೇಳಬಯಸುತ್ತೇನೆ.

4-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲನೆಯ ದರ್ಜೆಯ ಒಂದು ಎಕರೆ ತರಿ ಜಮೀನಿಗೆ ಒಂದು ಎಕರೆ ಬಾಗಾಯ್ತು ಜಮೀನು ಸಮ ಎಂದು ಮಾನ್ಯ ಸದಸ್ಯರು ಹೇಳುತ್ತಾರೋ ಅಥವಾ ಅದರಲ್ಲಿ ಏನಾದರೂ ವ್ಯತ್ಯಾಸ ಇದೆ ಎಂದು ಹೇಳುತ್ತಾರೋ ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. —ನಾನು ಹೇಳುವುದನ್ನು ಸ್ವಲ್ಪ ಅರ್ಥ ಮಾಡಿ ಕೊಳ್ಳಬೇಕು. 10-15 ಮಣ ಅಡಿಕೆ ಬೆಳೆಯುವ ಒಂದು ಎಕರೆ ಬಾಗಾಯ್ತು ಜಮೀನನ್ನು ಸಹ ಇಲ್ಲಿ ನಾಲಾ ಕಳಗೆ ಇರುವ ಉತ್ತಮವಾದ ಒಂದು ಎಕರೆ ತರೀ ಜಮೀನಿಗೆ ಸಮ ಎಂದು ಇಲ್ಲಿ ಹೇಳಿಕೆ ಮಾಡಿದ್ದಾರೆ. ಇದು ಯಾವ ಸಾಮಾಜಿಕ ನ್ಯಾಯ ! ಈ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು ? ಕ್ಲಾಸ್ 48 (1A) ನಲ್ಲಿ :

"Where a person holds different classes of land mentioned in sub-section (1), the total extent of land held by such person shall, for the purposes of this section, be determined by converting all the classes of land into any one class in accordance with the following formula namely :—

One acre of garden or irrigated land=two acres of rainfed wet land=four acres of dry land.",

ಎಂದು ಹೇಳಿದ್ದಾರೆ. ಬಾಗಾಯ್ತು ಜಮೀನನ್ನು ಅದರ ಗುಣದ ಮೇರೆ ಏಂಗಡಣೆ ಮಾಡಿದ್ದರೆ ಬೆನ್ನಾಗಿರುತ್ತಿತ್ತು ಎಂದು ಹೇಳುತ್ತೇನೆ. ಆ ರೀತಿ ಮಾಡದಿದ್ದರೆ ಸರಿಹೋಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವ ಹಂತದಲ್ಲಿ ನಾವು ಮೊದಲನೆಯದಾಗಿ ಯೋಚನೆ ಮಾಡಬೇಕಾದುದು ಏನೆಂದರೆ, ಯಾರಿಗೆ ನಾವು ಭೂಮಿಯನ್ನು ಕೊಡುತ್ತೇವೋ, ಆ ರೈತ ಮುಂದೆ ಬೆಳೆ ಬೆಳೆಯುವ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕು. ಆ ರೀತಿ ಮಾಡದೆ ಈ ಕಾನೂನನ್ನು ಜಾರಿಗೆ ತಂದರೆ ನಮ್ಮ ಹಸಿರು ಕ್ರಾಂತಿ ತಳಕೆಳಕಾಗುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ನಾನು ಪೇಪರ್‌ನಲ್ಲಿ ಬಂದ ಒಂದು ವಿಚಾರವನ್ನು ನೋಡಿದೆ, ಏನೆಂದರೆ ಕೇಂದ್ರಸರ್ಕಾರದವರು 80 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಈ ಬಗ್ಗೆ ತಯಾರು ಮಾಡಿದ್ದಾರೆಂದು ; ಅದನ್ನು ಕೂಡಲೆ ಕಾರ್ಯಗತ ಮಾಡಬೇಕಾಗುತ್ತದೆ. ಏಕೆಂದರೆ, ನಾವು ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ ಮೇಲೆ ಎಷ್ಟೋ ಜನರು ಭೂಮಿಯ ಮೇಲೆ ಹಣವನ್ನು ಏನಿಯೋಗ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಇಂತಹ ಒಂದು ಅನಿಶ್ಚಿತ ಪರಿಸ್ಥಿತಿಯೊಳಗೆ ಜಮೀನನ್ನು ರೈತರಿಗೆ ಕೊಟ್ಟಾಗ ಅವರಿಗೆ ಪರಿಯಾದ ಆರ್ಥಿಕ ಸಬಲತ್ವನ್ನು ಕೊಡದೇ ಹೋದರೆ ಅದರಿಂದ ಈ ದೇಶಕ್ಕೂ ಅನ್ಯಾಯವಾಗುತ್ತದೆ ಮತ್ತು ಆತನ ಕುಟುಂಬಕ್ಕೂ ಅನ್ಯಾಯವಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಹಿಂದೆ ಒಂದು ಕಾಲದಲ್ಲಿ ಮಲೆನಾಡಿನಲ್ಲಿಯೇ ಆಗಲೀ, ಬೇರೆ ಕಡೆಗಳಲ್ಲಿಯೇ ಆಗಲೀ, ಧನಿಕರು ಮತ್ತು ಶ್ರೀಮಂತರು ರೈತರಿಗೆ ಸಹಾಯ ಮಾಡುವ ಒಂದು ವ್ಯವಸ್ಥೆ ಇತ್ತು. ಆದರೆ ಇಂದು ಸಹಾಯ ಮಾಡುವ ಪದ್ಧತಿ ಇಲ್ಲವಾಗಿರುವುದರಿಂದ ರೈತರ ಕಷ್ಟ ಹೇಳತೀರದಾಗಿದೆ. ಕೋಆಪರೇಟಿವ್ ಸೊಸೈಟಿಗಳಲ್ಲಿ ಸಾಲವನ್ನು ರೈತರು ತಗೆದುಕೊಳ್ಳಬೇಕಾದರೆ ಯಾರಾದರು ಜಮೀನುದಾರರು ಸಾಲಕ್ಕೆ ಹೊರಿಟ ನಿಲ್ಲಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಜಮೀನುದಾರರು ತಮ್ಮ ಹಿತಾಶಕ್ತಿಯಾಗುವುದಿದ್ದರೆ ಮಾತ್ರ ಹೊರಿಟ ಹಾಕುತ್ತಾರೆ, ಇಲ್ಲದಿದ್ದರೆ ಹಾಕುವುದಿಲ್ಲ ; ಇಂತಹ ಒಂದು ಅನಿಶ್ಚಿತ ಪರಿಸ್ಥಿತಿ ಇಂದು ಇರುವುದರಿಂದ ನಾವು ರೈತರ ಕಷ್ಟವನ್ನು ಅರ್ಥ ಮಾಡಿಕೊಂಡು ಎಲ್ಲ ರೀತಿಯಿಂದಲೂ ಅವರಿಗೆ ಸಹಾಯ ಮಾಡಬೇಕಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ತುಂಗಭದ್ರಾ ಎಡದಂಡೆ ನಾಲಾ ಪ್ರದೇಶದಲ್ಲಿ ಕೆಲವರಿಗೆ ಸರ್ಕಾರದವರು ಜಮೀನನ್ನು ಕೊಟ್ಟರು. ಜಮೀನನ್ನು ಪಡೆದವರಿಗೆ ಸಾಗು ಮಾಡುವ ಚೈತನ್ಯ ಇಲ್ಲದಿರುವುದರಿಂದ ನಾರ್ಕೆ ೪ದು ವರ್ಷಗಳಿಂದ ಆ ಜಮೀನು ಹಾಗೆಯೇ ಪಾಳು ಬಿದ್ದಿದೆ. ಜಮೀನನ್ನು ಕೊಟ್ಟಾಗ ಅವರಿಗೆ ಆರ್ಥಿಕ ನೆರವನ್ನು ಕೊಡುವ ಯೋಚನೆ ಮಾಡಲಿಲ್ಲ ; ಆದ್ದರಿಂದ ಅದು ಹಾಗೆಯೇ ಹಾಳು ಬಿದ್ದಿದೆ. ಇದೇ ಪರಿಸ್ಥಿತಿ ಇನ್ನು ಮುಂದೆಯೂ ಮುಂದುವರೆದರೆ, ನಮ್ಮ ಹಸಿರುಕ್ರಾಂತಿ ತಲೆಕೆಳಕಾಗಿ ನಾಳೆ ದೇಶದಲ್ಲಿ ಆಹಾರದ ಅಭಾವ ಉದ್ಭವವಾಗಬಹುದೆಂದು ಹೇಳುತ್ತೇನೆ. ಆದ್ದರಿಂದ ಇವರ ಬಗ್ಗೆ ಮಾನವೀಯ ದೃಷ್ಟಿ ಇರಬೇಕು. ಒಂದು ವರ್ಗವನ್ನು ತೆಗೆದು ಇನ್ನೊಂದು ವರ್ಗವನ್ನು ನಿರ್ಮಾಣ ಮಾಡುವಾಗ ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡುವಾಗ ಎಲ್ಲರ ಹಿತ ಸಾಧನೆ ಮಾಡುವ ದೃಷ್ಟಿ ಇರಬೇಕೇ ಹೊರತು, ಯಾವ ಕಣ್ಣಿಗೆ ಸುಣ್ಣ ಬಿದ್ದರೂ ಅದು ಅಪಾಯವೆ.

Mr. DEPUTY SPEAKER.—The Hon'ble Member should speak on the provisions of the Bill. He is confusing the Chair.

Sri S. M. SHEERNALY CHANDRASEKHAR.—On the other hand, the Chair is confusing the member.

Sri C. M. ARUMUGHAM.—I rise to a point of order. The Chair could direct the proceedings of the House. When a member is making certain statements which are not in conformity with the subject, the Chairman has the right to dirct the member that he should stick to the subject. When the Chair directs, the member has no right to say that the Chair is confusing him and comment on the directions of the Chair that he is misleading and confusing the member. This is a serious matter. Is it in order for a member to cast aspersions on the Chair? The member is confusing the House. I want the Speaker to give a ruling. The Speaker must give a considered ruling because it will have far-reaching consequences and it will be perused by other State Legislatures.

Mr. DEPUTY SPEAKER.—When Sri Sheernaly Chandrasekhar was trying to find out something for a very long time, I told him that it would be worth while for him to resume his seat. I said, 'if you try to speak further, you may be just confusing others'. There it ended. A that time Mr. Chandrasekhar in a smiling mood —we were all in a lighter mood at that time—said again 'section'; I said, 'not section, but clause'. He lightly said that he is confusing the House. The House was in a lighter mood. About confusing the House and all that, I can say, nobody can confuse the House. The House is a sovereign body and a responsible body. To be very clear I can tell Mr. Arumugham, I have fully understood the import of his point of order and to give a ruling, I think we have to reserve it indefinitely because it requires reference of very important books! Therefore, I reserve my ruling for such time as I feel I have consulted all reliable documents on the subject and every very authoritative books. After that, I shall give my ruling.

I am requesting Sri Chandrasekhar to close his speech.

Sri S. M. SHEERNALY CHANDRASEKHAR.—I am closing Sir.

ಸಾಮಾಜಿಕ ನ್ಯಾಯವನ್ನು ಕಾಡತಕ್ಕಂಥಾ ಉದ್ದೇಶದಿಂದ ಭೂಸುಧಾರಣಾ ಕಾನೂನನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಶತಮಾನಗಳಿಂದ ರೈತ ತನ್ನ ಭೂಮಿ ಆಲ್ಲದಿದ್ದರೂಕೂಡ ಭೂಮಿಯಲ್ಲಿ ತನ್ನ ಬೆವರು ಸುರಿಸಿ ಯಾರದೋ ಸುಖಕ್ಕಾಗಿ ದುಡಿಯುತ್ತಿದ್ದ. ಸಮಾಜದಲ್ಲಿ ಯವ ಇಂಥಾ ಒಂದು ಪ್ರತ್ಯಾಸವನ್ನು ಕೊಡಿದು ಹಾಕಿ ಉಳುವವನಿಗೇ ಭೂಮಿಯನ್ನು ಕೊಡಬೇಕು ಎನ್ನುವ ಒಂದು ಉದ್ದೇಶದಿಂದ ಈ ಕಾನೂನನ್ನು ಸರ್ಕಾರದವರು ತರುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರೇ ಸಂಪೂರ್ಣವಾಗಿ ಎಲ್ಲಾ ಜಮೀನನ್ನು ವಹಿಸಿಕೊಂಡು ಎಲ್ಲರಿಗೂ ಅವರವರ ಯೋಗ್ಯತೆಗನುಸಾರವಾಗಿ ದುಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಹ್ಯಾಚು ಪ್ಯಾಚು ಸಮಾಜವಾದವನ್ನು ತಂದು ಆದರಂತೆ ಮುಂದುವರಿಯುವುದಕ್ಕಾಗುವುದಿಲ್ಲ. ಸ್ವತ್ತು ಸಮಾಜದ್ದು ಆಗಬೇಕು. ಸರ್ಕಾರದ್ದು ಆಗಬೇಕು. ಸಮಾಜದಲ್ಲಿರತಕ್ಕವರೆಲ್ಲರೂ ಅವರವರ ಯೋಗ್ಯತೆಗನುಸಾರವಾಗಿ ದುಡಿಮೆ ಮಾಡಿಕೊಂಡು ತಿನ್ನತಕ್ಕಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ವಾದವನ್ನು ನಾನು ಇಡುವುದಕ್ಕೆ ಬಯಸುತ್ತೇನೆ. ಈಗ ಈ ಭೂಸುಧಾರಣಾ ಕಾನೂನನ್ನು ಏನು ತಂದಿದ್ದಾರೆ ಇದೇ ಅಂತಿಮವಲ್ಲ ಆದ್ದರಿಂದ ಎಲ್ಲಾ ಸ್ವತ್ತೂ ಸಮಾಜಕ್ಕೆ ಸೇರಿದ್ದು ಸರ್ಕಾರಕ್ಕೆ ಸೇರಿದ್ದು ಎಂದು ಮಾಡಿದರೆ ಸಮಾಜವಾದದ ಗುರಿ ಸಾಧನೆಯಾಗುತ್ತದೆ. ಆ ರೀತಿ ಮಾರ್ಪಾಡು ಮಾಡಬೇಕು. ಇಪ್ಪೋತ್ತು ಯಾರಿಗೂ ಜಮೀನ್ದಾರರಾಗಿರಬೇಕು ಎಂಬ ಇಚ್ಛೆ ಇಲ್ಲ. ಜಮೀನ್ದಾರರು ಸಾಹುಕಾರರು ಎನ್ನುವುದು ಅವಮಾನ ಎನ್ನುವ ಪರಿಸ್ಥಿತಿ ಬಂದಿದೆ. ಜಮೀನ್ದಾರರಾಗಿರುವವರು ನಾವು ಇದರಿಂದ ವಿಪೋಚನೆಯಾಗುತ್ತೇವೆ, ಇದು ನಮಗೆ ಬೇಡ, ಸರ್ಕಾರದವರು ನಮಗೆ ಜೀವನೋಪಾಯವನ್ನು ಕಲ್ಪಿಸುತ್ತಾರೆ ಎನ್ನುವ ಪರಿಸ್ಥಿತಿ ಇದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಬೇಗ ತೀರ್ಮಾನ ಮಾಡಿ ಜಮೀನ್ದಾರರನ್ನು ವಿಮೋಚನೆ ಮಾಡಬೇಕು. ಗೇಣಿದಾರರು ಮತ್ತು ಜಮೀನ್ದಾರರು ಎನ್ನುವ ಅನಿಶ್ಚಿತ ಪರಿಸ್ಥಿತಿ ಬೇಡ. ಇಪ್ಪೋತ್ತು ಈ ದೃಷ್ಟಿಯಿಂದ ಸರ್ಕಾರದವರು ಎಲ್ಲರ ಹಿತವನ್ನೂ ಯೋಚನೆ ಮಾಡಿ ಬೇಗ ಈ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕೆಂದು ಬಯಸಿ ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಭೂಸುಧಾರಣಾ ಮಸೂದೆ ಎರಡು ಸದುದ್ದೇಶಗಳನ್ನ ಹೊಂದಿ ಈ ಸದನದ ಮುಂದೆ ಬಂದಿದೆ ಎಂದು ನಾನು ಭಾವಿಸಿದ್ದೇನೆ. ಶತಮಾನಗಳಿಂದಲೂ ಭೂಮಿಯನ್ನು ತಮ್ಮ ಜೀವನದ ಆಧಾರವಾಗಿ ನಂಬಿ ಬದುಕುತ್ತಿದ್ದ ಒಂದು ವರ್ಗದ ಜನರಿಗೆ ಭೂಮಿಯ ಬಗ್ಗೆ ಯಾವ ವಿಧವಾದ ಹಕ್ಕು ದೊರೆಯದೇ ಹೋದ ಕಾಲದಲ್ಲಿ ಅವರಿಗೆ ಆ ಹಕ್ಕನ್ನು ಒದಗಿಸಿಕೊಡತಕ್ಕದ್ದು ಮತ್ತು ಭೂಮಾಲೀಕರು ಎಂದು

ಹೇಳಿಕೊಳ್ಳತಕ್ಕಂಥಾ ಜನಗಳಿಂದ ಅವರಿಗೆ ಆಗುತ್ತಾ ಇದ್ದಂತಹ ಕಿರುಕುಳ ಮತ್ತು ಅನ್ಯಾಯದ ವಿರುದ್ಧ ಇದು ಒಂದು ರಕ್ಷಾ ಕವಚದೋಪಾದಿಯಲ್ಲಿ ಇರಬೇಕು ಎನ್ನುವ ಭಾವನೆಯಿಂದ ಈ ಮಸೂದೆ ನಮ್ಮ ಮುಂದೆ ಬಂದಿದೆ ಎಂದು ನಾನು ಭಾವಿಸುತ್ತೇನೆ.

ಎರಡನೆಯದಾಗಿ ಭೂಹೀನ ರೈತರು ನಮ್ಮ ದೇಶದಲ್ಲಿ ಬಹಳ ಜನ ಇದ್ದಾರೆ. ವ್ಯವಸಾಯವನ್ನೇ ನಂಬಿ ಬದುಕತಕ್ಕ ಜನ ನಮ್ಮದೇಶದಲ್ಲಿ ಸುಮಾರು ಶೇಕಡಾ 70 ಜನಗಳಿಗಿಂತ ಹೆಚ್ಚು ಇದ್ದಾರೆ. ಭೂಮಿ ಇರತಕ್ಕ ಜನಗಳು ಇಷ್ಟು ಭೂಮಿಯನ್ನು ಇಟ್ಟುಕೊಳ್ಳಬೇಕು ಎಂದು ಅವರ ಮೇಲೆ ಒಂದು ಮಿತಿಯನ್ನು ಗೊತ್ತು ಮಾಡಿ ಹೆಚ್ಚುವರಿ ಜಮೀನನ್ನು ಸರ್ಕಾರ ಪಡೆದುಕೊಂಡು ಆ ಜಮೀನನ್ನು ಭೂಹೀನರಿಗೆ ಹಂಚಿ ಅವರಿಗೂ ಸಹ ತೃಪ್ತಿ ಮತ್ತು ಸಮಾಧಾನಗಳಿಂದ ಕೂಡಿದ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಕೂಡ ಈ ಮಸೂದೆಯ ಉದ್ದೇಶವಾಗಿದೆ. ಮೊದಲನೆಯ ಉದ್ದೇಶ ಈ ಮಸೂದೆಯನ್ನು ಮಾಡುವುದರಿಂದ ಸಾಧಿತವಾಗುತ್ತದೆ ಎಂದು ಖಚಿತವಾಗಿ ನಂಬಿಕೆ ಇಟ್ಟುಕೊಂಡಿರತಕ್ಕವನು ನಾನು. ಆದರೆ ಎರಡನೇ ಉದ್ದೇಶ ಎಷ್ಟರ ಮಟ್ಟಿಗೆ ಸಾಫಲ್ಯವಾಗುತ್ತದೆ ಎನ್ನುವುದರ ಬಗ್ಗೆ ನನಗೆ ಬಂಡಿತಾ ಅನುಮಾನ ಇದೆ. ಇದು ನನಗೆ ಮಾತ್ರವಲ್ಲ, ಇದು ಎಲ್ಲಾ ಕಡೆಯೆಲ್ಲಿಯೂ ಜಿಜ್ಞಾಸಾಸ್ಪದವಾಗಿದೆ. ಈಗ ಸರ್ಕಾರದವರು ನಮಗೆ ಒದಗಿಸಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಭೂಹೀನ ರೈತರು 60-70 ಲಕ್ಷ ಜನ ಇದ್ದಾರೆ ಎಂದು ತಿಳಿದು ಬಂದಿದೆ, ಈಗ ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತಂದಮೇಲೆ 4 ಲಕ್ಷ ಎಕರೆ ಭೂಮಿ ಸಿಕ್ಕುತ್ತದೆ ಎಂದು ಅಂದಾಜು ಮಾಡಿದ್ದಾರೆ. 4 ಲಕ್ಷ ಎಕರೆ ಜಮೀನನ್ನು 70 ಲಕ್ಷ ಜನಗಳಿಗೆ ಹೇಗೆ ಹಂಚುತ್ತಾರೆ? ಈಗ 4 ಲಕ್ಷ ಎಕರೆ ಭೂಮಿಯನ್ನು 4 ಲಕ್ಷ ಜನಗಳಿಗೆ ಒಬ್ಬೊಬ್ಬರಿಗೆ ಒಂದೊಂದು ಎಕರೆಯಂತೆ ಹಂಚಿ ಅವರು ತಮ್ಮ ಜೀವನಕ್ಕೆ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಆದರೆ ಅದರಿಂದ ಬಡತನ ದೂರವಾಗುತ್ತದೆಯೇ? 4 ಲಕ್ಷ ಜನಗಳಿಗೆ ಉದ್ಯೋಗವನ್ನು ಒದಗಿಸಿಕೊಟ್ಟರು, ಇದು ನಿಜವಾದ ಪ್ರಗತಿಯ ಹೆಜ್ಜೆ ಎಂದು ಒಪ್ಪಿಕೊಂಡರೂ ಅದರಿಂದ ನಮ್ಮ ಉದ್ದೇಶ ಫಲಿಸಿತು ಎಂದು ಸಮಾಧಾನದಿಂದ ನಿಟ್ಟುಸಿರು ಬಿಡುವ ಹಾಗಿಲ್ಲ. ಈ ಭೂಮಿಯ ಜೊತೆಗೆ ಸರ್ಕಾರಿ ಭೂಮಿ ಬೇಕಾದಷ್ಟು ಇದೆ. ಅದನ್ನೂ ಕೊಡುತ್ತೇವೆ ಎಂದು ಹೇಳುತ್ತಾರೆ. ಆ ಸರ್ಕಾರಿ ಭೂಮಿ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಆ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಅದನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಬೇಕಾಗಿದ್ದರೆ ಅದಕ್ಕೆ ವಿಶೇಷವಾಗಿ ಬಂಡವಾಳ ಹೂಡಿ ಅದನ್ನು ವ್ಯವಸಾಯಕ್ಕೆ ಯೋಗ್ಯವನ್ನಾಗಿ ಮಾಡಬೇಕು. ಹೀಗೆ ವಿಲೆಯ ಮೇಲೆ ಮಾಡಿದರೆ ಹೆಚ್ಚು ಬಂಡವಾಳವನ್ನು ತೊಡಗಿಸುವುದಕ್ಕೆ ಯಾರು ಮುಂದೆ ಬರುತ್ತಾರೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಎರಡನೆಯ ಉದ್ದೇಶದ ಬಗ್ಗೆ ನಾವು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುವುದು ಬಹಳ ಮುಖ್ಯ. ನಮ್ಮ ಅಂತಿಮ ಉದ್ದೇಶ ಏನಿರಬೇಕೆಂದರೆ, ಈ ಭೂಮಿತಿಯನ್ನು ಗೊತ್ತು ಮಾಡುವುದರಿಂದ ನಮ್ಮ ರಾಷ್ಟ್ರದ ಉತ್ಪತ್ತಿ ಕಡಿಮೆಯಾಗಬಾರದು. ಹಾಗೆ ಕಡಿಮೆಯಾದರೆ, ನಾವು ಬಡತನದ ದಾರಿಗೆ ಹೋಗುತ್ತೇವೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಕೇವಲ ಕೆಲವು ಜನರಿಗೆ ತಾತ್ಕಾಲಿಕವಾದ ಅನುಕೂಲವನ್ನು ಮಾಡುವುದಕ್ಕೋಸ್ಕರ ಇದನ್ನು ಮಾಡಿ ಉತ್ಪತ್ತಿ ಕಡಿಮೆ ಮಾಡಿದರೆ, ಅದರಿಂದ ದೇಶಕ್ಕೆ ಅನ್ಯಾಯವಾಗುತ್ತದೆ. ಈ ಸಣ್ಣ ದೇಶದ ಭೂಸಂಪತ್ತು ಏನಿದೆ, ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈಗಾಗಲೇ ಧವಸ ಧಾನ್ಯಗಳ ಕೊರತೆ ನಮಗೆ ಇದೆ. ಹೀಗಿರುವಾಗ ನಾವು ಭೂಮಿತಿಯನ್ನು ಹಾಕಿ ಉತ್ಪತ್ತಿಯನ್ನು ಕಡಿಮೆ ಮಾಡಿದರೆ ನಮ್ಮ ಸಮಸ್ಯೆ ಇನ್ನೂ ಹೆಚ್ಚಾಗುತ್ತದೆಯಲ್ಲದೆ ಕಡಿಮೆಯಾಗುವುದಿಲ್ಲ. ಆದ್ದರಿಂದ ಭೂಮಿತಿಯನ್ನು ಗೊತ್ತು ಮಾಡುವಾಗ ನಮ್ಮ ವ್ಯವಸಾಯ ಮತ್ತು ಆರ್ಥಿಕ ತಜ್ಞರ ಸಲಹೆಯನ್ನು ಪಡೆದು ತೀರ್ಮಾನ ಮಾಡುವುದು ಬಹಳ ಮುಖ್ಯವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರಸರ್ಕಾರದಲ್ಲಿ ಇಂಥ ಸಲಹೆಯನ್ನು ಇದರ ಬಗ್ಗೆ ಮಾಡಿದಂತಹ ಮಂಡಲ ಕೊಟ್ಟಿರಬಹುದು. ಆದರೆ ಮೈಸೂರು ದೇಶದಲ್ಲಿರುವ ಪ್ರತಿಯೊಂದು ಭಾಗದಲ್ಲಿರುವಂತಹ ವಿಶಿಷ್ಟವಾದ ಸಮಸ್ಯೆಯ ಬಗ್ಗೆ ಅವರು ತೀರ್ಮಾನ ಕೊಡುವುದು ಸರಿಯಾದ ತೀರ್ಮಾನವಾಗಲಾರದು. ಆದ್ದರಿಂದ ಈಗಲಾದರೂ ಆರ್ಥಿಕ ತಜ್ಞರ ಮತ್ತು ವ್ಯವಸಾಯ ತಜ್ಞರ ಸಲಹೆಯನ್ನು ಪಡೆದು ಮುಂದಿನ ಹೆಜ್ಜೆ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ ನಮ್ಮ ಮೂಲ ಉದ್ದೇಶವೇನೆಂದರೆ ಉತ್ಪತ್ತಿ ಕಡಿಮೆಯಾಗಿ ಬಡತನ ಬರಬಾರದು. ಅದಕ್ಕೆ ನಾವು ಅವಕಾಶ ಕೊಡಬಾರದೆಂದು ಹೇಳುತ್ತೇನೆ.

(ಶ್ರೀ ಎಚ್. ಟಿ. ಕೃಷ್ಣಪ್ಪ)

ಇನ್ನು ರ್ಯಾಂಡ್ ಟ್ರಿಬ್ಯೂನಲ್ ರಚನೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಒಬ್ಬ ಅಸಿಸ್ಟಾಂಟ್ ಕಮಿಶನರ್, ಮತ್ತು ನಾಲ್ಕು ಜನ ಸದಸ್ಯರನ್ನು ಹಾಕಿ ಒಂದು ಟ್ರಿಬ್ಯೂನಲ್ ಮಾಡಬೇಕೆಂದು ಹೇಳುತ್ತಾರೆ. ಇವರು ಮಾಡಿರತಕ್ಕಂತಹ ತೀರ್ಮಾನ ಅಂತಿಮ ತೀರ್ಮಾನ ಮತ್ತು ಅದರ ಮೇಲೆ ಕೋರ್ಟುಗಳಿಗೆ ದೂರು ತೆಗೆದುಕೊಂಡು ಅಪೀಲಿನಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲವೆಂದು ಇದೆ. ನಮಗೆ ಈ ಅಸಿಸ್ಟಾಂಟ್ ಕಮಿಶನರುಗಳು ಎಷ್ಟು ನ್ಯಾಯ ಕೊಡುತ್ತಾರೆಂದು ಗೊತ್ತಿದೆ. ನಾನು ಹಿಂದೆ ವಕೀಲನಾಗಿ ಕೆಲಸ ಮಾಡಿದ್ದುದರಿಂದ ಇದರಬಗ್ಗೆ ಸ್ವಲ್ಪ ಗೊತ್ತಿದೆ. ಕಾನೂನಿನಲ್ಲಿ ಅವರಿಗೆ ಪವರ್ಸ್ ಇಲ್ಲದಿದ್ದರೂ 'ಅಧಿಕಾರ ಚಲಾಯಿಸುತ್ತಾರೆ. He has no powers to make the order. The very fact that he has passed the order shows that he has got ample powers to do so. ಈ ಪರಿಸ್ಥಿತಿ ಇರುವಾಗ ನ್ಯಾಯಾಂಗಕ್ಕೆ ಇದರ ಕೆಲಸವನ್ನು ವಹಿಸಿಕೊಟ್ಟಿದ್ದರೆ ಚೆನ್ನಾಗಿತ್ತು. ನ್ಯಾಯಾಂಗ ಕೆಟ್ಟಿದೆ ಎಂದು ಎಷ್ಟು ಹೇಳಿದರೂ ಸಹ ನ್ಯಾಯಾಂಗದಿಂದಲೇ ಸರಿಯಾದ ನ್ಯಾಯ ದೊರೆಯುತ್ತದೆ ಎಂದು ಹೇಳಿದರೆ ಅದರಲ್ಲಿ ಎರಡು ಅಭಿಪ್ರಾಯಗಳಿರಲಾರದು. ಕಾನೂನಿನ ಕ್ಲಿಷ್ಟ ಸಮಸ್ಯೆಯನ್ನು ಒಬ್ಬ ಅಸಿಸ್ಟಾಂಟ್ ಕಮಿಶನರ್ ಅಥವಾ ತಾಹಸೀಲ್ದಾರರು ತೀರ್ಮಾನಮಾಡುವುದಕ್ಕೆ ಹೊರಟರೆ ನಾವು ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಇದನ್ನು ನ್ಯಾಯಾಂಗಕ್ಕೆ ವಹಿಸಬೇಕೆಂದು ಹೇಳುತ್ತೇನೆ. ಆ ಮೇರೆಗೆ ಇದರಲ್ಲಿ ಅಪೀಲಿಗೆ ಅವಕಾಶ ಇರಬೇಕು. ಮತ್ತು ವಕೀಲರನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದವರು ದೇಶದಲ್ಲಿ ಕಾನೂನು ಪಂಡಿತರಂದ ಜನರು ಸಹಾಯ ಪಡೆಯುವುದು ಅಪರಾಧವೆಂದು ತಿಳಿದಿದ್ದಾರೋ ಏನೆಂದು ಅರ್ಥವಾಗುತ್ತಾ ಇಲ್ಲ. ವಕೀಲರು ನ್ಯಾಯವನ್ನು ಅನ್ಯಾಯವಾಗಿ ಪರಿವರ್ತಿಸುತ್ತಾರೆಂದು ಭಾವನೆ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ಇದರಲ್ಲಿ ಸರ್ಕಾರದ ಸ್ಪಷ್ಟವಾದ ಅಭಿಪ್ರಾಯ ಅರ್ಥವಾಗುತ್ತಾ ಇಲ್ಲ. ವಕೀಲರನ್ನು ನೇಮಿಸಿ ನ್ಯಾಯವನ್ನು ದೂರಕಿಸಿಕೊಡುವುದು ಸರಿಯಾದ ಮಾರ್ಗವಲ್ಲದೆ, ಅದಕ್ಕೆ ಪ್ರತಿಬಂಧಕವನ್ನು ಹಾಕತಕ್ಕದ್ದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ದೇಶದಲ್ಲಿ ಅವಿದ್ಯಾವಂತರು ಹೆಚ್ಚಾಗಿರುವುದರಿಂದ ನಮ್ಮ ನ್ಯಾಯಾಂಗ ಏನು ತೀರ್ಮಾನ ಕೊಡುತ್ತದೆ, ಅದು ಅಕ್ಷರ ಜ್ಞಾನ ಇರತಕ್ಕ ಜನರಿಗೆ ನ್ಯಾಯವನ್ನು ದೂರಕಿಸಿಕೊಡುತ್ತದೆ. ಆದರೆ ಅವಿದ್ಯಾವಂತರಿಗೆ ನ್ಯಾಯವನ್ನು ಕೊಡಲು ಜನತಾ ಪ್ರತಿನಿಧಿಗಳನ್ನೊಳಗೊಂಡ ಒಂದು ಟ್ರಿಬ್ಯೂನಲ್ ಮಾಡಿದರೆ, ಅದರಿಂದ ಸುಲಭವಾಗಿ ನ್ಯಾಯ ಸಿಗುವುದಿಲ್ಲವೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವ ತರದ ನ್ಯಾಯ ಸಿಗುತ್ತದೆ ಅಂದರೆ, ಪ್ರಭಾವಕ್ಕೆ, ಭ್ರಷ್ಟಾಚಾರಕ್ಕೆ ಒಳಗಾದರೆ ನ್ಯಾಯ ಸಿಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧಿಕಾರಿಗಳು ಭ್ರಷ್ಟಾಚಾರಕ್ಕೆ ಒಳಗಾಗುತ್ತಾರೆಂದು ಜನತೆಯು ಪ್ರತಿನಿಧಿಗಳನ್ನು ಹಾಕಿದರೂ ತಾವು ಸಂಶಯ ಪಡುವುದಾದರೆ, ನ್ಯಾಯವನ್ನು ಯಾವುದರ ಮುಖಾಂತರ ಪಡೆಯಬೇಕು ?

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಹೇಳುವುದಾದರೆ, ಬಹಳಮಟ್ಟಿಗೆ ಅಪರಾಧಪ್ರಮಾಣವು ಸೀಮೆಯಿಂದ ದೂರವಾಗಿರತಕ್ಕಂತಹ ನ್ಯಾಯಾಂಗಕ್ಕೆ ಇದನ್ನು ವಹಿಸಿಕೊಟ್ಟರೆ ನಿಜವಾದ ನ್ಯಾಯ ದೊರೆಯುತ್ತದೆಯೇ ಹೊರತು ಬೇರೆ ಯಾರಿಗೆ ವಹಿಸಿದರೂ ದೊರೆಯಲಾರದು.

ಇನ್ನು ಸೈನಿಕರು ಮತ್ತು ಸೀಮೆನ್‌ಗಳಿಗೆ ಭೂಮಿಯನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಅಪ್ರಾಪ್ತರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ರಿಯಾಯಿತಿ ದೊರಕಿಸಿಕೊಡಿರತಕ್ಕದ್ದು ಒಂದು ದೊಡ್ಡ ದೋಷವೆಂದು ಕಾಣುತ್ತದೆ. ಏಕೆಂದರೆ ನಾವು ದಿನನಿತ್ಯ ನೋಡುತ್ತಿರತಕ್ಕಂಥ ಒಂದು ದಾರುಣ ದೃಶ್ಯ ಇದು. ಯಾರಾದರೂ ಒಬ್ಬರು ವಿಧವೆ ಅಥವಾ ಮೈನರ್ ಮಕ್ಕಳಿಗೆ ಆಸ್ತಿಯ ಹಕ್ಕು ಇಲ್ಲವೆಂದು ತಿಳಿದರೆ ಸಮಾಜದಲ್ಲಿ ಅವರಿಗೆ ಯಾವ ಒಂದು ರಕ್ಷಣೆಯೂ ಇರುವುದಿಲ್ಲ. ಅವರಿಗೆ ರಕ್ಷಣೆ ದೊರೆಯಬೇಕಾದರೆ ಅವರಿಗೆ ಜೀವನಕ್ಕೆ ಆಧಾರವಾಗಿರತಕ್ಕಂತಹ ಭೂಮಿ ಇರಬೇಕು. ಉದಾಹರಣೆಗೆ ಒಬ್ಬ ಅಧಿಕಾರಿ ಇರುತ್ತಾನೆ ಮತ್ತು ಅತನಿಗೆ ಕೆಲವು ಸಣ್ಣ ಸಣ್ಣ ಮಕ್ಕಳು ಇರುತ್ತಾರೆ. ಒಂದು ವೇಳೆ ಅತನು ಇದ್ದಕ್ಕಿದ್ದ ಹಾಗೆ ಸತ್ತು ಹೋದರೆ ಆಗ ಅತನಮಕ್ಕಳ ಮತ್ತು ವಿಧವೆಯರ ಗತಿ ಏನಾಗಬೇಕು ? ಅವರು ಜಮೀನು ಪಡೆಯುವುದಕ್ಕೆ

ಅನರ್ಹರಾದರೆ ಅವರ ಗತಿ ಭಿಕ್ಷುಕರಿಗೆ ಏನು ಗತಿಯಾಗುತ್ತದೆ ಅದೇ ಗತಿಯಾಗುತ್ತದೆ. ಇದರಿಂದ ಈಗ ಇರತಕ್ಕಂತಹ ಬೆಗ್ಗರ್ಸ್ ಸಂಖ್ಯೆಯನ್ನು ಇನ್ನು ಹೆಚ್ಚು ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಇಂತಹ ಸನ್ನಿವೇಶಗಳು ಸರ್ವೆಸಾಮಾನ್ಯವಾಗಿ ನಮ್ಮ ಸಮಾಜದಲ್ಲಿರುವುದರಿಂದ ಇದನ್ನು ಗಣನೆಗೆ ತೆಗೆದುಕೊಂಡು ಹಿಂದಿದ್ದಂತೆ ಮಾಡಬೇಕು.

5-00 P.M.

ಶ್ರೀ ಕಾಗೋಡು ತಿಮ್ಮಪ್ಪ.—ಮುಂಚೆ ಇದ್ದ ಈ ಕಾನೂನಿನಲ್ಲಿ ಮೈನರ್‌ಗಳಿಗೆ, ವಿಧವೆಯರಿಗೆ ಭೂಮಿ ಇದ್ದರೆ ಅಂತಹ ಭೂಮಿಯನ್ನು ಗೇಣಿಗೆ ಕೊಡಬೇಕೆಂಬ ಅವಕಾಶವಿದ್ದುದರಿಂದ ಆ ಅವಕಾಶವನ್ನು ಪಡೆದುಕೊಂಡು ಜಮೀನು ಉಳಿಸಿಕೊಳ್ಳಬೇಕೆಂದು ಪ್ರಯತ್ನ ಇದೆ. ಅವನ್ನು ನಾನು ಪ್ರತಿಭಟನೆ ಮಾಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈ ತರಹ ಗುಮಾನಿಗೆ ಒಳಪಟ್ಟುದ್ದು ಇನ್ನು ಏನಾದರೂ ವ್ಯವಹಾರವಿದ್ದರೆ ಹೇಳಿ. ಆ ವಿಧವಾದಂಥ ಪ್ರಾಸಂಗಿಕವಾದ ವ್ಯವಹಾರಗಳು ಯಾವುದಾದರೂ ನಡೆದಿದ್ದರೆ ಹೇಳಿ. ಆ ವ್ಯವಹಾರಗಳ ಬಗ್ಗೆ ಯಾರೇ ಆಗಲೀ ಆರ್ಕ್ಕೆ ಇರುವಂತಹ ಜನರು ಕೋರ್ಟ್‌ಗೆ ತರಬಹುದು. ಯಾರೋ ಒಬ್ಬರು ತಪ್ಪು ಮಾಡುತ್ತಾರೆ. ಅಂದಮೇಲೆ ಇಡೀ ಜನಾಂಗ ಆ ರೀತಿ ಮಾಡುತ್ತಾರೆಂದು ತೀರ್ಮಾನಮಾಡುವುದು, ಆ ಒಂದು ವಿವಾದದ ಬಗ್ಗೆ ತಾರತಮ್ಯ ಸೂತ್ರವನ್ನು ಹಾಕಿರುವುದು ಸರಿಯಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಈಗ 12ಸಾವಿರ ರೂಪಾಯಿಗಳಷ್ಟು ವ್ಯವಸಾಯದಿಂದ ವಾರ್ಷಿಕಾದಾಯವಿರತಕ್ಕವರು ಬೇರೆ ಯಾವ ಜಮೀನನ್ನು ಅಕ್ಕ್ಯೂರ್ ಮಾಡಿಕೊಳ್ಳಬಾರದು. ಆದರೆ ಇದುವರೆಗೆ ಆ ರೀತಿ ಮಾಡಿರುವವರಿಗೆ ಅನ್ಯಾಯವಾಗುವುದಿಲ್ಲ. ಮುಂದೆ 12 ಸಾವಿರ ರೂಪಾಯಿಗಳ ಆದಾಯವಿರುವವರು ಜಮೀನು ಇಟ್ಟುಕೊಳ್ಳಬಾರದೆಂದಿದೆ. ಒಂದು ವರ್ಷ 12 ಸಾವಿರ ರೂಪಾಯಿಗಳ ಆದಾಯ ಬಂದು ಮುಂದಿನ ವರ್ಷ 12 ಸಾವಿರ ರೂಪಾಯಿಗಳು ನಷ್ಟವಾದರೆ, ಜಮೀನು ಇಟ್ಟುಕೊಳ್ಳಬಾರದು. ಒಂದೆರಡು ವರ್ಷಗಳು 12 ಸಾವಿರ ರೂಪಾಯಿ ಆದಾಯ ಬರುತ್ತದೆ. ಮೂರನೆಯ ವರ್ಷ 24 ಸಾವಿರ ರೂಪಾಯಿಗಳಷ್ಟು ನಷ್ಟವಾದಾಗ ಜಮೀನನ್ನು ಕೊಂಡುಕೊಳ್ಳುತ್ತೀವೆಂದು ಹೇಳಿದರೆ ಆಗ ಜಮೀನು ಸಿಗುವುದಿಲ್ಲ. ಅಂದ ಮೇಲೆ ಈ 12 ಸಾವಿರ ರೂಪಾಯಿಗಳಷ್ಟು ಆದಾಯ ಶಾಶ್ವತವಾದುದಲ್ಲ. ಇನ್ನೂ ಹೆಚ್ಚಿಗೇ ಬರಬಹುದು, ಅಥವಾ ಕಡಿಮೆಯಾಗಿಯೇ ಬರಬಹುದು. ವ್ಯವಸಾಯದಲ್ಲಿ ಅದೇ ಖಾಯಂ ಆದಾಯವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕನಿಷ್ಟ ಪಕ್ಷ ಐದಾರು ವರ್ಷಗಳವರೆಗೆ ಒಂದೇ ಸಮನಾದ ಆದಾಯ ಇರಬೇಕು. ಒಂದು ವರ್ಷ ಆದಾಯ ಬಂದು, ಎರಡನೆಯ ವರ್ಷ ಆದಾಯ ಬಾರದೇ ಇರಬಹುದು. ಆದಾಯದ ರೂಪರೇಷೆಗಳಲ್ಲಿ ಇದು ಯಾವ ಆದಾಯ, ತಾತ್ಕಾಲಿಕವಾದ ಆದಾಯವೇ ಎಂಬುದನ್ನು ನೋಡಬೇಕು. ಆದ್ದರಿಂದ ಇದೂ ಕೂಡ ತಾರತಮ್ಯದಿಂದ ಕೂಡಿರುವ ಅಂಶವೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 1965ನೇ ಇನಾಮು ಕಾನೂನು ಪ್ರಕಾರ ಗೇಣಿ ಭೂಮಿಯನ್ನು ವಾಪಸ್ಸು ಪಡೆಯುವುದಕ್ಕೆ ಸುಮಾರು 90 ಸಾವಿರ ಅರ್ಜಿಗಳು ದಾಖಲಾಗಿದ್ದುವು. ಆ ಹೊತ್ತಿಗೆ 60-70 ಸಾವಿರ ಅರ್ಜಿಗಳು ಈಗ ಫೈಸಲು ಆಗಿವೆ. ಇನ್ನು ಕೇವಲ 30-20 ಸಾವಿರ ಅರ್ಜಿಗಳು ಉಳಿದುಕೊಂಡಿವೆಯೆಂಬುದು ಪ್ರಶ್ನೆಗೆ ಉತ್ತರವಾಗಿ ಹೇಳಿದರು. ಆ 30-20 ಸಾವಿರ ಜನರು ಏನು ಪಾಪ ಕಾರ್ಯಗಳನ್ನು ಮಾಡಿದ್ದರು. ಈಗ ತಾವೇ ಈ ಕಾನೂನನ್ನು ಜಾರಿಗೆ ತರುತ್ತಿದ್ದೀರಿ. 60 ಸಾವಿರ ಜನರು ಅದನ್ನು ವಾಪಸ್ಸು ತೆಗೆದುಕೊಂಡರು. 20 ಸಾವಿರ ಜನರಿಗೆ ತೊಂದರೆಮಾಡುತ್ತಿದ್ದಾರೆ. ಕೋರ್ಟಿನವರು ಯಾವುದೇ ಕಾರಣದಿಂದ ಡಿಸ್ಮಿಸ್ ಟ್ರಾನ್ಸ್‌ಫರ್ ಆಯಿತೆಂದರೆ, ಅಥವಾ ಅವರು ಖಾಯಲೆ ಬಿದ್ದರೆಂದರೆ ವ್ಯವಹಾರ ಮುಂದುವರಿಯುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ನೀವು ಒಂದು ಪ ಇಷ್ಟೇ ದಿವಸಗಳಲ್ಲಿ ಸಂಬಂಧಪಟ್ಟ ವ್ಯವಹಾರ ತೀರ್ಮಾನವಾಗಬೇಕೆಂದು ಒಂದು ಕಾಲವನ್ನು ಗೊತ್ತುಮಾಡಿ ಇಷ್ಟು ಹೊತ್ತಿಗೆ ಅದನ್ನು ತೀರ್ಮಾನ ಮಾಡಬೇಕೆಂದು ಸರ್ಕಾರದವರು ಏರ್ಪಾಡುಮಾಡಬಹುದಿತ್ತು. ಹಾಗೆ ಮಾಡದೆ ಯಾವುದೇ ಕಾರಣಕ್ಕೆ ಕಕ್ಷಿಗಾರನು ಜವಾಬ್ದಾರಿ ಇಲ್ಲದೇ ಇರುವ ಸಂದರ್ಭದಲ್ಲಿ ಅವನನ್ನು ಪೀನಲೈಜ್ ಮಾಡುವುದು, ಅವನನ್ನು ದಂಡಿಸುವುದು ಯಾವ ನ್ಯಾಯವೆಂದು ನಾನು ಪ್ರಶ್ನೆಮಾಡುತ್ತೇನೆ.

ಇನ್ನು ರಿಲಿಜಿಯಸ್ ಟ್ರಸ್ಟ್‌ಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹಾಗೂ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಸಿದ್ಧಗಂಗಾ ಮಠಕ್ಕೆ ಹಾಗೂ ಕೆಲವು ಕ್ಷೇತ್ರಗಳಿಗೆ ಮತ್ತೊಮ್ಮೆ ಹೋಗಿ ನೋಡಿಕೊಂಡು ಬರಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅಲ್ಲಿ ನಮ್ಮಾರು 67 ಸಾವಿರ ವಿದ್ಯಾರ್ಥಿಗಳು ಪ್ರತಿವಿನವೂ ಬೆಳಿಗಿನ

(ಶ್ರೀ ಎಚ್. ಟಿ. ಕೃಷ್ಣಪ್ಪ)

ಉಪಾಹಾರ, ಮಧ್ಯಾಹ್ನ ಊಟ, ಸಾಯಂಕಾಲ ಊಟ-ಈ ಸೌಕರ್ಯಗಳನ್ನು ಮಾತ್ರ ಪಡೆಯುತ್ತಿದ್ದಾರೆ. ಸರ್ಕಾರಕ್ಕೆ ನಾನು ಒಂದು ಪ್ರಶ್ನೆ ಮಾಡುತ್ತೇನೆ. ಸರ್ಕಾರದವರು ಒಂದು ಮಾದರೀ ಸಂಸ್ಥೆಯನ್ನು ನಡೆಸುತ್ತಿದ್ದಾರೆಂದು ನನಗೆ ಕಾಣುತ್ತದೆ. ಸರ್ಕಾರದವರು ಯಾವ ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ಸರ್ಕಾರ ಆ ಕೆಲಸಗಳನ್ನು ಸಾರ್ವಜನಿಕರ ಹಾಗೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವ ರೀತಿಯಲ್ಲಿ ಮಾಡುವುದಕ್ಕೆ ಬದಲು ಅದರ ಮೇಲೆ ಗದಾಪ್ರಹಾರ ಮಾಡುವುದು ಸರಿಯಲ್ಲ. ಈ ದಿವಸ ಬಡಬಗ್ಗರಲ್ಲಿ ಅನೇಕ ಜನರು ಶಾಲೆಯ ಮುಖವನ್ನು ನೋಡದೇ ಇರತಕ್ಕವರೂ ಇದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಕೆಲವರು ದೊಡ್ಡದೊಡ್ಡ ಪದವಿಗಳನ್ನೂ ದೊಡ್ಡದೊಡ್ಡ ಸ್ಥಾನಮಾನಗಳನ್ನೂ ಹೊಂದಿದ್ದಾರೆ. ಇಂತಹ ವಿದ್ಯಾ ಸಂಸ್ಥೆಗಳು ಹಾಗೂ ಇಂತಹ ಧಾರ್ಮಿಕ ಸಂಸ್ಥೆಗಳು ಇವತ್ತು ನಮ್ಮ ದೇಶದಲ್ಲಿ ಇಲ್ಲದೇ ಹೋಗಿದ್ದರೆ, ಕನಿಷ್ಠ ಪಕ್ಷ ಸೇಕಡ 40-50ರಷ್ಟು ಜನರು ವಿದ್ಯಾವಂತರಾಗುವುದಕ್ಕೆ ಅವಕಾಶ ಸಿಗುತ್ತಲೇ ಇರಲಿಲ್ಲ. ನಮ್ಮಲ್ಲಿ ಭೂಮಿಯನ್ನು ಇಟ್ಟುಕೊಂಡಿರುವ ಸಂಸ್ಥೆಗಳು ಬೆಂಗಳೂರಿನಲ್ಲಿ ಕೆಲವಿವೆ. ಇನ್ನು ಕೆಲವು ಭೂಮಿಯನ್ನು ಇಟ್ಟುಕೊಂಡಿಲ್ಲ. ಭೂಮಿ ಇಟ್ಟುಕೊಳ್ಳದೆ ಎಷ್ಟೋ ಸಂಘ ಸಂಸ್ಥೆಗಳು ಹೋಗಿ ಅವೀಗ ಸಾಧಾರಣ ಸಂಸ್ಥೆಗಳಾಗಿವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ಈಗ ಬಾಡಿಗೆ ಬರುವ ಮಳಿಗೆಗಳನ್ನು ಇಟ್ಟುಕೊಂಡಿದ್ದಾರೆ. ಆ ಮಳಿಗೆಗಳಿಗೆ ಸೀಲಿಂಗ್ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸುಳ್ಳು ಹಾಗೂ ಕಳ್ಳ ಲೆಕ್ಕಗಳನ್ನು ತಯಾರುಮಾಡಿ ಸರ್ಕಾರವನ್ನು ವಂಚಿಸಿ ಸರ್ಕಾರದಿಂದ ಹಣವನ್ನು ಪಡೆದು ಕೆಲವು ವಿದ್ಯಾ ಸಂಸ್ಥೆಗಳು ನಡೆಸುತ್ತಿರುವ ಸಂಸ್ಥೆಗಳ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಲಾರದಷ್ಟು ದುರ್ಬಲರಾಗಿಲ್ಲವೆಂದು ನನ್ನ ಭಾವನೆ. ಅಂತಹವರ ಮೇಲೆ ಸೂಕ್ತ ಕ್ರಮವನ್ನು ಜರುಗಿಸಬಹುದು. ಆದರೆ ಸರ್ಕಾರದ ದೃಷ್ಟಿಯಲ್ಲಿ ಸರ್ಕಾರದ ಅನುಭವದಲ್ಲಿ ಯಾವ ಒಂದು ಸಂಸ್ಥೆ ಮೊದಲಿನಿಂದಲೂ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದೆಯೋ, ಯಾವ ಒಂದು ಸಂಸ್ಥೆಯ ಮೂಲಕ ಉತ್ತಮವಾದ ಸೇವೆ ಆಗುತ್ತಿದೆಯೋ ಅಂತಹವರ ಬಗ್ಗೆ ಯಾವ ವಿಧವಾದಂಥ ಕಹಿ ಭಾವನೆಯನ್ನು ಇಟ್ಟುಕೊಳ್ಳಬಾರದು. ಬಡವರಿಗೆ ಹೆಚ್ಚುಹೆಚ್ಚಾಗಿ ಭೂಮಿಯನ್ನು ಹಂಚಬೇಕು. ಇಲ್ಲಿ ಬಡತನವನ್ನು ಹೋಗಲಾಡಿಸುವುದಕ್ಕೆ ಒಂದು ನೀತಿಯನ್ನು ಅನುಸರಿಸದೆ ಹೋದರೆ ನಿಜವಾಗಿಯೂ ಸರ್ಕಾರದವರು ಸಮಾಜಘಾತುಕ ಕಾರ್ಯವನ್ನು ಮಾಡಿದಂತಾಗುತ್ತದೆಂದು ನಾನು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ತಿಳಿಸಬಯಸುತ್ತೇನೆ.

ಇಷ್ಟು ಹೇಳಿ, ನನಗೆ ಅಧ್ಯಕ್ಷರು ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ. ಹೆಗಡೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮಾನ್ಯ ಕಂದಾಯ ಸಚಿವರು ಸಭೆಯ ಮುಂದೆ ವಿಂಡಿಸಿರತಕ್ಕ ಮೈಸೂರು ರಾಜ್ಯದ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತ, ಇದರಲ್ಲಿ ಅವಶ್ಯಕವಾಗಿ ಆಗಬೇಕಾದ ಕೆಲವು ಅಂಶಗಳನ್ನು ಈಗ ಸೂಚನೆ ಮಾಡಬಯಸುತ್ತೇನೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುನ್ನವೇ ನಮ್ಮ ಪ್ರಮುಖ ಮತ್ತು ನಮ್ಮ ಪಕ್ಷದ ಮುಖಂಡರುಗಳೂ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣವೇ ಇಲ್ಲಿ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದು ಆಗಿನಿಂದಲೂ ಈ ವಿಚಾರದಲ್ಲಿ ಭಾಷಣಗಳನ್ನು ಮಾಡುತ್ತಲೇ ಬಂದಿದ್ದಾರೆ. ಆದರೆ ನಮ್ಮ ರಾಷ್ಟ್ರ ಪದ್ಧತಿಯು ಕೂಡ ಅದೇ ಪ್ರಕಾರವೇ ಇರುವುದರಿಂದ ಇಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸಮತೆಗಳು ಇರುವುದರಿಂದ, ಇಲ್ಲಿ ಮೊದಲು ಸಾಮಾಜಿಕ ಸುಧಾರಣೆಯಾಗದ ಏನಾ ಆರ್ಥಿಕ ಸುಧಾರಣೆಯಾಗುವುದಿಲ್ಲ ಅನ್ನುವುದನ್ನು ನಮ್ಮ ಮುಖಂಡರುಗಳು ಸಂಪೂರ್ಣವಾಗಿ ಮನಗಂಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ—1920 ರಲ್ಲೇ ಶ್ರೀ ಪಂಡಿತ ಜವಹರಲಾಲ್ ನೆಹ್ರೂ ಅವರು ಒಂದಾವರ್ತಿ ಮಾತನಾಡುತ್ತಿದ್ದಾಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣವೇ ದೇಶದಲ್ಲಿರತಕ್ಕ ಬಡತನವನ್ನು ನಿವಾರಣೆ ಮಾಡಬೇಕು, ಇಲ್ಲಿ ಸಮಾಜವನ್ನು ಸುಧಾರಣೆ ಮಾಡಬೇಕು ಸಮತಾವಾದ ಸಮಾಜವನ್ನು ಜಾರಿಗೆ ತರಬೇಕು ಎಂಬುದಾಗಿ ಈ ಮಾತುಗಳನ್ನು ಅವರು 1920 ರಲ್ಲೇ ಹೇಳುತ್ತಿದ್ದರು. ಅದೇ ರೀತಿ ಮಹಾತ್ಮಾ ಗಾಂಧಿಯವರೂ ಮತ್ತು ಇನ್ನಿತರೇ ಮುಖಂಡರೂ ಹೇಳುತ್ತಿದ್ದರು. ಆದರೆ ನಮಗೆ ಸ್ವಾತಂತ್ರ್ಯ

ಬಂದು 25 ವರ್ಷಗಳು ಕಳೆದಾಗ್ಯೂ ನಮ್ಮ ರಾಷ್ಟ್ರದಲ್ಲಿರತಕ್ಕ ಬಡತನ ನಿವಾರಣೆಯಾಗಲಿಲ್ಲ. ಸಮತಾವಾದ ಸಮಾಜವನ್ನು ನಾವು ಇಲ್ಲಿಯವರೆಗೂ ಜಾರಿಗೆ ತರುವುದಕ್ಕಾಗಲಿಲ್ಲ. ನಮ್ಮ ಎಲ್ಲ ಮುಖಂಡರೂ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಸಮಾಜದಲ್ಲಿ ಎಲ್ಲರೂ ಸುಖದಿಂದ ಬಾಳುವಂಥ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದುದ್ದು ಈ ದಿವಸ ಏನಾಗಿದೆ ? ಆದರೆ ಈ ವಿಚಾರದಲ್ಲಿ ಇವರು ಕೈಕಟ್ಟಿ ಕುಳಿತಿಲ್ಲ. ಸಮತಾವಾದ ಸಮಾಜವನ್ನು ಜಾರಿಗೆ ತರುವುದಾಗಿ 1958 ರಲ್ಲೇ ಒಂದು ಘೋಷಣೆಯನ್ನು ಹೊರಡಿಸಿದರು. ಆದರೆ ಆ ದಿಶೆಯಲ್ಲಿ ನಮ್ಮ ಸರ್ಕಾರ ಇಲ್ಲಿಯ ತನಕ ಅಂಥ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿರಲಿಲ್ಲ. ಆದರೆ ಈ ದಿವಸ ನಮ್ಮ ಕಂದಾಯ ಸಚಿವರಾದ ಶ್ರೀ ಹುಚ್ಚಮಾಸ್ತಿಗೌಡರು ಧೈರ್ಯಮಾಡಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟು ಮಸೂದೆಯನ್ನು ಸಭೆಯ ಮುಂದೆ ತಂದುದಕ್ಕಾಗಿ ಮತ್ತು ಅವರು ಈ ದಿವಸ ಗೇಣಿದಾರರನ್ನು ಭೂಮಾಲೀಕರನ್ನಾಗಿ ಮಾಡತಕ್ಕ ಬಗ್ಗೆ ಇಟ್ಟಿರತಕ್ಕ ದಿಟ್ಟ ಧೈರ್ಯಹೆಜ್ಜೆಗಾಗಿ ಅವರು ಅಭಿನಂದನಾರ್ಹರು.

ಆದರೆ ನಾನು ಈಗ ಈ ಮಸೂದೆಯಲ್ಲಿರತಕ್ಕ ಕ್ಲಾಜುಗಳಮೇಲೆ ಮಾತನಾಡುವುದಕ್ಕೆ ಮೊದಲು ನಮಗೆ ಈ ಭೂಸುಧಾರಣಾಶಾಸನವಾದರೂ ಏಕೆ ಬೇಕು ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮ ದೇಶದ ಪರಿಸ್ಥಿತಿ ಆದರೋ ಬಹಳ ಬಡತನದಲ್ಲಿದೆ. ಆದಾಗ್ಯೂ ನಮ್ಮಲ್ಲಿ ಎಲ್ಲ ಜನರೂ ಸುಖದಿಂದ ಬಾಳುವಂಥ ಒಂದು ಸಮಾಜ ಸುಧಾರಣೆಯನ್ನು ಮಾಡಿ ಇಲ್ಲಿ ಆ ಸಮತಾವಾದ ಸಮಾಜವನ್ನು ಇಲ್ಲಿಯ ತನಕ ಜಾರಿಗೆ ತರುವುದಕ್ಕಾಗಲಿಲ್ಲ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ರಾಷ್ಟ್ರ ವಿದ್ಯೆ, ವಿಜ್ಞಾನ ಮತ್ತು ದೇಶದಲ್ಲಿ ಅಗತ್ಯ ವಸ್ತುಗಳ ಉತ್ಪನ್ನದಲ್ಲಿ ಬಹಳ ಹಿಂದೆ ಬಿದ್ದಿತ್ತು; ಈಗಿನಂತೆ ಮುಂದುವರಿದಿರಲಿಲ್ಲ. ಈ ದಿವಸ ಭಾರತದಲ್ಲಿ ಹಿಂದೆ ಎಂದೂ ತಯಾರಿಸದಿದ್ದಂಥ ಸ್ಯಾಟರ್ ತಯಾರಿಸುವುದೇ ಅಲ್ಲದೆ ಇಂದು ಇಲ್ಲಿ ಅಣುಶಕ್ತಿಯನ್ನು ಕೂಡ ತಯಾರಿಸಲಾಗುತ್ತಿದೆ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ನಮ್ಮಲ್ಲಿ ಉತ್ಪನ್ನ ಜಾಸ್ತಿಯಾಗಿದೆ. ಆದರೆ ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ....

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ನೇರವಾಗಿ ಜಂಟಿಸದೆಕ್ಟ್ ಸಮಿತಿಯವರ ವರದಿ ಬಗ್ಗೆ ಮಾತನಾಡುವುದು ಒಳ್ಳೆಯದು.

ಶ್ರೀ ಪಿ. ಪಿ. ಹೆಗಡೆ.—ನಾನು ಈಗ ಹೇಳುತ್ತಿರುವ ವಿಚಾರಗಳನ್ನು ಪ್ರಸ್ತಾಪ ಮಾಡದೆ ಈ ಮಸೂದೆಯಲ್ಲಿ ಹೇಳಿರತಕ್ಕ ಕ್ಲಾಜುಗಳ ಮೇಲೆ ಮಾತನಾಡಿದರೆ ಅದು ಯಾರಿಗೂ ಅಷ್ಟು ಅರ್ಥ ಆಗುವುದಿಲ್ಲ. ಅದಕ್ಕಾಗಿ ನಾನು ಇದನ್ನೆಲ್ಲಾ ಹೇಳಬೇಕಾಗಿದೆ. ನಮ್ಮಲ್ಲಿ ಪ್ರೊಡಕ್ಷನ್ ಜಾಸ್ತಿ ಆಗಿದ್ದರೂ ಅದರ ವಿತರಣೆ ಒಂದು ಸರಿಸಮಾನಾಗಿ ನಡೆಯುತ್ತಿಲ್ಲ. ಇವೆರಡೂ ಸಮನಾಗಿ ಆಗದೆ ಸಮಾಜದಲ್ಲಿ ಬಡತನ ಹೇಗೆ ಹೋಗುತ್ತದೆ ? ಇವೆರಡರ ವಿತರಣೆ ಸಮನಾಗಿ ಆಗಬೇಕು. ಈಗ ನಾವು ಇದರಲ್ಲಿರತಕ್ಕ ದೋಷವನ್ನು ಕಂಡುಕೊಂಡು ಇದಕ್ಕೆ ತಕ್ಕ ನಿವಾರಣೆಯನ್ನು ಮಾಡಬೇಕು. ಅಂದರೆ ಏನು ಉತ್ಪಾದನೆಯಾಗುತ್ತದೋ ಅದರ ವಿತರಣೆ ಎಲ್ಲ ಕಡೆಗಳಲ್ಲೂ ಎಲ್ಲರಿಗೂ ಸರಿಸಮಾನವಾಗಿ ಆಗುವಂತೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದು. ಆದರೆ ಈಗ ಇವೆರಡರ ವಿತರಣೆ ಸರಿಯಾಗಿ ಆಗದೆ ಇರುವುದರಿಂದ ಸಮಾಜದಲ್ಲಿ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿದ್ದಾರೆ, ಬಡವರು ಪ ತ್ತಿಷ್ಟು ಬಡವರಾಗುತ್ತಿದ್ದಾರೆ. ಈ ವಿಚಾರ ನಮ್ಮ ಸರ್ಕಾರಕ್ಕೆ ಚೆನ್ನಾಗಿ ಗೊತ್ತಾಗಿದೆ. ಅದಕ್ಕಾಗಲೇ ಈ ದಿವಸ ನಮ್ಮ ಸರ್ಕಾರ ಗೇಣಿದಾರರನ್ನು ಭೂಮಾಲೀಕರನ್ನಾಗಿ ಮಾಡಬೇಕೆಂದು ಈಗ ಈ ಮಸೂದೆಯನ್ನು ತಂದಿದ್ದಾರೆ. ಆದರೆ ಇನ್ನೂ ಈ ಬಿಲ್ಲಿನಲ್ಲಿ ಕೆಲವು ದುರಸ್ತಿಗಳಾಗಬೇಕಾಗಿದೆ. ಇಲ್ಲಿಯತನಕ ಇದನ್ನು ಮಾಡದೆ ಇದ್ದ ಕಾರಣ ದೇಶದ ಸಂಪತ್ತು ಕೆಲವೇ ಜನರ ಕೈಲಿ ನಿಂತಿದೆ. ಹೀಗೆ ಇದು ಒಂದು ಕಡೆ ಕೇಂದ್ರೀಕೃತವಾಗಬಾರದು. ಅದನ್ನು ತಪ್ಪಿಸುವುದಕ್ಕಾಗಿ ಈಗ ಈ ಮಸೂದೆಯಲ್ಲಿ ಗೇಣಿದಾರರಿಗೆ ಹೊಲದೊಡೆಯನಾಗಬೇಕು ಎಂದು ಹೇಳಿದೆ. ಭೂಮಿ ಇಲ್ಲದ ವ್ಯವಸಾಯದ ಕೂಲಿಗಾರರಿಗೆ ಭೂಮಿ ಸಿಗಬೇಕೆಂಬ ಘೋಷಣೆ ಈ ಮಸೂದೆಯಲ್ಲಿದೆ. ಇನ್ನು ಈಗ ಈ ಬಿಲ್ಲಿನಲ್ಲಿ ಆ 14ನೇ ಸೆಕ್ಷನ್ನನ್ನು ಸಂಪೂರ್ಣವಾಗಿ ಕಿತ್ತು ಹಾಕಿದ್ದಾರೆ. ಇದು ಅತ್ಯಂತ ಸಂತೋಷದ ಸುದ್ದಿ. ಇನ್ನು ಮುಂದೆ ಭೂಮಾಲೀಕ ಭೂಮಿಯನ್ನು ಗೇಣಿದಾರನಿಂದ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಉಳುವವನೇ ಹೊಲದ ಒಡೆಯನಾಗಬೇಕು ಎಂಬ ಮಹತ್ವದ ಪ್ರಶ್ನೆಯಿತ್ತು, ಅವಕ್ಕೆ ಅನುಗುಣವಾಗಿ ಈ ವಿಧೇಯಕ ತಂದಿದ್ದಾರೆ. ಆದರೆ ಈ ಉದ್ದೇಶವನ್ನು ಪೂರ್ಣಮಾಡುವಾಗ ಕೆಲಕೆಲವು ಅಡಚಣೆಗಳು ಬರುವುವು. ದೊಡ್ಡ ಹಿಡುವಳಿದಾರರೂ ಮತ್ತು ಚಿಕ್ಕ ಹಿಡುವಳಿದಾರರೂ ಇದ್ದಾರೆ. ಈ ಬಿಲ್ಲಿನಲ್ಲಿ ವ್ಯಾಖ್ಯ ಮಾಡಿರುವ ಪ್ರಕಾರ ಎರಡು ಯೂನಿಟ್ಟುಗಳಿಗಿಂತ ಹೆಚ್ಚು ಜಮೀನು ಯಾರಿಗಿಲ್ಲ ಮತ್ತು ಭೂಮಿಯ ಉತ್ಪಾದನೆ ಕೂಡಿ ಯಾರಿಗೆ 12ಸಾವಿರ ರೂಪಾಯಿ ಉತ್ಪತ್ತಿ ಇದೆ ಅವರು ಸಣ್ಣ ಹಿಡುವಳಿದಾರರು. ವಿಧವೆಯರು, ಚಿಕ್ಕ ಬಾಲಕರು,

(ಶ್ರೀ ಪಿ. ಪಿ. ಹೆಗಡೆ)

ಸ್ಮಾಲ್ ಹೋಲ್ಡರುಗಳು, ಯಾರಿಗೆ 12 ಸಾವಿರ ರೂಪಾಯಿಗಳಿಗಿಂತ ಕಡಿಮೆ ಉತ್ಪತ್ತಿ ಇದೆ ಅವರಿಗೆ ಸೌಲಭ್ಯ ಮಾಡಿಕೊಡಬೇಕು ಎಂಬುದು ಈ ವಿಧೇಯಕದ ಉದ್ದೇಶ. ಹತ್ತಿಪ್ಪತ್ತು ಎಕರೆ ಗಳಿರುವ ವಿಧವೆಯರ ವಿಚಾರ ನಾನು ಹೇಳುವುದಿಲ್ಲ. ಸ್ಮಾಲ್ ಹೋಲ್ಡರ್ ವಿಚಾರ ನಾನು ಹೇಳುವುದು. ಯಾರಿಗೆ ಎರಡು ಯೂನಿಟ್ ಇದೆಯೋ ಅವರ ವಿಚಾರ ಸ್ವಲ್ಪ ಯೋಚನೆಮಾಡಬೇಕು. ಅವರ ಪರಿಸ್ಥಿತಿ ಅನೇಕರಿಗೆ ಗೊತ್ತಿಲ್ಲ. 12 ಸಾವಿರಕ್ಕಿಂತ ಕಡಮೆ ಉತ್ಪತ್ತಿ ಇರುವವರು ಅದು ಸಾಲುವುದಿಲ್ಲವೆಂದು ಕೆಲವು ಸಲ ಗೇಣಿದಾರರನ್ನಿಟ್ಟು ವ್ಯವಸಾಯ ಮಾಡಿಸಬಹುದು. ಅವರು ಬೇರೆ ಉದ್ಯೋಗ ಮಾಡಬಹುದು. ಇನ್ನು ಮುಂದೆ ಅಂಥ ಸಣ್ಣ ಹಿಡುವಳಿದಾರರಿಗೆ ತೊಂದರೆ ಯಾಗುವುದು. ಇದಕ್ಕಾಗಿ 14ನೆಯ ರಿಸಮೋಷನ್ ಕ್ಲಾಜ್‌ನಲ್ಲಿ ಸ್ಮಾಲ್ ಹೋಲ್ಡರುಗಳು ಭೂಮಿ ವಶಪಡಿಸಿಕೊಳ್ಳಲು ಅವಕಾಶ ಮಾಡಬೇಕು.

ಎರಡನೆಯ ವಿಷಯ. ಅದು ಸೀಲಿಂಗಿಗೆ ಸಂಬಂಧಪಟ್ಟಿದೆ. ಸೀಲಿಂಗ್ ಎಷ್ಟಿರಬೇಕು? ಈಗ ಫ್ಯಾಮಿಲಿ ಡೆಫಿನಿಷನ್ ಇದೆ. ಕುಟುಂಬದ ಡೆಫಿನಿಷನ್ ವಿಚಾರ ಹೇಳಬೇಕಾಗಿದೆ. ಸರ್ಕಾರದವರು ಕುಟುಂಬದ ವ್ಯಾಖ್ಯೆ ಮಾಡುವಾಗ ಗಂಡ, ಹೆಂಡತಿ ಮತ್ತು ಮಕ್ಕಳು ಸೇರಿ 5 ಜನರ ಕುಟುಂಬ ಎಂದು ಹೇಳುವರು. ಚಿಕ್ಕ ಬಾಲಕರು ಎಂದು ಹೇಳಿದ್ದಾರೆ. ಅದಕ್ಕೆ ಬದಲು ಸುಮ್ಮನೆ 5 ಜನರ ಕುಟುಂಬ ಎಂದು ಹೇಳಬಹುದಾಗಿತ್ತು. ಗಂಡ, ಹೆಂಡತಿ ಮತ್ತು ಮಕ್ಕಳು ಸೇರಿದ 5 ಜನರ ಕುಟುಂಬ ಎಂದು ಹೇಳಿದ್ದರೆ ಒಳ್ಳೆಯ ದಾಗುತ್ತಿತ್ತು. ಮುಂದೆ ಇದಕ್ಕೆ ಕಾರಣ ಹೇಳುತ್ತೇನೆ. ಕುಟುಂಬ ಎಂದರೆ ಈ ರೀತಿ ವಿವರಿಸ ಬೇಕಾಗಿತ್ತು. ಈಗ ಸೀಲಿಂಗ್ ನಿಗದಿಮಾಡಿದ್ದಾರೆ. ಒಂದು ಕುಟುಂಬಕ್ಕೆ ಸೀಲಿಂಗ್ ನಿಗದಿ ಮಾಡಿದ್ದಾರೆ. ಗಂಡ ಹೆಂಡತಿ ಮತ್ತು ಮೂರು ಬಾಲಕರು ಅಥವಾ ಮದುವೆ ಇಲ್ಲದ ಹೆಣ್ಣು ಮಕ್ಕಳು ಇರುವ ಒಂದು ಕುಟುಂಬಕ್ಕೆ ಒಂದು ಸೀಲಿಂಗ್ ಇರುವ ಜಮೀನು ಕೊಡಬಹುದು ಎಂದು ಹೇಳುವರು. ಅಂದರೆ 10 ಯೂನಿಟ್ ಫಸ್ಟ್ ಕ್ಲಾಸ್ ಲ್ಯಾಂಡ್ ಎಂದು ಗೊತ್ತುಮಾಡಿದ್ದಾರೆ. ಇದಕ್ಕಿಂತ ಮುಂಚೆ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಮಾಡಿರುವುದರಲ್ಲಿ ಸ್ವಲ್ಪ ಬದಲಾವಣೆ ಯಾಗಬೇಕು. ಈ ಬದಲಾವಣೆ ಬಹಳ ಮಹತ್ವದ್ದಿದೆ. ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಬಹಳ ನಮೂನೆಯ ಭೂಮಿಯ ತರಗತಿಗಳಿವೆ. ಒಂದು ಎಕರೆಗೆ 5 ಸಾವಿರ ರೂಪಾಯಿ ನೆಟ್ ಇನ್‌ಕಂ ಬರುವುದೂ, 500 ರೂಪಾಯಿ ಇನ್‌ಕಂ ಬರುವ ಭೂಮಿಯೂ ಇದೆ. 500 ರೂಪಾಯಿ ಗಳಿಂದ 5 ಸಾವಿರ ರೂಪಾಯಿಗಳವರೆಗಿರುವ ಅಂತರ ಹೇಗೆ ಸರಿಪಡಿಸಬೇಕು? ಈಗ ಆಣೆವಾರಿ ಪ್ರಕಾರ ವಿತರಣೆಮಾಡಲು ನಿರ್ಧರಿಸಿದ್ದಾರೆ. 8 ಆಣೆ ಮೇಲೆ ಬೆಳೆಯಾಗುವುದನ್ನು ಮೊದಲನೆ ದರ್ಜೆ, 8 ಆಣೆ ಕೆಳಗೆ ಬರುವುದನ್ನು ಎರಡನೆ ದರ್ಜೆ ಎಂದು ವಿಂಗಡಿಸಿದ್ದಾರೆ. ಫಸ್ಟ್ ಕ್ಲಾಸ್ ಲ್ಯಾಂಡ್‌ನಲ್ಲಿ ಎಂಟಾಣೆ ಮೇಲೆ ಆಣೆವಾರಿ ಇರುವುದಕ್ಕೆ 10 ಎಕರೆ ಮಿತಿ, 8 ಆಣೆ ಕೆಳಗೆ ಆಣೆವಾರಿ ಇರುವುದಕ್ಕೆ 12 ಎಕರೆ ಎಂದು ಮಿತಿಗೊಳಿಸಿದ್ದಾರೆ. ನನ್ನ ಸೂಚನೆ ಈ ಎರಡು ತರಗತಿ ಸಾಲದು, 4 ತರಗತಿ ಮಾಡಬೇಕು. ಎಂಟಾಣೆಯೊಳಗಿರುವುದು, 8 ರಿಂದ 12 ಆಣೆವರೆಗಿರುವುದು 12 ಆಣೆ ಇರುವುದು, 12 ಆಣೆ ಮೇಲಿರುವುದು ಎಂದು ವಿಂಗಡಿಸಬೇಕು. ಹೀಗೆ ಮಾಡಿ 6 ಎಕರೆ, 8 ಎಕರೆ, 10 ಎಕರೆ ಮತ್ತು 12 ಎಕರೆ ಹೀಗೆ ಎ—1, ಎ—2, ಎ—3, ಎ—4, ಎಂದು ವಿಂಗಡಿಸಬೇಕು. ಅದೇ ರೀತಿ ಬಿ—1 14 ಎಕರೆ, ಬಿ—2 16 ಎಕರೆ, ಬಿ—3, 18 ಎಕರೆ ಎಂದು ಮಾಡಬೇಕು. ಹೀಗೆ ಮಾಡಿದರೆ 14 ತರಗತಿ ಜಮೀನಾಗುವುದು. ಆದರೂ ಸಾಕಷ್ಟು ವ್ಯವಸ್ಥೆ ಮಾಡಿದಂತಾಗುವುದಿಲ್ಲ. ಕೊನೆ ಟೈಪ್ ಜಮೀನು 64 ಎಕರೆ ಇರಬಹುದು ಅಥವಾ ಶೇಕಡ 20 ರಷ್ಟು ಎಂದರೆ 65 ಎಕರೆ ಇರಬಹುದು. ಫಸ್ಟ್ ಕ್ಲಾಸ್ ಭೂಮಿ 5—6 ಎಕರೆ ಸಾಕು ಎಂದು ಹೇಳುವಾಗ ಕಲ್ಲು ಭೂಮಿ 400—500 ಎಕರೆ ಇದ್ದರೂ ಸಾಲದು. ಇಂಥ ದೊಡ್ಡ ಸಮಸ್ಯೆಯಿದೆ, ಕ್ಲಾಸಿಫಿಕೇಷನ್‌ನಲ್ಲಿ ಹೀಗೆ ಕಷ್ಟವಿದೆ. ನಮ್ಮಲ್ಲಿ 6—7 ಸಾವಿರ ರೂಪಾಯಿ ಉತ್ಪತ್ತಿ ಬರುವ ಜಮೀನಿದೆ; 50 ರೂಪಾಯಿ ಬರುವುದೂ ಇದೆ. ಕೊನೆಯ ತರಗತಿ 500 ಎಕರೆ ಯಾಗಬಹುದು. ಸರಕಾರದವರು ಆಣೆವಾರಿ ಕ್ಲಾಸಿಫಿಕೇಷನ್ ಮಾಡಿದ್ದಾರೆ. ಎ ಕ್ಲಾಸ್ 6, 8, 10, 12, ಎಕರೆ ಎಂದೂ, ಬಿ ಕ್ಲಾಸ್ ಲ್ಯಾಂಡ್ 14, 16, 18 ಎಕರೆ ಎಂದೂ, ಸಿ ಕ್ಲಾಸ್ ಲ್ಯಾಂಡ್ 20 ಎಕರೆ, 25, 28 ಎಕರೆ ಎಂದೂ, ಡಿ ಕ್ಲಾಸ್ ಲ್ಯಾಂಡ್ 40, 50 ಎಕರೆ ಎಂದೂ, ಇಕ್ಲಾಸ್ ಲ್ಯಾಂಡ್ 54 ಎಕರೆ ಎಂದೂ ಗೊತ್ತುಮಾಡಬಹುದು. ಇ—2 70—80 ಎಕರೆ ಮಾಡಿದರೂ ಸಾಲುವುದಿಲ್ಲ. ಬರಡು ಜಮೀನಾದರೆ ನೂರು ಎಕರೆಯಾದರೂ ಸಾಲುವುದಿಲ್ಲ. ಇದನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಒಬ್ಬನಿಗೆ ಸಾಕಷ್ಟು ಜಮೀನಿರಬೇಕು, ಬಹಳ ಹೆಚ್ಚಿಗೆ ಇರ-

ಬಾರದು ಎಂಬ ಉದ್ದೇಶವಿದೆ. ಸೀಲಿಂಗ್ ಮಾಡುವಾಗ ಕ್ರೀಮಂತಿಕೆಯನ್ನು ತಡೆಯಬೇಕೆಂಬ ಉದ್ದೇಶವಿದೆ. ಗೇಣಿದಾರರಿಗೆ ಜಮೀನು ಸಿಕ್ಕಬೇಕು, ಯಾರಿಗೆ ಜಮೀನಿಲ್ಲ, ಯಾರು ವ್ಯವಸಾಯದ ಕೂಲಿ ಮಾಡುವರು ಅವರಿಗೆ ಜಮೀನು ದೊರೆಯಬೇಕು ಎಂಬ ಉದ್ದೇಶವಿದೆ. ಈ ಸಮಾಜದಲ್ಲಿರುವ ವಿಷಮತೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಅದನ್ನು ಕಡಮೆ ಮಾಡಬೇಕಾಗಿದೆ. ಈಗ ನಾಲ್ಕೈದು ತರಗತಿಯಾಗಿ ಜಮೀನನ್ನು ವಿಂಗಡಿಸುತ್ತೇವೆ. ಸಮಾಜದಲ್ಲಿ ಐದಾರು ತರಗತಿಯ ಸಮಾಜದ ವಿಚಾರ ತೆಗೆದುಕೊಂಡರೆ ಸೀಲಿಂಗ್ ಮಾಡಿರುವ ಪ್ರಕಾರ ಭೂಮಾಲೀಕರಿಗೆ ಸೀಲಿಂಗ್ ಸ್ಪಷ್ಟಮಾಡಿಲ್ಲ. ಗೇಣಿದಾರರಿಗೆ ಸೀಲಿಂಗ್ ಮಾಡಿಲ್ಲ.

5-30 P.M.

ಗೇಣಿದಾರ ಹೆಚ್ಚಾಗಿ ಭೂಮಿಯನ್ನು ಮಾಡುವಾಗ ಅವನಿಗೆ ಸಾಕಷ್ಟು ಸುಖ ಇತ್ತು. ಒಬ್ಬನಿಗೆ 20 ಎಕರೆ ನೀವಾವರಿ ಇದ್ದರೆ ಅವನು ಸುಖವಾಗಿ ಇರುತ್ತಿದ್ದ. ಈಗ ನಾವು ಸಮಾಜದಲ್ಲಿ 5—6 ತರಗತಿಯ ಜನರನ್ನು ವಿಚಾರ ಮಾಡುತ್ತಿದ್ದೇವೆ, ಇವರಲ್ಲಿ 2—3 ತರಗತಿ ನಿಜವಾಗಿಯಾ ಬರಬಹುದು, ಇವುಗಳನ್ನು ಮೊದಲನೆಯ ತರಗತಿಗೆ ಕೂಡಿಸಲಿಕ್ಕೆ ಹತ್ತಿದ್ದಾರೆ. ಭೂಮಾಲಿಕರ ತರಗತಿಯೊಳಗೆ ಇವನ್ನು ಕೂಡಿಸಲಿಕ್ಕೆ ಹತ್ತಿದ್ದಾರೆ. ಗೇಣಿದಾರರಿಗೆ ಏನು ಸೀಲಿಂಗ್ ಇರಬೇಕು? ಭೂಮಾಲೀಕನಿಗೆ ಎಷ್ಟು ಸೀಲಿಂಗ್ ಕೊಟ್ಟಿದ್ದಾರೆ? ತಾವು ಅವನಿಗೆ 10 ಎಕರೆಯನ್ನು ಸೀಲಿಂಗ್ ಎಂದು ಇಟ್ಟಿದ್ದೀರಿ, ಅದರ ಅರ್ಧದಷ್ಟು ಸೀಲಿಂಗ್ ಗೇಣಿದಾರನಿಗೂ ಇರಬೇಕು. ಇದರಿಂದ ಭೂಮಿ ಉಳಿತಾಯವಾಗುತ್ತದೆ, ಎಂದು ನಮ್ಮ ಉದ್ದೇಶ ಏನು ಇದೆ ಅದನ್ನು ಈಗಾಗಲೇ ತಾವು ಹೇಳಿದ್ದೀರಿ. ಯಾವ ಭೂಮಿಯೊಳಗೆ ಕಷ್ಟ ಮಾಡುವ ಗೇಣಿದಾರ ಮಾಲೀಕನಾಗಬೇಕು ಎನ್ನುವ ಉದ್ದೇಶ ನಮಗೆ ಇದೆ! ಅದೇ ಕಾಲಕ್ಕೆ ಬಡ ಕೂಲಿಗಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಸಿಕ್ಕಿಲ್ಲ, ಭೂಮಿ ಉಳಿತಾಯವಾಗಬೇಕು. ಭೂಮಾಲಿಕನಿಗೆ, ಗೇಣಿದಾರನಿಗೆ ಸೀಲಿಂಗ್ ಇಟ್ಟರೆ ಕೆಳಗೆ ಇರುವವರಿಗೆ ಏನ ಭೂಮಿಯೂ ದೊರೆಯುವುದಿಲ್ಲ. ಯಾವನು ಕೂಲಿ ಮಾಡುತ್ತಾನೆ ಅವನಿಗೆ ಏನೂ ದೊರೆಯುಲಿಕ್ಕೆ ಸಾಧ್ಯವಿಲ್ಲ. ಇದನ್ನು ತಾವು ಯೋಚನೆ ಮಾಡಬೇಕು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಮೈಸೂರು ಭೂಸುಧಾರಣಾ ಕಾಯಿದೆಯನ್ನು 1961 ರಲ್ಲಿ ಮಾಡಿದರು. ಸರ್ಕಾರಕ್ಕಿಂತ ಅಸಿ.ವಂತರು ಯಾವಾಗಲೂ ಜಾಣರು. ಸರ್ಕಾರದವರು ಕಾಯಿದೆ ಮಾಡುತ್ತಾ ಹೋದರೆ, ಅವರು ಸ್ವಲ್ಪ ಹುಸಿ ಸಿಕ್ಕರು ನುಸುಳಿ ಕೊಂಡರೆ ಸಾಕು ಎಂದಿರುತ್ತಾರೆ. ಅವರು ಎಲ್ಲಾ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. 1961 ರಿಂದ ಇಲ್ಲಿಯವರೆಗೆ ಭೂಮಾಲಿಕರು ಏನು ಏನು ಮಾಬೇಕು ಮಾಡಬೇಕು ಅದನ್ನು ಮಾಡಿರುತ್ತಾರೆ, ಭೂಮಿ ಡಿಕ್ಕಿ ಮಾಡಿರುತ್ತಾರೆ, ಪಾಲು ಮಾಡಿಕೊಂಡಿರುತ್ತಾರೆ, ಯಾರಿಗೆ ಏನು ಕೊಡಬೇಕೋ ಅದನ್ನು ಕೊಟ್ಟಿರುತ್ತಾರೆ. ಇನ್ನುಮೇಲೆ ನೀವು ಭೂಕಾಯಿದೆ ಮಾಡಿದರೆ ನಿಮಗೆ ಅವರು ಯಾವ ರೀತಿಯಿಂದಲೂ ಸಿಕ್ಕಿಕೊಳ್ಳಬಾರದಂತೆ ಮಾಡಿಕೊಂಡು ಕೂತಿರುತ್ತಾರೆ. ಅವರಿಂದ ಹೆಚ್ಚಿಗೆ ಭೂಮಿ ತೆಗೆದುಕೊಳ್ಳುವುದು ಕಷ್ಟ ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹುಚ್ಚಮಾಸ್ತಿಗೌಡರ ಹತ್ತಿರ ಏನೂ ಇಲ್ಲ. ಅವರು ಏನೂ ಮಾಡಿಕೊಂಡಿಲ್ಲ. ಪಾರ್ಟಿ ಪೊಟೆಗ್‌ನಲ್ಲಿ ಆಸ್ತಿಯ ಬಗ್ಗೆ ಹೇಳಿದ್ದರೆ ಸೊತ್ತಾಗುತ್ತಿತ್ತು.

ಶ್ರೀ ಪಿ. ಪಿ. ಹೆಗಡೆ.—ಅದಕ್ಕೆ ಈ ಶಾಸನವನ್ನು 1961 ರಿಂದ ರಾಗು ಮಾಡ ಬೇಕು ಎಂದು ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಈಗ ಮಾಡಿದರೆ ಸರ್ಕಾರಕ್ಕೆ ಯಾವ ಜಮೀನು ದೊರೆಯುವುದಿಲ್ಲ. ಇದರ ಬಗ್ಗೆ ತಾಲ್ಲೂಕಿನ ಸ್ಥಳದಲ್ಲಿ ನೋಡಬೇಕಾದರೆ, ಏಪ್ರಿಲ್ ತಿಂಗಳೊಳಗೆ ಆಲ್ಲಿಗೆ ಸ್ಟಾಫ್ ಬಂದಿಲ್ಲ ಎನ್ನುವ ರಿಪೋರ್ಟ್ ಬಂತು. ಸ್ಟಾಫ್ ಇಲ್ಲ ಎಂದು ಕಾಗದಪತ್ರಗಳನ್ನು ಗಡಿಬಿಡಿ ಮಾಡಿದರು. ಆಗ ಭೂಮಾಲಿಕರು ತಮ್ಮ ಆಸ್ತಿಯನ್ನು ಹೇಗೆ ಹಂಚಬೆಕು ಎಂದು ಜಾಣತನದಿಂದ ತಮ್ಮ ಕೆಲಸವನ್ನು ಆಗಲೇ ಮಾಡಿ ಬಿಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಇನ್ನುಮೇಲೆ ಅವರಿಗಿಂತ ಜಾಣರಾಗಿರಬೇಕು. ಆದ್ದರಿಂದ ಕಾನೂನನ್ನು 1961ರಿಂದ ರಾಗು ಮಾಡಿದರೆ ಕೆಲವೊಂದು ಪ್ರಮಾಣದ ಜಮೀನು ನಮಗೆ ದೊರೆಯುತ್ತದೆ, ಮತ್ತು ಕೆಲವೊಂದು ಪ್ರಮಾಣದ ಜಮೀನನ್ನು ನಾವು ಭೂಹೀನ ಗೆ ಕೊಡಲಕ್ಕೆ ಸಾಧ್ಯವಿದೆ ಎಂದು ನನಗನ್ನಿಸುತ್ತದೆ. ಮತ್ತೊಂದು ವಿಷಯ, ಈಗ ಭೂಮಾಲೀಕರಿಗೆ ಕೊಡಬೇಕಾದ ಭೂಮಿಯ ಕಿಮ್ಮತ್ತು ಏನು ಇದೆ ಅದರ ಬಗ್ಗೆ ಒಂದೆರಡು ಮಾತು ಕೇಳುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಲಾಯ್ ಫಿಷರ್ ಮಹಾತ್ಮ ಗಾಂಧೀಜಿಯವರನ್ನು ಭೇಟಿ ಆಗಿದ್ದ ಮಾತು, ಆಗ ಲಾಯ್ ಫಿಷರ್ ಕೇಳಿದ, ರೈತರಿಗೆ ಮತ್ತು ಭೂಮಾಲೀಕರಿಗೆ ಸಂಬಂಧ ಏನು ಉಳಿಯಬಹುದು

(ಶ್ರೀ ಪಿ. ಪಿ. ಹೆಗರೆ)

ಎಂದು ಅವಕ್ಕೆ ಮಹಾತ್ಮ ಗಾಂಧಿಯವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಗೇಣಿದಾರರು ಭೂಮಾಲೀಕರ ಭೂಮಿಯನ್ನು ಕಸಿದುಕೊಳ್ಳಬೇಕಾಗುತ್ತದೆ ಮತ್ತು ಹಿಂದೂಸ್ಥಾನದಲ್ಲಿ ಕಾಂಪನ್ಸೇಷನ ಕೊಡುವುದಕ್ಕೆ ಶಕ್ಯವಿಲ್ಲ, ಭೂಮಾಲಿಕರು ಶ್ರೀಮಂತರ ಸಂರಕ್ಷಣೆ ಮಾಡುವವರು, ನಮ್ಮ ರಾಷ್ಟ್ರದ ಪರಿಸ್ಥಿತಿ ಈ ರೀತಿ ಇದೆಯೆಂದು ಅವರು ಹೇಳಿದ್ದಾರೆ. ಆದ್ದರಿಂದ ಅವರಿಗೆ ಕಾಂಪನ್ಸೇಷನ್ ಕೊಡುವುದಕ್ಕೆ ಸಾಧ್ಯವಿಲ್ಲ. ಗೇಣಿದಾರರು ಭೂಮಿಯವನ್ನು ಕಸಿದುಕೊಳ್ಳುತ್ತಾರೆ, ಭೂಮಾಲೀಕರು ಹಳ್ಳಿ ಬಿಟ್ಟು ಹೋಗುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವಕ್ಕೆ ನಿಮ್ಮ ಸರ್ಕಾರದವರು ಗಾಂಧೀಜಿಯನ್ನು ಒಪ್ಪುವುದಿಲ್ಲ.

ಶ್ರೀ ಪಿ. ಪಿ. ಹೆಗರೆ.—ನಾವು ನೀವು ಎಲ್ಲರೂ ಅವರನ್ನು ಒಪ್ಪಬೇಕು. ಭೂಮಾಲೀಕರಿಗೆ ಕೊಡುವ ಹಣದೊಳಗೆ ಭೂಮಾಲಿಕರು ಸಿಕ್ಕ ಸಂಧಿಯನ್ನು ಉಪಯೋಗಿಸಿಕೊಂಡು ಜಮೀನನ್ನು ಒಟವಾಣೆ ಮಾಡಿ ಸಾಕಷ್ಟು ಹಣ ಮಾಡಿಕೊಂಡಿದ್ದಾರೆ. ಅವರಿಗೆ ಹಣದ ಕೊರತೆಯಿಲ್ಲ. ಸರ್ಕಾರದವರು ಅವರಿಂದ ಭೂಮಿಯನ್ನು ಕಸಿದುಕೊಂಡು ಅವರಿಗೆ ಹಣವನ್ನು ಕೊಡಬೇಕಾದ ಅವಶ್ಯಕವಿಲ್ಲ. ಆದರೂ ಕಾನೂನಿನಲ್ಲಿ ಅಡ್ಜಿಯಾಗಬಾರದು ಎನ್ನುವ ಉದ್ದೇಶದಿಂದ ಕೊಡಬೇಕಾಗಿದೆ. ಈಗ ತಾವು ಕಾನೂನಿನಲ್ಲಿ ಏನು ಮಾಡಿದ್ದೀರಿ ಎಂದರೆ, ಮೊದಲನೆಯ ಸಲ ವಾರ್ಷಿಕ ಉತ್ಪನ್ನ ಐದು ಸಾವಿರ ರೂಪಾಯಿ ಇದ್ದರೆ 15 ಪಟ್ಟು ಕೊಡಬೇಕು ಎಂದು ಮಾಡಿದ್ದಾರೆ. ಇದಕ್ಕೆ 10 ಪಟ್ಟು ಕೊಟ್ಟರೆ ಸಾಕು. ಎರಡನೆಯ ಸಾಲಿಗೆ 12 ಪಟ್ಟು ಕೊಡಬೇಕು ಎಂದು ಮಾಡಿದ್ದಾರೆ, ಇದಕ್ಕೆ ಐವತ್ತು ಕೊಟ್ಟರೆ ಸಾಕು ಎಂದು ನಾನು ಹೇಳುತ್ತೇನೆ. ಇದಕ್ಕಿಂತ ಹೆಚ್ಚಿನ ಉತ್ಪನ್ನದಾರರಿಗೆ ಎರಡು ಪಟ್ಟು ಕೊಟ್ಟರೆ ಸಾಕು. ಭೂಮಾಲೀಕರು ನಾವು ಏನಾದರೂ ಕಾಂಪನ್ಸೇಷನ್ ಮೂಲಕ ಹಣ ಕೊಟ್ಟರೆ ಅವರು ಜೀವನ ಮಾಡಬೇಕು ಎನ್ನುವ ಉದ್ದೇಶವಿಲ್ಲ. ಆದಕ್ಕೆ ಸರ್ಕಾರದವರು ಇದನ್ನು ವಿಚಾರ ಮಾಡಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಾವು ಪರ್ಸನಲ್ ಕಲ್ಟಿವೇಷನ್ ಬಗ್ಗೆ ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ಊಳುವವನೆ ಭೂಮಿಯ ಒಡೆಯನಾಗಬೇಕು ಎಂದು ಹೇಳುತ್ತಾ ಬಂದಿದ್ದೇವೆ. ಆ ಪ್ರಕಾರವಾಗಿ ಅವರಿಗೆ ಭೂಮಿಯನ್ನು ಕೊಡಲಿಕ್ಕೆ ಹತ್ತಿದ್ದೇವೆ. ಸ್ವಂತ ಸಾಗುವಳಿ ಮಾಡುವವರಿಗೆ ಒಂದು ವಾಖ್ಯ ಏನು ಇದೆ, ಅದು ವಿಚಿತ್ರ ವಾಖ್ಯವಾಗಿ ಬಿಟ್ಟಿದೆ. ಇದು ಫಂಡಮೆಂಟರ್ ರೈಟ್ಸ್ ಮತ್ತು ಡೈರೆಕ್ಟೀವ್ ಪ್ರಿನ್ಸಿಪರ್ಸ್ ಅತ್ತ ವಾದ ಹೋಗಿದೆ. ಇದುವರೆಗೂ ಯಾವ ರೀತಿಯ ಉದ್ದೇಶ ಇದರ ಬಗ್ಗೆ ಇರಲಿಲ್ಲ. ಸೆಲ್ಫ್ ಕಲ್ಟಿವೇಷನ್ ಶಬ್ದ ಇಂಗ್ಲೀಷಿನೊಗೆ ಇದ್ದುದು ಬೆಂಗಳೂರ್‌ವರೆಗೂ ಬಂದಿವೆ ಎನ್ನುವ ಅರ್ಥವಲ್ಲ, ಆದರೆ ಈಗ ಆ ಅರ್ಥವಾಗಲಿಕ್ಕೆ ಹತ್ತಿದೆ. ಯಾರು ಬೇಕಾದರೂ ಜಮೀನು ಮಾಡುವುದಕ್ಕೆ ಹೋಗಬಹುದು. ನಮ್ಮಲ್ಲಿ ಪ್ರಗತಿ ಸಾಕಷ್ಟು ಆಗಿದೆ. ಈ ಬಿಲ್ಲಿನಲ್ಲಿ 16 ಕಿಲೋ ಮೀಟರಿನ ಅತಂಕ ಒಂದನ್ನು ಹಾಕಿದ್ದರು. ಅದು ಒಂದು ರೀತಿಯ ಯೋಗ್ಯವಾಗಿತ್ತು. ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಅದನ್ನು ತೆಗೆದು ಬಿಟ್ಟಿದ್ದಾರೆ. ಇದನ್ನು ಯಾವ ಅರ್ಥದಿಂದ ತೆಗೆದುಬಿಟ್ಟಿದ್ದಾರೋ ಏನೋ ನನಗೆ ಅರ್ಥವಾಗಲೊಲ್ಲದು. ಇದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಕೆಲವು ಜಮೀನ್ದಾರರು ಹಳ್ಳಿಯೊಳಗೆ ಜಮೀನನ್ನು ಇಟ್ಟುಕೊಂಡಿರುತ್ತಾರೆ, ಅವರು ಹೊಸ ಹೊಸ ಉದ್ಯೋಗಗಳನ್ನು ಮಾಡುತ್ತಾ ಪಟ್ಟಣಗಳಲ್ಲಿಯೋ ಅಥವಾ ಬೇರೆ ಕಡೆಗಳಲ್ಲಿ ಸಾಕಷ್ಟು ಹಣವನ್ನು ಸಂಪಾದಿಸಿರುತ್ತಾರೆ. ಅವರಿಗೆ ಭೂಮಿಯ ಪರಿವೇ ಇಲ್ಲ, ಅಂಥವರನ್ನು ಇದರಿಂದ ತಪ್ಪಿಸಬೇಕು. ಒಂದು ಕಾಲಕ್ಕೆ ನಮ್ಮ ಸಂಸ್ಥೆಯವರು ಹೇಳುತ್ತಿದ್ದರು, ಒಬ್ಬರು ಒಂದೇ ಉದ್ಯೋಗ ಮಾಡಬೇಕೆಂದು? ಅದಕ್ಕೆ ಅನುಸಾರವಾಗಿ 16 ಕಿಲೋ ಮೀಟರ್ಸ್ ಮಾಡಿದ್ದು ಇರಬೇಕಾಗಿತ್ತು. ಅದನ್ನು ತೆಗೆದು ಹಾಕುವುದರಿಂದ, ಈಗ ಶ್ರೀಮಂತ ಶ್ರೀಮಂತನಾಗುತ್ತಾ ಹೋಗುವುದು ಬಡವ ಬಡವನಾಗುತ್ತಾ ಹೋಗುವುದು ತಪ್ಪಿಲ್ಲ. ನೀವು ಬಾಯಲ್ಲಿ ಹೇಳುತ್ತೀರಿ. ಆಸ್ತಿ ಇರುವವರ ಕೈಯಲ್ಲಿ ಶಕ್ತಿ ಇರುತ್ತದೆ. ಅವರು ಅದನ್ನು ಉಪಯೋಗ ಮಾಡುತ್ತಾರೆ. ಸಂಪತ್ತು ಕೆಲವೇ ಜನರ ಕೈಯಲ್ಲಿ ಇದ್ದರೆ ಸಮಾಜವಾದ ಬರುವುದಕ್ಕೆ ಸಾಧ್ಯವಿಲ್ಲ, ಬಡತನ ಹೋಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳು ಇದನ್ನು ವಿಚಾರ ಮಾಡಬೇಕು. 16 ಕಿಲೋ ಮೀಟರ್ಸ್ ಏನು ಒಂದು ಕಂಡೀಷನ್ ಹಾಕಿದ್ದೀರಿ. ಅದನ್ನು ಕಾಯ್ದುಬೇಕು. ಅದು ಹೋಗುವುದರಿಂದ ಶ್ರೀಮಂತರಿಗೆ ಅನುಕೂಲವಾಗಿ, ಅವರು ಇನ್ನೂ ಶ್ರೀಮಂತರಾಗುವುದಕ್ಕೆ ಅವಕಾಶ ಮಾಡಿದ ಹಾಗಾಯಿತು, ಅದನ್ನು ತಪ್ಪಿಸಬೇಕು.

ಮತ್ತೊಂದು ವಿಷಯ. ಮೊದಲು ಮಾನ್ಯ ಮಂತ್ರಿಗಳನ್ನು ಈ ಬಿಲ್ಲನ್ನು ಮಂಡಿಸಿದಾಗ 12 ಸಾವಿರ ರೂಪಾಯಿ ವಾರ್ಷಿಕ ಉತ್ಪನ್ನವನ್ನು ಈ ಬಿಲ್ಲಿನಲ್ಲಿ ಹಾಕಿದ್ದರು, ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಅದನ್ನು ತೆಗೆದುಹಾಕಿದ್ದಾರೆ. ನಿಮ್ಮ ಬಿಲ್ಲಿನ ಪ್ರಕಾರ ಭೂಮಾಲೀಕರಿಗೆ 12 ಸಾವಿರ ರೂಪಾಯಿ ವಾರ್ಷಿಕ ಉತ್ಪನ್ನ ಇದ್ದರೆ ಮತ್ತು 10 ಎಕರೆ ಭೂಮಿ ಇದ್ದರೆ ಅವರು 10 ಎಕರೆ ಭೂಮಿಯ ಮಾಲೀಕನಾಗಬಹುದು. ಅವನಿಗೆ ಮತ್ತಷ್ಟು ಆಸ್ತಿ ಮಾಡಲು ಅನುಕೂಲ ಮಾಡಿ ಕೊಟ್ಟ ಹಾಗಾಗುತ್ತದೆ. ಸಂಪತ್ತು ಆಸ್ತಿ ಕೆಲವೇ ಜನರ ಕೈಯಲ್ಲಿ ಹೆಚ್ಚಾಗುತ್ತಾ ಹೋಗಬಾರದು ಎನ್ನುವ ನಮ್ಮ ಮೂಲ ಉದ್ದೇಶ ಮರೆಯಬಾರದು. ಆಸ್ತಿ ಸಂಪತ್ತು ಒಂದೆಡೆ ಸೇರಬಾರದು ಅದನ್ನು ತಪ್ಪಿಸಬೇಕು. ಆಸ್ತಿ ಯಾರಿಗೆ ಇಲ್ಲವೋ ಅವರಿಗೆ ದೊರೆಯಬೇಕು ಎನ್ನುವುದು ಉದ್ದೇಶವಿದೆ. ಆಸ್ತಿ ಇರುವವರಿಗೆ ಅನುಕೂಲ ಮಾಡಿಕೊಟ್ಟರೆ ನಿಮ್ಮ ಮೂಲ ಉದ್ದೇಶ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದೇ ಬಡ ಜನರು ಮುಂದೆ ತರುವುದು ಆಧಾರ ಇರುವುದಿಲ್ಲ. ಮತ್ತೊಂದು ಈ ಬಿಲ್‌ನೊಳಗೆ ಕೂಲ ಮಾಡುವವರಿಗೆ ವಿಶೇಷವಾಗಿ ಏನೂ ಮಾಡಿಲ್ಲ. ಭೂಮಿ ಮೇಲೆ ಕೂಲಿ ಮಾಡಿ ಹೊಟ್ಟೆ ತುಂಬಿಕೊಳ್ಳುವಂಥ ಜನರಿಗೆ ಯಾವ ಅಶೆಯನ್ನು ಇದರಲ್ಲಿ ತೋರಿಸಿಲ್ಲ. ಯಾವ ಮಾರ್ಗವನ್ನೂ ತೋರಿಸಿಲ್ಲ. ಭೂಮಿ ಅಂತೂ ಅವನಿಗೆ ಸಿಕ್ಕುವುದಿಲ್ಲ ಎಂದು ಆಕ್ಟ್‌ನಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಭೂಮಿ ಮೇಲೆ ಕೂಲಿ ಮಾಡುವಂಥ ಕೂಲಿಗಾರ ಸರ್ಕಾರ ಏನು ಹೇಳುತ್ತದೆ ಎಂದು ದಾರಿ ನೋಡಿಕೊಂಡು ಕೂತಿದ್ದಾನೆ. ಭೂಸುಧಾರಣೆ ಮಾಡುತ್ತೇವೆ ಭೂಸುಧಾರಣೆ ಮಾಡಿದ ಬಳಿಕ ಹೆಚ್ಚಿನ ಭೂಮಿ ನಿಮಗೆ ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದೀರಿ, ಅದಕ್ಕಾಗಿ ನೀವೇ ಸರ್ಕಾರವಾಗಿ ಎಂದು. ನಿಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಇನ್ನು ಮುಂದೆ ಜನಕ್ಕೆ ನಾವು ಏನು ಹೇಳೋಣ ? ಅವರಿಗೆ ಹೇಗೆ ಸಹಾಯ ಮಾಡಬೇಕು ? ಸರ್ಕಾರಕ್ಕೆ ಒಂದು ಏನಂತಿ ಮಾಡಿಕೊಳ್ಳುತ್ತೇನೆ. ಭೂ ಶಾಸನ ಮಾಡಿದೆ ರೀತಿಯಲ್ಲಿ ಗೇಣಿದಾರನನ್ನು ಭೂಮಾಲೀಕನಾಗಿ ಮಾಡುವ ಉದ್ದೇಶ ಇಟ್ಟುಕೊಂಡಿದ್ದೀರಿ. ಆ ರೀತಿಯ ಭೂಮಿ ಮೇಲೆ ಕೂಲಿ ಕೆಲಸ ಮಾಡುವವರಿಗೆ ಕನಿಷ್ಠ ಪಗಾರ ಸಿಗುವ ಹಾಗೆ ಕಾಯಿದೆ ಮಾಡಿರಿ. ಕೂಲಿಮಾಡತಕ್ಕ ಬಡವ ಹೆಚ್ಚಿಗೆ ಆಸೆ ಮಾಡುವುದಿಲ್ಲ. ಹೊಟ್ಟೆಗೆ ಅನ್ನ ಸಿಗಬೇಕು, ಮೈಗೆ ಬಟ್ಟೆ ಸಿಗ ಬೇಕು ಮತ್ತು ಇರಲಕ್ಕೆ ಮನೆ ಸಿಗಬೇಕು. ಅಷ್ಟೇ ಆಶೆ ಮಾಡುತ್ತಾನೆ. ಇಷ್ಟು ಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಘಟನೆಯೊಳಗೆ ಸ್ಪಷ್ಟವಾಗಿ ಬರೆದು ಇಟ್ಟಿದ್ದಾರೆ. ಆದರೆ, ಸಂವಿಧಾನದೊಳಗೆ ಇರುವುದನ್ನು ಜಾರಿಗೆ ತರಲಕ್ಕೆ ಆಗಿಲ್ಲ, ಇನ್ನು ಮುಂದೆ ತರಬೇಕು. ಒಂದೆರಡು ಮಾನಸೀಯ ಹಕ್ಕನ್ನು ಅಪಾರ್ಥ ಮಾಡಿಕೊಂಡು ಸರ್ಕಾರ ಕಾಯಿದೆ ಮಾಡುವಲ್ಲಿಕ್ಕೆ ಅಡಚಣೆ ಇತ್ತು. ಅವು ಎಲ್ಲಾ ಈಗ ಹೋಗಿವೆ. ಸರ್ಕಾರ ಈಗ ಏನು ಬೇಕಾದರೂ ಮಾಡಲು ಶಕ್ಯ ಇದೆ. ಬಡ ಕೂಲಿಗಾರ ಜನರಿಗೆ ವಿಳಂಬವಿಲ್ಲದೆ ಸ್ಥಿಯಾದ ಪಗಾರ ದೊರೆಯುವಂತೆ ಮಾಡಬೇಕು. ಜೀವನದಲ್ಲಿ ಅವರು ರಾಷ್ಟ್ರದ ಪ್ರಜೆಗಳು ಎನ್ನುವ ಆತ್ಮೋಭಾವನೆ ಬರುವಂತೆ ಮಾಡಬೇಕು. ಪ್ರತಿಯೊಂದು ಶಹರ ಸಂಪತ್ತಿನ ಮೇಲೆ ಮಿತಿ ಹಾಕಬೇಕು ಎಂಬ ವಾದ ಸರ್ಕಾರದ ಮುಂದೆ ಬಂದಿದೆ. ಅದನ್ನು ಕೂಡ ಮಾಡಿರಿ. ಎಲ್ಲವನ್ನೂ ಒಂದೇ ಸಲ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವಾಗಲಾದರೂ ಮಾಡಬೇಕು. ಒಂದೊಂದೇ ಮಾಡುತ್ತಾ ಹೋಗಬೇಕು, ಅದನ್ನೂ ನಿರೀಕ್ಷಿಸಬೇಕು. ಆ ಮೇಲೆ ಮತ್ತೊಂದಕ್ಕೆ ಕೈ ಹಾಕಬೇಕು. ಸರ್ಕಾರ ಭೂ ಶಾಸನ ಮಾಡಿದೆ ರೀತಿಯಲ್ಲಿ ಶಹರಿ ಸಂಪತ್ತಿಗಳ ಮೇಲೆ ಮಿತಿ ಹಾಕುವುದನ್ನು ಕೈಗೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬಿಲ್ಲಿನ ಪ್ರಕಾರ ಸರ್ಕಾರ ಶಿಕ್ಷಣ ಸಂಸ್ಥೆಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ ಯಾವುದಕ್ಕೂ ವಿನಾಯಿತಿ ಕೊಟ್ಟಿಲ್ಲ. ಅದು ಅತ್ಯಂತ ಸಂತೋಷದ ಸಂಗತಿ. ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿವೆಂದು ಹೇಳುತ್ತಾರೆ. ಆದರೆ ನಮ್ಮಲ್ಲಿರುವ ಶಿಕ್ಷಣ ಸಂಸ್ಥೆಗಳು ಜಾತಿ ಆಧಾರದ ಮೇಲೆ ನಿಲ್ಲುತ್ತವೆ. ಅದರಿಂದ ಇಡೀ ಸಮಾಜಕ್ಕೆ ಉಪಯೋಗವಿಲ್ಲ. ಉಳಿದ ಸಾಮಾಜಕ್ಕೆ ಅವುಗಳ ಬಗ್ಗೆ ವಿನಾಯಿತಿ ಕೊಡದೇ ಇರುವುದು ಆನಂದದ ಸುದ್ದಿ., ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದೇ ರೀತಿ ಧಾರ್ಮಿಕ ಸಂಸ್ಥೆಗಳಿಗೂ ಏನೂ ಮಾಡಬೇಕಾಗಿಲ್ಲ. ನಮ್ಮನ್ನು ದೇವರೇ ಹುಟ್ಟಿಸಿದ್ದಾನೆ ಎಂದು ಹೇಳುವುದು, ದೇವರೇ ನಮಗೆ ಹೊಟ್ಟೆಗೆ ಹಾಕುತ್ತಾನೆ. ದೇವರ ಸಲುವಾಗಿ ಮಾನವ ದುಡಿಯುವುದು ಅವನ ಕರ್ತವ್ಯ ಎಂದು ಕೆಲವರು ಹೇಳುತ್ತಾರೆ. ದೇವರ ಸಲುವಾಗಿ ನಾವು ಏನೂ ಮಾಡಬೇಕಾಗಿಲ್ಲ. ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿ ಕೊಡದೇ ಇರುವುದು ಸಂತೋಷದ ಸಂಗತಿ. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ.

ಇನ್ನು ಪ್ಲಾಂಟೇಷನ್‌ಗಳಿಗೆ ಸರ್ಕಾರ ಒಂದು ವಿನಾಯಿತಿ ತೋರಿಸಿದೆ. ಮೊನ್ನೆ ನನ್ನ ಮಿತ್ರರೊಬ್ಬರು ಹೇಳಿದರು ಅಲ್ಲಿ ಕಾಫೀ ಬೆಳೆಯುವ ರೀತಿ ಬೇರೆ ಇದೆ ಎಂದು ಹೇಳಿದರು...

ಶ್ರೀ ಕೋಣಂದೂರು ಲಿಂಗಪ್ಪ.—1500 ಜನ ಡೊಡ್ಡ ಪ್ಲಾಂಟರ್ಸ್‌ಗೆ ರಕ್ಷಣೆ ಕೊಡುವುದೇ ಹೊರತು, ಇತರ 40—50 ಸಾವಿರ ಜನ ಪ್ಲಾಟರ್ಸ್ ಏನು ಇದ್ದಾರೆ ಅವರ ಬಗ್ಗೆ ಕಾಳಜಿ ಇಲ್ಲ.

ಶ್ರೀ ಪಿ. ಪಿ. ಹೆಗರೆ.—ಟೆಕ್ನಿಕಲ್ ಡಿಫಿಕಲ್ಟೀಸ್ ಇದ್ದರೆ ಮಾಡುವುದು ಜೇರೆ ವಿಚಾರ. ಗೇಣಿದಾರರಿಗೆ ಈ ಜಮೀನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದರೆ ಸರ್ಕಾರವೇ ಈ ಪ್ಲಾಂಟೇಷನಗಳನ್ನು ಕೈಗೆ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಬಾಕಿ ಎಲ್ಲರ ಮೇಲೆ ನಿಯಂತ್ರಣ ಹಾಕುವುದು, ಪ್ಲಾಂಟೇಷನ್ ಮಾಡುವವರನ್ನು ಬಿಟ್ಟು ಬಿಡುವುದು ದೊಡ್ಡ ಅನ್ಯಾಯವಾಗುತ್ತದೆ. ಪ್ಲಾಂಟೇಷನ್ ಮೇಲೆ ನಿರ್ಬಂಧ ಹಾಕುವುದು ಒಳ್ಳೆಯದು. ಶುಗರ್ ಫ್ಯಾಕ್ಟರಿ ಮೇಲೆ ಲಿಮಿಟ್ ಹಾಕಿದ್ದೀರಿ. ಅವರಿಗೆ ಬೀಜಿದ ಸಲುವಾಗಿ, ರೀಸರ್ಚ್ ಸಲುವಾಗಿ 50 ಎಕರೆ ಬಿಟ್ಟಿದ್ದೀರೆಂದು ಕಾಣುತ್ತದೆ. 50 ಎಕರೆ ಲಿಮಿಟ್ ಹಾಕಿರುವುದು ಆನಂದದ ಸಂಗತಿ. ಕಡೆಗೆ ನಾನು ಒಂದು ಸೂಚನೆ ಸರ್ಕಾರಕ್ಕೆ ಮಾಡಬಯಸುತ್ತೇನೆ. ಮತ್ತು ಎಚ್ಚರಿಕೆ ಕೊಡಬಯಸುತ್ತೇನೆ. ಈ ರೀತಿ ಪರಿಮಿತಿ ಹೆಚ್ಚಿಗೆ ಇಟ್ಟರೆ, ನಮ್ಮಲ್ಲಿ ಬಡತನ ನಿವಾರಣೆ ಪೂರ್ಣ ಏನಿತ್ತು ಅದನ್ನು ಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ನಮ್ಮಲ್ಲಿ ಸಮಾಜವಾದ ಬರಲಿಕ್ಕೆ ಸಾಧ್ಯವಿಲ್ಲ. ಈಗ ನಮ್ಮ ರಾಜ್ಯದೊಳಗೆ 100ಕ್ಕೆ 60ರಷ್ಟು ಜನ ಹೇಗೋ ಬದುಕಿದ್ದಾರೆ. ಇನ್ನು 40 ರಷ್ಟು ಜನಕ್ಕಂತು ಒಪ್ಪೊತ್ತಿಗೆ ಒಂದು ಉಟ ಕೂಡ ಸಿಗುವುದಿಲ್ಲ. 100ಕ್ಕೆ 10ರಷ್ಟು ಜನರ ಕೈಯೊಳಗೆ ಶೇಕಡ 50 ರಷ್ಟು ಜಮೀನು ಇದೆ. ಇದು ಜ್ವಾಪಕದಲ್ಲಿರಬೇಕು. 90 ಪರ್ಸೆಂಟ್ ಜನರಲ್ಲಿ ಉಳಿದ ಶೇಕಡ 50 ರಷ್ಟು ಜಮೀನು ಇದೆ. ಶೇಕಡ 60 ರಷ್ಟು ಜನರಿಗೆ 5 ಎಕರೆ ಒಳಗೆ ಭೂಮಿ ಇರುತ್ತದೆ. ನೀವು ಲ್ಯಾಂಡ್ ಡಿಫಾರ್ಮ್ ಏನು ಮಾಡಿದ್ದೀರಿ, ಅದ್ದರಿಂದ 3 ಪರ್ಸೆಂಟ್ ಹೆಚ್ಚಿಗೆ ಜನರಿಗೆ ಲಾಗುವಾಗುವುದಿಲ್ಲ. ಇದು ಸರ್ಕಾರಕ್ಕೆ ಗೊತ್ತಿದೆ. ನಾನು ಹೇಳಿದಂತೆ ಮಾಡಿದರೆ 10 ಪರ್ಸೆಂಟ್ ಜನರಿಗೆ ಲಾಗುವಾಗುವುದಕ್ಕೆ ಅಡ್ಡಿಯಿಲ್ಲ. ಈ ವಿಷಯದಲ್ಲಿ ಪಂಡಿತ ಜವಹರಲಾಲ್ ನೆಹರೂರವರು ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ.

Mr. DEPUTY SPEAKER.—Though I like it very much, ಅದು ಈ ಸಂದರ್ಭದಲ್ಲಿ ಬರುವುದಿಲ್ಲ.

ಶ್ರೀ ಪಿ. ಪಿ. ಹೆಗರೆ.—ನಾವು ಸಮಾಜವಾದದ ಹಾವಿಯನ್ನು ಹಿಡಿದುಕೊಂಡು ಹೊರಟಿದ್ದೇವೆ. ಈ ಸಮಾಜವಾದ ಇದರಿಂದ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ, ಎಷ್ಟು ಬಡ ಜನರಿಗೆ ಉಪಯೋಗವಾಗುತ್ತದೆ ಎನ್ನುವುದನ್ನು ನೋಡಬೇಕು. ಲ್ಯಾಂಡ್ ರಿಫಾರ್ಮ್ಸ್‌ನಿಂದ ಒಂದಿಷ್ಟು ಜನರಿಗೆ ಅನುಕೂಲವಾಗಬಹುದು. ಗೇಣೀದಾರರಿಗೆ ಮಾಲೀಕನ ಹಕ್ಕು ಸಿಗಬಹುದು. ಆದರೆ ಕೂಲಿ ಕೆಲಸ ಮಾಡುವವರಿಗೆ ಏನೂ ದೊರೆಯುವುದಿಲ್ಲ. ಇವರ ಪ್ರಶ್ನೆಯನ್ನು ಯಾವ ರೀತಿ ಬಿಡಿಸಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡಲಿ. ನಾನು ಸೂಚನೆ ಮಾಡಿದ ಪ್ರಕಾರ ಗೇಣೀದಾರರಿಗೆ ಸೀಲಿಂಗ್ ಜೇರೆ ಮಾಡಬೇಕು. ಅವರಿಗೆ ಪೂರ್ಣ ಸೀಲಿಂಗ್ ಭೂಮಿ ಕೊಡುವ ಅವಶ್ಯಕತೆ ಇಲ್ಲ. ಈಗ ನೀವು 10 ಎಕರೆ ಸೀಲಿಂಗ್ ಏನು ಸೂಚನೆ ಮಾಡಿದ್ದೀರಿ, ಅದು 6 ಎಕರೆ ಸಾಕು. ತಾವು ಹೇಳಿದ ಪ್ರಕಾರ 10 ಎಕರೆ ಭೂಮಾಲೀಕರಿಗೆ ಇಡುವುದಾದರೆ, ಗೇಣೀದಾರರಿಗೆ 5 ಎಕರೆ ಸೀಲಿಂಗ್ ಇಟ್ಟರೆ ಸಾಕು. ಭೂಮಾಲೀಕರಿಗೆ 6 ಎಕರೆ ಸೀಲಿಂಗ್ ಮಾಡಿದರೆ ಗೇಣೀದಾರರಿಗೆ 3 ಎಕರೆ ಮಾಡಿರಿ. ಇದರಿಂದ ಕೆಲವೊಂದು ಜಮೀನು ಉಳಿದು ಕೆಳಗಿನ ಜನರಿಗೆ ಕೊಡಲಿಕ್ಕೆ ಸಾಧ್ಯವಾದೀತು. ಚಿಕ್ಕ ಮಕ್ಕಳು, ಮಹಿಳೆಯರು ಎಲ್ಲ ಸೇರಿ 5 ಜನರ ಕುಟುಂಬ ಆಗಬೇಕು. 5 ಜನಕ್ಕಿಂತ ಹೆಚ್ಚಿಗೆ ಕುಟುಂಬದ ಸಂಖ್ಯೆ ಇದ್ದರೆ, ಅವರು ಚಿಕ್ಕವರೇ ಇರಲಿ, ದೊಡ್ಡವರೇ ಇರಲಿ, ಪ್ರತಿಯೊಬ್ಬರಿಗೂ ಎರಡು ಎಕರೆ ಕೊಡಿರಿ. ಹಾಗೆ ಮಾಡಿದರೆ ಕೆಳಮಟ್ಟದಲ್ಲಿರುವ ಜನರಿಗೆ ಭೂಮಿ ಕೊಡಲು ಸಾಧ್ಯವಾಗುತ್ತದೆ. ನೀವು ಕಲ್ಪನೆ ಮಾಡಿದಂತೆ ಒಂದು ಕುಟುಂಬದೊಳಗೆ ಗಂಡ ಹೆಂಡತಿ ಚಿಕ್ಕ ಮಕ್ಕಳು ಸೇರಿ 5 ಜನ ವಯಸ್ಕರು ಇದ್ದರೆ, 60 ಎಕರೆ ಭೂಮಿ ಒಂದು ಮನೆತನಕ್ಕೆ ಹೋಯಿತು ಅಂದರೆ ಜಮೀನು ಎಲ್ಲಿಂದ ಬರಬೇಕು. ಇದು ಅತ್ಯಂತ ದೋಷಪೂರ್ಣ ಬಿಲ್. ಇದರಲ್ಲಿ 'ಕುಟುಂಬ' ಡಿಫಿನೇಷನ್ ಆಗಬೇಕು. ಸಣ್ಣವರು, ದೊಡ್ಡವರು ಕೂಡಿಸಿ 5 ಜನರ ಕುಟುಂಬ ಮಾಡಬೇಕೆಂದು ನಾನು ಏನಂತಿ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರು ಗಂಟೆ ಹೊಡೆಯಲಿಕ್ಕೆ ಹತ್ತಿದ್ದಾರೆ, ವಾರ್ನಿಂಗ್ ಕೊಡುತ್ತಿದ್ದಾರೆ. ನಾನು ಬೇಗ ಭಾಷಣವನ್ನು ಮುಗಿಸುತ್ತೇನೆ.

ಅಬ್ರಾಹಂ ಲಂಕನ್ನನು ನೀಗ್ರೋ ವಿಚಾರ ಮಾತನಾಡುವಾಗ ಒಂದು ವಾರ್ನಿಂಗ್ ಕೊಟ್ಟಿದ್ದಾನೆ. "A house divided against itself, half free and half slave, cannot endure." ಎಂದು ಹೇಳಿದ್ದಾನೆ. ನಮ್ಮ ಸರ್ಕಾರ ಬಡ ಜನರ ವಿಷಯವಾಗಿ ಒಂದು ನಿರ್ದಿಷ್ಟ

ಬಾವ ಧೋರಣೆ ತಾಳಬೇಕು. ಇದನ್ನು ಮನಸ್ಸಿನೊಳಗೆ ಇಟ್ಟು ಬಡ ಜನರಿಗೆ ಯಾವ ರೀತಿ ಅನುಕೂಲ ಮಾಡಬೇಕು ಎಂಬುದನ್ನು ವಿಚಾರಮಾಡಿ ಯೋಗ್ಯ ಕಾರ್ಯಕ್ರಮ ಕೈಗೊಳ್ಳಲಿ ಎಂದು ವಿನಂತಿ ಮಾಡಿಕೊಂಡು, ಈ ಅಮೆಂಡ್‌ಮೆಂಟ್ ಬಿಲ್ಲನ್ನು ತಂದಿದ್ದಕ್ಕಾಗಿ, ಸರ್ಕಾರಕ್ಕೆ ಅಭಿನಂದಿಸಿ ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Deputy Speaker, Sir—The Mysore Land Reforms Amendment Bill is placed by the Hon'ble Revenue Minister before this august House. It is not a great achievement nor a radical change, but yet, I want to support this Bill whole-heartedly. The late Prime Minister, Pandit Jawaharlal Nehru conceived this idea of land reforms and he appointed the late Dr. Rajendra Prasad, the then President of the Congrses party to be the Chairman of the Committee, but the land reforms did not come into force during his time. I must congratulate the present Prime Minister. She has taken a bold step to direct all the States to bring this Land Reforms Bill before 31st December 1972. Most of the States have passed the Land Reforms Bill. Some of the States have not passed it. I compliment the Hon'ble Revenue Minister and the Joint Select Committee. They have worked day in and day out and the Committee has held 43 sittings. I congratulate the Members of the Committee, who have made some good suggestions regarding the Land Reforms Bill. They have given a go-by to the '16 kilometers' provision because, this is an era, when we have so many conveyances. We have got cars and aeroplanes and we can move anywhere. The world is very small now-a-days. So, that is a good stand taken by the Joint Select Committee.

Another thing. Regarding income of 12,000 rupees. In Maharashtra also, a man whose net income is 12,000 rupees per year, can hold the land but he cannot acquire the land. The same thing the Joint Select Committee has done. It is a good thing.

Mr. DEPUTY SPEAKER.—Mr. Sayanak will continue his speech to-morrow. The House now stands adjourned to meet to-morrow at 1 P.M.

The House adjourned at Six of the Clock to meet again at One of the Clock on Tuesday the 15th May 1973.